# ಕರ್ನಾಟಕ ಸರ್ಕಾರ

# ಮಹಿಳಾ ಸಶಕ್ತೀಕರಣ ರಾಜ್ಯ ಕಾರ್ಯನೀತಿ –೨೦೧೬

**ಪರಿವಿಡಿ**


೧. ಪ್ರಸ್ತಾವನೆ

೨. ದೂರದೃಷ್ಟಿ

೩. ಧ್ಯೇಯಗಳು

೪. ಉದ್ದೇಶಗಳು

೫. ಆದ್ಯತಾ ಕ್ಷೇತ್ರಗಳು

೫.೧ ಆರ್ಥಿಕ ಸಬಲೀಕರಣ

೫.೧೧. ಬಡತನದ ಸ್ತ್ರೀಕರಣ

೫.೧.೨. ಕೃಷಿ

೫.೧.೩. ಕೈಗಾರಿಕೆ ಮತ್ತು ಸೇವೆ

೫.೧.೪ ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ ಶ್ರಮ ಮತ್ತು ಉದ್ಯೋಗ

೫.೧.೫. ಸಾಮರ್ಥ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ

೫.೧.೬. ಸೂಕ್ಷ್ಮ ಸಾಲ ಮತ್ತು ಸ್ವ– ಸಹಾಯ ಗುಂಪುಗಳು

೫.೨ ಸಾಮಾಜಿಕ ಸಶಕ್ತೀಕರಣ

೫.೨.೧. ಶಿಕ್ಷಣ

೫.೨.೨. ಆರೋಗ್ಯ ಮತ್ತು ಪೌಷ್ಟಿಕತೆ

೫.೨.೩. ಶಕ್ತಗೊಳಿಸುವ ಪರಿಸರ ( ಮನೆ, ಕುಡಿಯುವ ನೀರು, ನೈರ್ಮಲ್ಯ, ಸಾಮಾಜಿಕ ಭದ್ರತೆ, ಸಂಸ್ಕೃತಿ, ಕ್ರೀಡೆ, ಸಾರಿಗೆ ಸಂಪರ್ಕ ಮತ್ತು ಮಾಧ್ಯಮ)

೫.೨.೪. ಕಾನೂನಿನ ಅನುಷ್ಠಾನ ಮತ್ತು  ಜಂಡರ್ ಆಧಾರಿತ ದೌರ್ಜನ್ಯ

೫.೩. ಆಡಳಿತ, ನಿರ್ಧಾರ ಕೈಗೊಳ್ಳುವಿಕೆ ಮತ್ತು ರಾಜಕೀಯ ಸಬಲೀಕರಣ

೫.೪ ದುರ್ಬಲ ವರ್ಗದವರಿಗೆ ಸಾಮಾಜಿಕ ಮತ್ತು ಆರ್ಥಿಕ ಮಧ್ಯಪ್ರವೇಶೀಕೆ

೬. ಪರಿಸರ ಮತ್ತು ವಾಯುಗುಣ ಬದಲಾವಣೆ

೭. ಕಾರ್ಯಗತಗೊಳಿಸುವಿಕೆ

೭.೧. ಕ್ರಿಯಾ ಯೋಜನೆ

೭.೨. ಜಂಡರ್ ಮುಖ್ಯವಾಹಿನಿಗೊಳಿಸುವಿಕೆ

೭.೩. ಕಾನೂನು

೭.೪. ಜಂಡರ್ ವಿಂಗಡಣಾ ದತ್ತಾಂಶವನ್ನು ಬೆಳೆಸುವುದು.

೭.೫. ಜಂಡರ್ ಆಯವ್ಯಯ

೭.೬. ಸಾಂಸ್ಥಿಕ ಯಂತ್ರರಚನೆ

೮. ಸಂಪನ್ಮೂಲ ನಿರ್ವಹಣೆ ಮತ್ತು ಅನುಷ್ಠಾನ

## ೧. ಪ್ರಸ್ತಾವನೆ

೧.೧. ಜಂಡರ್ ಸಮಾನತೆಯ ತತ್ವವನ್ನು ಭಾರತ ಸಂವಿಧಾನದ ಪ್ರಸ್ತಾವನೆ, ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು ಮತ್ತು ನಿರ್ದೇಶಿತ ತತ್ವಗಳಲ್ಲಿ ಉಲ್ಲೇಖಿಸಲಾಗಿದೆ. ಸಂವಿಧಾನವು ಮಹಿಳೆಯರಿಗೆ ಸಮಾನತೆಯನ್ನು ನೀಡಿದೆಯಷ್ಟೆ ಅಲ್ಲ, ರಾಜ್ಯಗಳಿಗೂ ಮಹಿಳೆಯರ ಪರವಾಗಿ ಸಕಾರಾತ್ಮಕ ತಾರತಮ್ಯ ತೋರುವ ಅಧಿಕಾರವನ್ನು ನೀಡಿದೆ. ಮಹಿಳಾ ಸಮಾನತೆಯಲ್ಲಿ, ಜೀವಿಸುವ ಹಕ್ಕು, ಘನತೆಯಿಂದ ಬದುಕುವ ಹಕ್ಕು, ಸ್ವ-ಶ್ರೇಷ್ಠತೆಯ ತಿಳಿವಳಿಕೆಯ ಹಕ್ಕು, ನಿರ್ಧಾರ ಕೈಗೊಳ್ಳುವ ಆಯ್ಕೆ ಮತ್ತು ಹಕ್ಕು, ಅವಕಾಶ ಮತ್ತು ಸಂಪನ್ಮೂಲಗಳ ಲಭ್ಯತೆಯ ಹಕ್ಕು, ಮನೆ ಒಳಗೆ ಮತ್ತು ಹೊರಗೆ ತಮ್ಮ ಜೀವನದ ಮೇಲೆ ನಿಯಂತ್ರಣ ಹೊಂದುವ ಹಕ್ಕು, ನ್ಯಾಯಯುತ ಸಾಮಾಜಿಕ ಹಾಗು ಆರ್ಥಿಕ ವ್ಯವಸ್ಥೆಯನ್ನು ಕಟ್ಟಲು ಬೇಕಾದ ಸಮಾಜಿಕ ಬದಲಾವಣೆಯನ್ನು ಪ್ರಭಾವಿಸುವ ಸಾಮರ್ಥ್ಯವನ್ನು ಹೊಂದುವ ಹಕ್ಕುಗಳು ಸೇರಿವೆ. ವಿಶ್ವಸಂಸ್ಥೆಯೂ ಸಹಸ್ರಮಾನ ಗುರಿಗಳೂ ಕೂಡ, ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಜಂಡರ್ ಸಮಾನತೆಯನ್ನು ಸಾಧಿಸುವುದಕ್ಕೆ ಬಧ್ಧವಾಗಿವೆ. ಕರ್ನಾಟಕ ರಾಜ್ಯ ಮಹಿಳಾ ಸಶಕ್ತೀಕರಣ ಕಾರ್ಯನೀತಿಯು ತನ್ನ ಮೂಲ ತತ್ವಗಳನ್ನು ಭಾರತ ಸಂವಿಧಾನ ಮತ್ತು ರಾಷ್ಟ್ರೀಯ ಮಹಿಳಾ ಸಶಕ್ತೀಕರಣ ಕಾರ್ಯನೀತಿಯಿಂದ ಪಡೆದುಕೊಂಡಿದೆ. ಈ ಕಾರ್ಯನೀತಿಯು ಸುಸ್ಥಿರ ಅಭಿವೃಧ್ಧಿಯ ಗುರಿಗಳಿಗೂ ಬದ್ದವಾಗಿದ್ದು 'ಮಹಿಳೆಯರ ಮೇಲಿನ ಎಲ್ಲಾ ತರಹದ ದೌರ್ಜನ್ಯಗಳನ್ನು ತೊಡೆದು ಹಾಕುವ ಒಪ್ಪಂದ'(ಸೀಡಾ) 'ಬೀಜಿಂಗ್ ಪ್ಲಾಟ್ಫಾರಂ ಫಾರ್ ಆ್ಯಕ್ಷನ್' ಹಾಗೂ ಇತರ ಅಂತಾರಾಷ್ಟ್ರೀಯ ಒಡಂಬಡಿಕೆಗಳಲ್ಲಿ ಉಲ್ಲೇಖಿಸಿರುವ ಸಮಾನತೆ ಮತ್ತು ಮಾನವ ಹಕ್ಕುಗಳ ತತ್ವಗಳಲ್ಲಿ ಬಲವಾದ ನಂಬಿಕೆ ಇಟ್ಟಿದೆ.

೧.೨ ಜೀವನೋಪಾಯ, ಆರೋಗ್ಯ ಮತ್ತು ಶಿಕ್ಷಣ ಸೇರಿದಂತೆ ಸಾಮಾಜಿಕ ವಲಯದಲ್ಲಿ ಮಹಿಳೆಯರ ಸ್ಥಾನವನ್ನು ಉತ್ತಮಗೊಳಿಸುವ ಅಂಶವು ಒಟ್ಟು ಜನಸಂಖ್ಯೆಯ ಶ್ರೀಮಂತಿಕೆಯ ಹೆಚ್ಚಳ ಹಾಗು ದೇಶದ ಅಭಿವೃಧ್ಧಿಯ ಪರಿಣಾಮಗಳೊಂದಿಗೆ ನೇರ ಸಂಬಂಧ ಹೊಂದಿದೆ. ಅಭಿವೃಧ್ಧಿಯಲ್ಲಿ ಮಹಿಳೆಯರನ್ನು ಯಶಸ್ವಿ ಮತ್ತು ಹಕ್ಕುಳ್ಳ ಸಹಭಾಗಿಗಳನ್ನಾಗಿ ಸೇರಿಸಿಕೊಳ್ಳುವುದು ಅತ್ಯಂತ ಮಹತ್ವದ್ದಾಗಿದೆ. ಇದು ಕೇವಲ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಅಭಿವೃಧ್ಧಿಗಾಗಿಯಷ್ಟೆ ಅಲ್ಲ ಇಡೀ ಸಮಾಜದ ಸರ್ವತೋಮುಖ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಮುಖ್ಯವಾಗಿದೆ.

೧.೩ ಕರ್ನಾಟಕ ರಾಜ್ಯ ಮಹಿಳಾ ಸಶಕ್ತೀಕರಣ ಕಾರ್ಯನೀತಿಯು (೨೦೧೬) ರಾಜ್ಯದ ಎಲ್ಲಾ ಮಹಿಳೆಯರ ಬಗ್ಗೆ ಸರ್ಕಾರವು ಹೊಂದಿರುವ ದೂರದೃಷ್ಟಿ ಮತ್ತು ಬದ್ಧತೆಯನ್ನು ಬಿಂಬಿಸುತ್ತದೆ. ಎಲ್ಲಾ ಗುಂಪಿನ ಮಹಿಳೆಯರ ಸಮಗ್ರ ಅಭಿವೃದ್ಧಿ ಮತ್ತು ಸಶಕ್ತೀಕರಣವನ್ನು ಸಾಧಿಸುವ ಪ್ರಯತ್ನವನ್ನು ಮಾಡುತ್ತಿದೆ. ನಮ್ಮ ಸಮಾಜದಲ್ಲಿರುವ ವೈವಿದ್ಯತೆ ಮತ್ತು ಬಹಿತ್ವವನ್ನು ಗಮನದಲ್ಲಿಟ್ಟುಕೊಂಡು ಈ ಕಾರ್ಯನೀತಿಯು ಸಮಾನತೆಯಿಂದ ಕೂಡಿದ ಸಮಾಜವನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ. ಮಹಿಳೆಯರು ಜೀವನದ ಎಲ್ಲಾ ವಲಯಗಳಲ್ಲೂ ಸಮಾನವಾಗಿ ಭಾಗವಹಿಸಿ ಕೊಡುಗೆ ಸಲ್ಲಿಸುವಂತೆ ಮಾಡಲಾಗುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರ ಹಿಂದುಳಿದ ವರ್ಗ, ಅಲ್ಪಸಂಖ್ಯಾತ, ದಿವ್ಯಾಂಗ ಚೇತನರು, ವಲಸೆ ಮಹಿಳೆಯರು, ಲೈಂಗಿಕ ಕಾರ್ಯಕರ್ತರು ಮೊದಲಾದ ಅಂಚಿಗೆ ತಳ್ಳಲ್ಪಟ್ಟ ಮತ್ತು ದುರ್ಬಲ ವರ್ಗದ ಮಹಿಳೆಯರ ಅವಶ್ಯಕತೆಗಳಿಗೆ ವಿಶೇಷ ಗಮನ ನೀಡಲಾಗುವುದು. ಈ ಕಾರ್ಯನೀತಿಯು ಹುಡುಗಿಯರಿಗೂ ಪ್ರಸ್ತುತವಾಗಿದೆ.

## ೨. ದೃಷ್ಟಿಕೋನ :

ಕರ್ನಾಟಕದ ಎಲ್ಲಾ ಮಹಿಳೆಯರು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳುವಂತೆ ಸಶಕ್ತಗಳಿಸುವುದು. ತಮ್ಮ ಸಾಮರ್ಥ್ಯವನ್ನು ತಿಳಿದುಕೊಂಡು ಘನತೆಯಿಂದ ಜೀವನ ನಡೆಸಲು ಆಯ್ಕೆ ಮಾಡಿಕೊಳ್ಳುವ ಮತ್ತು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸಮಾನಾಗಿ ಭಾಗವಹಿಸಿ, ಸಾಮಾಜಿಕ ಬದಲಾವಣೆಯನ್ನು ಪ್ರಭಾವಿಸುವಂತಹ ಸಮಾಜವನ್ನು ಸ್ಥಾಪಿಸುವುದು

## ೩. ಧ್ಯೇಯ :

ಪರಿಣಾಮಕಾರಿಯಾದ ಮತ್ತು ಜಂಡರ್ ಪ್ರತಿಕ್ರಿಯಾತ್ಮಕ ಶಾಸಕಾಂಗ, ಆಡಳಿದ ಮತ್ತು ನ್ಯಾಯಾಂಗ ಚೌಕಟ್ಟನ್ನು ನಿರ್ಮಿಸುವುದು. ಅದಕ್ಕಾಗಿ ಸೂಕ್ತ ಸಾಂಸ್ಥಿಕ ಯಂತ್ರರಚನೆಯನ್ನು ರೂಪಿಸಿ ಬಲಪಡಿಸಲಾಗುವುದು. ಎಲ್ಲಾ ಕಾರ್ಯನೀತಿ, ಕಾರ್ಯಕ್ರಮ ಮತ್ತು ಆಚರಣೆಗಳಲ್ಲಿ ಜಂಡರ್‌ನ್ನು ಮುಖ್ಯವಾಹಿನಿಯಾಗಿಸಲಾಗುವುದು. ಈ ಕಾರ್ಯನೀತಿಯು ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸಮಾನ ಹಕ್ಕು ಮತ್ತು ಅವಕಾಶಗಳನ್ನು ಒದಗಿಸಿಕೊಡುತ್ತದೆ.

## ೪. ಉದ್ದೇಶಗಳು

೪.೧. ಮಹಿಳೆಯರ ಸಮಗ್ರ ಅಭಿವೃದ್ಧಿಯಲ್ಲಿ ಪ್ರಗತಿಪರ ಆರ್ಥಿಕ ಮತ್ತು ಸಾಮಾಜಿಕ ಕಾರ್ಯನೀತಿಗಳನ್ನು ಅಳವಡಿಸಿಕೊಂಡು ಅವರು ತಮ್ಮ ಸಾಮರ್ಥ್ಯವನ್ನು ಅರಿತುಕೊಂಡು ಗೌರವಯುತವಾದ ಜೀವನ ನಡೆಸಲು ಶಕ್ತಗೊಳಿಸುವ ಪರಿಸರ ನಿರ್ಮಾಣ ಮಾಡುವುದು

೪.೨. ಸಂತಾನೋತ್ಪತ್ತಿ ಹಕ್ಕು, ಲೈಂಗಿಕ ಆರೋಗ್ಯದ ಹಕ್ಕು ಮತ್ತು ಮೂಲಭೂತ ಸ್ವಾತಂತ್ರ್ಯವನ್ನು ಒಳಗೊಂಡಂತೆ, ಒಬ್ಬ ವ್ಯಕ್ತಿಯಾಗಿ ಮಹಿಳೆ ಎಲ್ಲಾ ರಂಗಗಳಲ್ಲೂ ನ್ಯಾಯಯುತವಾಗಿ ಮತ್ತು ವಾಸ್ತವವಾಗಿ ಮಾನವ ಹಕ್ಕುಗಳನ್ನು ಅನುಭವಿಸುವುದು.

೪.೩. ಆರ್ಥಿಕತೆ ಮತ್ತು ಪರಿಸರವು ಸೇರಿದಂತೆ ಮಹಿಳೆಯು ವಿವಿಧ ರಂಗಗಳಲ್ಲಿ ನೀಡಿರುವ ಕೊಡುಗೆಗಳನ್ನು ಗುರುತಿಸುವುದು.

೪.೪. ಗರಿಷ್ಟ ಮಟ್ಟದ ಆರೋಗ್ಯ ಸೇವೆ, ಗುಣಾತ್ಮಕ ಶಿಕ್ಷಣ, ಉದ್ಯೋಗ ಮತ್ತು ವೃತ್ತಿಪರ ಮಾರ್ಗದರ್ಶನ, ಎಲ್ಲಾ ಮಟ್ಟದಲ್ಲೂ ಉದ್ಯೋಗಾವಕಾಶ, ಸಮಾನ ಮತ್ತು ನ್ಯಾಯಸಮ್ಮತ ಸಂಬಳ, ಕೆಲಸದ ಸ್ಥಳದಲ್ಲಿ ಆರೋಗ್ಯ ಮತ್ತು ಸುರಕ್ಷತಾ ಕ್ರಮಗಳು, ಸಾಮಾಜಿಕ ಭದ್ರತೆ ದೊರಕುವಂತೆ ಮಾಡುವುದು. ಸಾರ್ವಜನಿಕ ಆಸ್ತಿ, ಅರಣ್ಯ,

ನೀರು ಮತ್ತು ಇತರೆ ಉತ್ಪಾದನಾ ಸಾದನಗಳು ಒಳಗೊಂಡಂತೆ ಆರ್ಥಿಕ ಸಂಪನ್ಮೂಲಗಳು ಲಭ್ಯವಾಗುವಂವಂತೆ ಮತ್ತು ಅವುಗಳ ಮೇಲೆ ನಿಯಂತ್ರಣ ಹೊಂದುವಂತೆ ಮಾಡುವುದು

೪.೫. ಕಾನೂನು ವ್ಯವಸ್ಥೆಯನ್ನು ಬಳಗೊಳಿಸುವುದರ ಮೂಲಕ ಮಹಿಳೆ ಮತ್ತು ಹೆಣ್ಣು ಮಗು ಮೇಲೆ ನಡೆಯುವ ಜಂಡರ್ ಆಧಾರಿತ ದೌರ್ಜನ್ಯ ಮತ್ತು ತಾರತಮ್ಯವನ್ನು  ನಿರ್ಮೂಲಗೊಳಿಸುವುದು.

೪.೬ ಮಹಿಳೆ ಮತ್ತು ಪುರುಷರಿಬ್ಬರನ್ನೂ ತೊಡಗಿಸಿಕೊಂಡು ಇಬ್ಬರ ಸಕ್ರಿಯ ಭಾಗವಹಿಸುವಿಕೆಯ ಮುಖಾಂತರ ಸಮಾಜದ ಮನೋಭಾವ ಮತ್ತು ಸಮುದಾಯದ ಆಚರಣೆಗಳಲ್ಲಿ ಬದಲಾವಣೆ ತರುವುದು.

೪.೭. ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಜಂಡರ್ ಸಮಾನತೆಯ ದೃಷ್ಟಿಕೋನವನ್ನು ಮುಖ್ಯವಾಹಿನಿಯಾಗಿಸುವುದು. ನಾಗರೀಕ ಸಮಾಜದೊಂದಿಗೆ ಅದರಲ್ಲೂ ಮಹಿಳಾ ಸಂಘಟನೆಗಳೊಂದಿಗೆ  ಪಾಲುಗಾರಿಕೆಗಳನ್ನು ಕಟ್ಟುವ ಮತ್ತು ಬಲಗೊಳಿಸುವುದರ  ಮೂಲಕ ಕಾರ್ಯತಂತ್ರ ಮತ್ತು ಪ್ರಯೋಗಾತ್ಮಕ ಜಂಡರ್ ಅವಶ್ಯಕತೆಗಳನ್ನು ಆದ್ಯತೆಗೊಳಿಸುವುದು.

೪.೮. ಅಭಿವೃದ್ಧಿ ಮತ್ತು ಮಹಿಳೆಯರ ಸಶಕ್ತೀಕರಣವನ್ನು ಸಾಧಿಸಲು ಅಂತರ್ ರಾಜ್ಯಗಳ ನಡುವೆ ಇರುವ ಪ್ರಾದೇಶಿಕ ಅಸಮಾನತೆಗಳನ್ನು  ನಿರ್ಮೂಲನೆಗೊಳಿಸುವುದ

## ೫. ಆದ್ಯತಾ ಕ್ಷೇತ್ರಗಳು

### ೫.೧.೨. ಆರ್ಥಿಕ ಸಶಕ್ತೀಕರಣ

### ೫.೧.೨.೧. ಬಡತನದ ಸ್ತ್ರೀಕರಣವನ್ನು ಬಗೆಹರಿಸುವುದು

ಆರ್ಥಿಕ ಬೆಳವಣಿಗೆ, ಬಡತನ ಮತ್ತು ಜಂಡರ್ ಅಸಮಾನತೆಗಳ ನಡುವೆ ಅತ್ಯಂತ ನಿಕಟವಾದ  ಸಂಬಂಧವಿದೆ, ಬಡತನ ರೇಖೆಗಿಂತ ಕೆಳಗಿರುವ ಜನಸಂಖ್ಯೆಯಲ್ಲಿ ಮಹಿಳೆಯರು ಪ್ರಮಾಣ ಅಧಿಕವಾಗಿದೆ. ಅವರು ತೀವ್ರ ಬಡತನದ ಪರಿಸ್ಥಿತಿಯಲ್ಲಿದ್ದಾರೆ,  ಮನೆಯೊಳಗಿನ  ನೈಜ ಕಠಿಣ ಸ್ಥಿತಿಯ ಜೊತೆಗೆ ಸಾಮಾಜಿಕ ತಾರತಮ್ಯ ಎದುರಿಸುತ್ತಿದ್ದಾರೆ, ಘನತೆಯಿಂದ ಬದುಕುವ ಹಕ್ಕಿನಿಂದ  ವಂಚಿತರಾಗಿದ್ದಾರೆ. ಹೆಚ್ಚಿನ ಮಹಿಳೆಯರು ಅಸಂಘಟಿತ ವಲಯದಲ್ಲಿ ಕೇದ್ರೀಕೃತವಾಗಿದ್ದು ಕಡಿಮೆ ವೇತನ ಕೊಡುವ ಉದ್ಯೋಗಳಲ್ಲಿ ತೊಡಗಿರುವದರಿಂದ ಅವರ ಪರಿಸ್ಥಿತಿ ಮತ್ತಷ್ಟು ಧಾರುಣವಾಗಿದೆ.  ದೊಡ್ಡ, ಮಧ್ಯಮ ಮತ್ತು ಸಣ್ಣ ಮಟ್ಟದಲ್ಲಿ ಆರ್ಥಿಕ ಕಾಯಿದೆಗಳು ಮತ್ತು ಬಡತನ ನಿರ್ಮೂಲನಾ ಕಾರ್ಯಕ್ರಮಗಳು ಮಹಿಳೆಯರ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಹಾಗೂ ಸಮಸ್ಯೆಗಳನ್ನು ನಿವಾರಿಸುವುದಕ್ಕೆ ಹೆಚ್ಚಿನ ಗಮನ ನೀಡಬೇಕಾಗಿದೆ. ಅದರಲ್ಲೂ ವಿಶೇಷವಾಗಿ ಅಂಚಿಗೆ ತಳ್ಳಲ್ಪಟ್ಟ ಸಮುದಾಯದ ಮಹಿಳೆಯರನ್ನು ಅಭಿವೃದ್ಧಿ ಪ್ರಕ್ರಿಯೆಯ ಮುಖ್ಯವಾಹಿನಿಗೆ ತರಬೇಕು.

**ದೊಡ್ಡ ಮಟ್ಟ :** ಹೆಚ್ಚು ಸಂಭಾವನೆಯ ಉದ್ಯೋಗಗಳಲ್ಲಿ ಮಹಿಳೆಯರ ಪ್ರಾತಿನಿದ್ಯವನ್ನು ಉತ್ತಮಪಡಿಸುವುದು; ಜೀವನೋಪಾಯದ ಭರವಸೆ, ದೊಡ್ಡ ಆರ್ಥಿಕ ಕಾರ್ಯನೀತಿಗಳಲ್ಲಿ ಮಹಿಳಾ ವಿಷಯಗಳು ಪ್ರಾದಿನಿದ್ಯ ಪಡೆಯುವಂತೆ ಮಾಡಲು ಮತ್ತು ಮಹಿಳೆಯರ ಸಶಕ್ತಿಕರಣವನ್ನು ಪ್ರೋತ್ಸಾಹಿಸಲು ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ  ಸಾಕಷ್ಟು ಪ್ರಮಾಣದಲ್ಲಿ ಸಂಪನ್ಮೂಲಗಳ ಹಂಚಿಕೆಯಾಕೆಯಾಗಬೇಕು

**ಮಧ್ಯಮ –** ಸಮುದಾಯ ಮಟ್ಟ: ಆಸ್ತಿ ಮತ್ತು ಭೂಮಿ ಒಡೆತನ; ಸಾಲ ಸೌಲಭ್ಯದ ಲಭ್ಯತೆ ; ಸ್ಥಳೀಯ ವ್ಯಾಪಾರ ಸಂಘಟನೆಗಳಲ್ಲಿ  ತೊಡಗಿಕೊಳ್ಳುವುದು ಮತ್ತು/ಪ್ರಾತಿನಿದ್ಯ ಹೊಂದುವುದು; ಮಾರುಕಟ್ಟೆ ಲಬ್ಯತೆ.

**ಸೂಕ್ಷ್ಮ** – ಮನೆಯ ಮಟ್ಟ: ಮನೆಯ ಆದಾಯ ಮತ್ತು ಆಸ್ತಿಯ ಮೇಲೆ ಮಹಿಳೆಯರ ನಿಯಂತ್ರಣ; ಕುಟುಂಬಕ್ಕೆ ಮಹಿಳೆಯರ ಕೊಡುಗೆ/ಸಹಾಯ; ಕುಟುಂಬದ ಸಂಪನ್ಮೂಲಗಳ ಮೇಲಿನ ನಿಯಂತ್ರಣ; ಕುಟುಂಬದ ಆರ್ಥಿಕ ನಿರ್ಧಾರಗಳಲ್ಲಿ ಭಾಗವಹಿಸುವಿಕೆ.

**೫.೧.೨.೨.** ಮಹಿಳೆಯರಿಗೆ ಸದ್ಯ ಲಬ್ಯವಿರುವ ಹಣಕಾಸಿನ ಸೇವಾ ಸೌಲಭ್ಯಗಳನ್ನು ಹೆಚ್ಚಿಸುವುದು; ಕಾರ್ಯನೀತಿ ಚೌಕಟ್ಟನ್ನು ಅಭಿವೃದ್ಧಿ ಪಡಿಸಿ ಮಹಿಳೆಯರನ್ನು ಸೂಕ್ಷ್ಮ–ಹಣಕಾಸು ವ್ಯವಸ್ಥೆಯಿಂದ ಮುಖ್ಯವಾಹಿನಿಯ ಆರ್ಥಿಕ ನೀತಿ ಮತ್ತು ಸಂರಚನೆಗಳಿಗೆ ಸರಾಗವಾಗಿ ಚಲಿಸುವಂತೆ ಮಾಡುವುದು; ಹಣಕಾಸಿನ ಸಂಸ್ಥೆಗಳಲ್ಲಿರುವ ಜಂಡರ್ ತಾರತಮ್ಯವನ್ನು ಹೋಗಲಾಡಿಸಲು ಕಾನೂನಾತ್ಮಕವಾದ ಕಾಯಿದೆಗಳನ್ನು ಅಭಿವೃದ್ಧಿಡಿಸುವುದು ಅಥವಾ ಅಳವಡಿಸಿಕೊಳ್ಳುವುದು.

**೫.೧.೨.೩.** ಜಂಡರ್ ವೇತನ ತಾರತಮ್ಯವನ್ನು ಹೋಗಲಾಡಿಸುವುದು ಮತ್ತು ಸಮಾನ ಅವಕಾಶಗಳನ್ನು ಒದಗಿಸುವುದು.

**೫.೧.೨.೪.** ವಿವಿಧ ಕಾರ್ಯಕ್ರಮ ಮತ್ತು ಸೇವೆಗಳನ್ನು ವಿಲೀನಗೊಳಿಸುವುದರ ಮೂಲಕ ಬಡ ಮಹಿಳೆರನ್ನು ಸಂಘಟಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಅವರ ಸಾಮರ್ಥ್ಯವನ್ನು ವೃದ್ಧಿಗೊಳಿಸಲು ಅಗತ್ಯ ಬೆಂಬಲ ಕ್ರಮಗಳ ಜೊತೆಗೆ ಆಯ್ಕೆಯ ವ್ಯಾಪ್ತಿಯನ್ನು ವಿಶಾಲಗೊಳಿಸುವುದು. 'ಮಹಿಳಾ ಸಬಲೀಕರಣ ರಾಷ್ಟ್ರೀಯ ಮಿಷನ್' ಅಡಿಯಲ್ಲಿ ಸ್ಥಾಪನೆಗೊಂಡ 'ಪೂರ್ಣ ಶಕ್ತಿ ಕೇಂದ್ರ', 'ಉಜ್ವಲ ಯೋಜನೆ'ಗಳಂತಹ ಕಾರ್ಯಕ್ರಮಗಳನ್ನು ಸ್ಥಾಪಿಸುವುದರ ಮೂಲಕ ಒಂದೇ ವೇದಿಕೆಯಲ್ಲಿ ಮಹಿಳೆಯರಿಗೆ ಹಲವಾರು ಸೇವೆಗಳನ್ನು ಒದಗಿಸುವ ಏಕ ಗವಾಕ್ಷಿ ವ್ಯವಸ್ಥೆಯನ್ನು ಬಲಗೊಳಿಸಬೇಕು.

**೫.೧.೨.೫.** ಆರ್ಥಿಕ ಮಂಡಳಿ ಮತ್ತು ಹಣಕಾಸು ಸಂಸ್ಥೆಗಳಲ್ಲಿ ಮಹಿಳೆಯರ ದನಿ ಕೇಳುವಂತಾಗಲು ಎಲ್ಲಾ ಕ್ಷೇತ್ರದ ಅದರಲ್ಲೂ ದುರ್ಬಲ ವರ್ಗಗಳ ಮಹಿಳೆಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಿಕೊಳ್ಳಬೇಕು.

**೫.೧.೨.೬.** ಉತ್ತಮವಾಗಿ ವಿನ್ಯಾಸಗೊಳಿಸಿದ ಕಾರ್ಯತಂತ್ರದ ಮೂಲಕ ಮನೆಯನ್ನು ಉತ್ಪಾದನಾ ಮತ್ತು ಅನುಭೋಗ ವಲಯವೆಂದು ಪುನರ್ ವಿನ್ಯಾಸಗೊಳಿಸಿ ಕಾರ್ಯನೀತಿಗಳು ಮಹಿಳೆಯರ ವೇತನ ರಹಿತ ದುಡಿಮೆಯನ್ನು ಕೂಲಂಕುಷವಾಗಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕು.

**೫.೧.೨.೭.** ಆಯವ್ಯಯ ಪ್ರಕ್ರಿಯೆಗಳಲ್ಲಿ ಜಂಡರ್ ದೃಷ್ಟಿಕೋನಗಳನ್ನು ಅಳವಡಿಸಿಕೊಳ್ಳುವುದು; ಆರ್ಥಿಕ ಕಾರ್ಯಕ್ರಮಗಳ ಮತ್ತು ಕಾರ್ಯನೀತಿಗಳ ಜಂಡರ್ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಬೇಕು. ಉದ್ಯೋಗ ಭದ್ರತೆ, ಮೂಲಭೂತ ಸೌಕರ್ಯ ಮತ್ತು ಇತರ ಸೇವಾ ಸಹಾಯವನ್ನು ಮಹಿಳೆಯರಿಗೆ ಒದಗಿಸಬೇಕು.

**೫.೧.೨.೮.** ಉತ್ಪಾದಕರಾಗಿ ಮತ್ತು ಕಾರ್ಮಿಕರಾಗಿ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗೆ ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ ಮಹಿಳೆಯರು ನೀಡುವ ಕೊಡುಗೆಗಳನ್ನು ಪರಿಗಣಿಸಬೇಕು. (ಮನೆಕೆಲಸವನ್ನೂ ಒಳಗೊಂಡಂತೆ), ಅವಶ್ಯಕತೆಗನುಸಾರವಾಗಿ ದುಡಿಮೆಯ ಸಾಂಪ್ರದಾಯಿಕ ಪರಿಕಲ್ಪನೆಯನ್ನು ಪುನರ್ ಅರ್ಥೈಸಿ ಮರುವ್ಯಾಖ್ಯಾನಿಸಬೇಕು. ಉದಾಹರಣೆಗೆ ಜನಗಣತಿ ದಾಖಲೆಗಳು, ರಾಷ್ಟ್ರೀಯ ಆದಾಯ ಲೆಕ್ಕಾಚಾರವು ಉತ್ಪಾದಕರಾಗಿ ಕಾರ್ಮಿಕರಾಗಿ ಮಹಿಳೆಯರ ಕೊಡುಗೆಗಳನ್ನು ಬಿಂಬಿಸಬೇಕು. ಉದ್ಯೋಗ ಮತ್ತು ಕೆಲಸದ ವಾತಾವರಣಕ್ಕೆ ಸಂಬಂಧಿಸಿದಂತೆ ಸಮರ್ಪಕ ಕಾರ್ಯನೀತಿಗಳ ರಚನೆಯಾಗಬೇಕು.

**೫.೧.೨.೯.** ಬ್ಯಾಂಕುಗಳು ಏಕಗವಾಕ್ಷಿ ಪರಿಕ್ರಮವನ್ನು ಅಳವಡಿಸಿಕೊಂಡು ಮಹಿಳೆಯರಿಗೆ ಅದರಲ್ಲೂ ಅಂಚಿಗೆ ತಳ್ಳಲ್ಪಟ್ಟ ಗುಂಪಿಗೆ ಮತ್ತು ಸಮುದಾಯಗಳಿಗೆ ಸೇರಿದವರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಸಾಲ ಸೌಲಭ್ಯಗಳನ್ನು ಪಡೆದುಕೊಳ್ಳಲು ಇರುವ ಅಡೆತಡೆಗಳನ್ನು ಹೋಗಲಾಡಿಸಬೇಕು.

**೫.೧.೨.೧೦.** ವಿವಿಧ ಸರ್ಕಾರಿ ಕಾರ್ಯಕ್ರಮಗಳು ಮಹಿಳೆಯರ ಮೇಲೆ ಕೇಂದ್ರೀಕರಿಸುವುದು ತುಂಬ ಮುಖ್ಯವಾಗಿದೆ. ಮಹಿಳೆಯರ ಪರವಾಗಿ ವಿವಿಧ ರೀತಿಯ ಸಕರಾತ್ಮಕ ಕ್ರಿಯೆಗಳನ್ನು (ಶೇಕಡವಾರು, ಹಕ್ಕುಪತ್ರಗಳನ್ನು ಮಹಿಳೆಯರ

ಹೆಸರಿನಲ್ಲೇ ತೆಗೆದುಕೊಳ್ಳುವ ನಿಯಮ ಮಾಡಬೇಕು) ಕೈಗೊಂಡು ವಿವಿಧ ಯೋಜನೆಗಳ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಮಾನ ಅವಕಾಶ ಸಿಗುವಂತೆ ಮಾಡಬೇಕು.

**೫.೧.೨.೧೧.** ವಿವಿಧ ಸಶಕ್ತೀಕರಣ ಮತ್ತು ಆದಾಯೋತ್ಪನ್ನ ಯೋಜನೆಗಳಲ್ಲಿ ಮಹಿಳೆಯರಿಗೆ ಶೇಕಡ ೫೦ ಮೀಸಲಾತಿ ನೀಡಬೇಕು. ಪರಿಶಿಷ್ಟ ವರ್ಗ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತ ಮಹಿಳೆಯರು, ವಿಧವೆಯರು, ಒಂಟಿ ಮಹಿಳೆಯರು ಮತ್ತು ಸ್ತ್ರೀ ಯಜಮಾನಿಕೆ ಕುಟುಂಬದಂತಹ ಅಂಚಿಗೆ ತಳ್ಳಲ್ಪಟ್ಟ ಗುಂಪಿಗೆ ಸೇರಿದ ಬಡ ಮಹಿಳೆಯರನ್ನು ಯೋಜನೆಗಳ ಫಲಾನುಭವಿಗಳನ್ನಾಗಿ ಆಯ್ಕೆ ಮಾಡಬೇಕು

## ೫.೧.೩. ಕೃಷಿ :

ಯಾವಾಗಲು ಮಹಿಳೆಯರು ಕೃಷಿಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತಾ ಬಂದಿದ್ದಾರೆ. ಕೆಲಸಗಾರರಾಗಿ ಮತ್ತು ಕೃಷಿ ನಿರ್ವಹಣಾಗಾರರಾಗಿ ಅವರ ಮಹತ್ವ ಬೆಳೆಯುತ್ತಾ ಬಂದಿದೆ. ಹೆಚ್ಚು ಹೆಚ್ಚು ಪುರುಷರು ಕೃಷಿಯೇತರ ಉದ್ಯೋಗಳಿಗೆ ಹೋಗುತ್ತಿರುವುದರಿಂದ ಕೃಷಿಯ ಸ್ತ್ರೀಕರಣ ಹೆಚ್ಚಾಗುತ್ತಿದೆ.

### ೫.೧.೩.೧. ಭೂಮಿ ಹಕ್ಕಿನ ಲಭ್ಯತೆ ಮತ್ತು ಮಹಿಳೆಯರನ್ನು ರೈತರನ್ನಾಗಿ ಗುರುತಿಸುವುದು

೫.೧.೩.೧.೧. ಆಸ್ತಿ ಮತ್ತು ಉತ್ತರಾಧಿಕಾರತ್ವ ಹಕ್ಕು, ಸರ್ಕಾರದ ನೇರ ವರ್ಗಾವಣೆ, ಭೂಮಿಯನ್ನು ಕೊಂಡುಕೊಳ್ಳಲು ಅಥವಾ ಭೋಗ್ಯ ಹಾಕಿಕೊಳ್ಳಲು ಸಾಲದ ಸೌಲಭ್ಯ ಮುಂತಾದವುಗಳ ಮೂಲಕ ಬಡ ಮಹಿಳೆಯರಿಗೆ ಭೂಮಿ ಹಕ್ಕು ಲಭ್ಯವಾಗಬೇಕು. ಮಹಿಳೆಯರಲ್ಲಿ ಅವರ ಆಸ್ತಿ ಹಕ್ಕು ಮತ್ತು ಉತ್ತರಾಧಿಕಾರತ್ವದ ಬಗ್ಗೆ ಕಾನೂನು ಅರಿವು ಮೂಡಿಸಿ ಕಾನೂನು ಬೆಂಬಲ ಸಿಗುವಂತಾಗಬೇಕು. ಇಡೀ ದೇಶದಲ್ಲಿ ಸೂಕ್ತ ಮಾರ್ಗಸೂಚಿಯನ್ನು ರೂಪಿಸಬೇಕು. ಬಡತನ ನಿವಾರಣೆ, ಮರು ನೆಲೆಸುವಿಕೆ ಮತ್ತು ಪುನರ್ವಸತಿ ಇತ್ಯಾದಿ ಕಾರ್ಯಗಳಲ್ಲಿ ಮಹಿಳೆಯರು ಫಲಾನುಭವಿಗಳಾಗಿರುವುದರಿಂದ ಸರ್ಕಾರದ ಎಲ್ಲಾ ಭೂ ವರ್ಗಾವಣೆಯಲ್ಲಿ ಮಹಿಳೆಯರ ಹಕ್ಕುಗಳನ್ನು ಗುರುತಿಸಬೇಕು.

**೫.೧.೩.೧.೨.** ಮಹಿಳೆಯರು ತಾವು ಪಡೆದುಕೊಂಡ ಭೂಮಿಯನ್ನು ತಮ್ಮಲ್ಲೆ ಉಳಿಸಿಕೊಳ್ಳಲು ಹೊಸ ಪರಿಕ್ರಮವನ್ನು ಅಳವಡಿಸಿಕೊಳ್ಳುವುದರ ಮೂಲಕ 'ಗುಂಪು ಪರಿಕ್ರಮ'ವನ್ನು ಪ್ರೋತ್ಸಾಹಿಸಬೇಕು ಬಡವರು ವ್ಯಕ್ತಿಗತಕ್ಕಿಂತ ಗುಂಪಿನಲ್ಲಿ ಕೆಲಸಮಾಡುವುದರಿಂದ ಹೆಚ್ಚು ಸಶಕ್ತರಾಗುತ್ತಾರೆ ಎಂಬುದನ್ನು ಈಗಾಗಲೆ ಗುರುತಿಸಲಾಗಿದೆ.

ಭೂ ದಾಖಲೆ ಇಟ್ಟುಕೊಂಡಿರುವ ಅಥವಾ ಗಣಕೀಕರಿಸುವ ಮತ್ತು ದಾಖಲೆಗಳ ನಿರ್ವಹಣೆ ಮಾಡುವ ಸರ್ಕಾರದ ಎಲ್ಲಾ ಮಟ್ಟದಲ್ಲಿ ಕಾರ್ಯಕರ್ತರಿಗೆ, ಭೂಮಿ ಮತ್ತು ಇತರ ಆಸ್ತಿಗಳ ಬಗ್ಗೆ ಜಂಡರ್ ವಿಂಗಡಣಾ ಮಾಹಿತಿಯನ್ನು ನಿರ್ವಹಣೆ ಮಾಡಲು ನಿರ್ದೇಶನಗಳನ್ನು ನೀಡಬೇಕು. ಮಗಳಾಗಿ, ವಿಧವೆಯರಾಗಿ ಮಹಿಳೆಯರು ಹೊಂದಿರುವ ಭೂಮಿಯ ಉತ್ತರಾಧಿಕಾರತ್ವ ಪಾಲು ಸಂಪೂರ್ಣವಾಗಿ ದಾಖಲಾಗಬೇಕು. ಸಂಬಂಧಿಕರ ಹೆಸರಿನಲ್ಲಿಡದೆ ಮಹಿಳೆಯರ ಹೆಸರಲ್ಲೇ ದಾಖಲೆ ಇರಬೇಕು.

### ೫.೧.೩.೨. ಕೃಷಿಯಲ್ಲಿ ಸಾಮರ್ಥ್ಯಾಭಿವೃದ್ಧಿ

**೫.೧.೩.೨.೧.** ಯಾವುದೆ ತಾರತಮ್ಯವಿಲ್ಲದೆ, ಬೇಡಿಕೆ ಆಧಾರಿತ ವಿಸ್ತರಣಾ ಸೇವೆಗಳು ಮತ್ತು ಮೂಲಭೂತ ಸೌಲಭ್ಯಗಳು ರೈತ ಮಹಿಳೆಯರಿಗೆ, ಅತೀ ದೂರದ ಪ್ರದೇಶಗಳ ಮಹಿಳೆಯರೂ ಸೇರಿದಂತೆ ರಾಜ್ಯದೆಲ್ಲೆಡೆ, ದೊರಕುವಂತೆ ಮಾಡಬೇಕು.

**೫.೧.೩.೨.೨.** ನೀರಾವರಿ, ಸಾಲ, ನೀರು, ಅರಣ್ಯ ಇಂಧನ, ಹುಲ್ಲುಗಾವಲು ಮುಂತಾದ ಪೂರಕ ಸಂಪನ್ಮೂಲಗಳ ಮೇಲೆ ಮಹಿಳೆಯರು ನಿಯಂತ್ರಣ ಹೊಂದುವಂತೆ ಮಾಡಬೇಕು (ಸಂಪನ್ಮೂಲ ನಕ್ಷೆ ತಯಾರಿಕೆ, ಸಂಪನ್ಮೂಲ ನಿರ್ವಹಣೆ, ತಂತ್ರಜ್ಞಾನದ ಬಳಕೆ, ಮಾರುಕಟ್ಟೆ, ಹಣಕಾಸಿನ ನಿರ್ವಹಣೆ, ಸಹಕಾರಿ ನಿರ್ವಹಣೆ ಮತ್ತು ಸಾವಯವ ಕೃಷಿ)

**೫.೧.೩.೨.೩.** ಆರೋಗ್ಯ ಮತ್ತು ವೃತ್ತಿ ಸುರಕ್ಷತೆ ಒದಗಿಸಲು ಮಹಿಳಾ ಸ್ನೇಹಿ ತಂತ್ರಜ್ಞಾನವನ್ನು ವಿನ್ಯಾಸಗೊಳಿಸಿ ಅನುಷ್ಠಾನಗೊಳಿಸಬೇಕು.

**೫.೧.೩.೨.೪.** ವ್ಯಕ್ತಿ ಅಥವಾ ಗುಂಪಿನಲ್ಲಿ ಆಸ್ತಿ ಮಾಡಲು, ಭೂಮಿಯ ಮೇಲೆ ಬಂಡವಾಳ ಹೂಡಲು ಮತ್ತು ಜಲ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಲು ರೈತ ಮಹಿಳೆಯರಿಗೆ ಹಣಕಾಸಿನ ನೆರವು ನೀಡಬೇಕು.

**೫.೧.೩.೨.೫.** ಉತ್ಪಾದನೆ, ಮಾರುಕಟ್ಟೆ, ಮರದ ಉತ್ಪನ್ನಗಳಲ್ಲದ ಇತರ ವಸ್ತುಗಳ ಮಾರಾಟಕ್ಕೆ ಬೇಕಾದ ಸಂಪನ್ಮೂಲ ಕ್ರೂಢೀಕರಣ ಮತ್ತು ಗುಂಪು ಹೂಡಿಕೆಯನ್ನು ಪ್ರೋತ್ಸಾಹಿಸಬೇಕು.

**೫.೧.೩.೨.೬.** ತರಬೇತಿ ಕಾರ್ಯಕ್ರಮಗಳ ಮೂಲಕ ಆಧುನಿಕ ಕೃಷಿ ಆಚರಣೆ ಮತ್ತು ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಮಹಿಳೆಯರ ಸಾಮರ್ಥ್ಯವನ್ನು ಅಭಿವೃದ್ಧಿ ಮಾಡಿ ಅವುಗಳು ಸುಲಭವಾಗಿ ಲಭ್ಯವಾಗುವಂತೆ ಮಾಡಬೇಕು. ನೈಸರ್ಗಿಕ ವಿಕೋಪ, ಬೆಳೆ ನಾಶ ಮತ್ತು ಕೃಷಿ ವೈಫಲ್ಯದಿಂದ ಆತ್ಮಹತ್ಯೆ ಮಾಡಿಕೊಂಡ ಸಮಯದಲ್ಲಿ ಅಂಚಿಗೆ ತಳ್ಳಲ್ಪಟ್ಟ ಮಹಿಳಾ ರೈತರಿಗೆ ಬೆಂಬಲ ಸೂಚಿಸುವ ಕಾರ್ಯತಂತ್ರವನ್ನು ರೂಪಿಸಬೇಕು.

## ೫.೧.೪. ಕೈಗಾರಿಕೆ ಮತ್ತು ಸೇವೆ

**೫.೧.೪.೧.** ದೇಶದ ಉತ್ಪಾದನಾ ವಲಯದಲ್ಲಿ ದೊಡ್ಡ, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ವಲಯಗಳು ಸೇರಿಕೊಂಡಿವೆ. ಮಹಿಳೆಯರು ದೊಡ್ಡ ಕೈಗಾರಿಕಾ ಕ್ಷೇತ್ರದಲ್ಲಿ ವೇತನ ದುಡಿಮೆದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದರು ಹೆಚ್ಚಿನ ಮಹಿಳೆಯರು ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಉತ್ಪಾದಕರಾಗಿ ಮತ್ತು ಕೆಲಸಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ವಲಯದಲ್ಲಿ ಸಾಮರ್ಥ್ಯವನ್ನು ಅಭಿವೃದ್ಧಿ ಮಾಡಿಕೊಳ್ಳಲು ಅವರಿಗೆ ಸಹಾಯದ ಅವಶ್ಯಕತೆಯಿದೆ. ಮುಂದೆ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ತಂತ್ರಜ್ಞಾನದ ಕ್ರಾಂತಿಯಿಂದ ಸೇವಾ ಕ್ಷೇತ್ರವು ಅತ್ಯಂತ ವೇಗವಾಗಿ ವಿಸ್ತಾರಗೊಳ್ಳಲಿದೆ, ಇವೆರಡು ವಲಯಗಳನ್ನು ಬೇರ್ಪಡಿಸುವ ಗೆರೆ ಸಣ್ಣದಾಗುತ್ತಿದೆ. ಸೇವಾ ಕ್ಷೇತ್ರದಲ್ಲಿ ಮಹಿಳೆಯರ ಭಾಗವಹಿಸುವಿಕೆ ಕಡಿಮೆಯಾಗುತ್ತಿರುವುದು ಆತಂಕದ ವಿಷಯವಾಗಿದೆ. ಇತ್ತೀಚೆಗೆ ಬೆಳೆಯುತ್ತಿರುವ ಎಲ್ಲಾ ಕ್ಷೇತ್ರಗಳಲ್ಲಿ ಉದಾಹರಣೆಗೆ, ಮಾಹಿತಿ-ಸಂವಹನ, ಜೈವಿಕ ತಂತ್ರಜ್ಞಾನ, ಚಿಲ್ಲರೆ ವ್ಯಾಪಾರ, ಬ್ಯಾಂಕಿಂಗ್ ಮತ್ತು ಹಣಕಾಸು, ಹೊಟೆಲ್ ನಿರ್ವಹಣೆ ಮತ್ತು ಪ್ರವಾಸೋದ್ಯಮಗಳಲ್ಲಿ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಬೇಕು. ಆದರೆ ಅವಕಾಶ, ಮಾರುಕಟ್ಟೆ ಮತ್ತು ಕೌಶಲ್ಯಗಳ ಲಭ್ಯತೆಯ ಕೊರತೆಯಿಂದ ಈ ಕ್ಷೇತ್ರದಲ್ಲಿ ಅವರ ಭಾಗವಹಿಸುವಿಕೆ ಕಡಿಮೆಯಿದೆ.

**೫.೧.೪.೨.** ಸಂಘಟಿತ ಮತ್ತು ಅರೆ-ಸಂಘಟಿತ ವಲಯಗಳಾದ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಆಹಾರ ಸಂಸ್ಕರಣೆ, ಕೃಷಿ ಆಧಾರಿತ ಕೈಗಾರಿಕೆ, ಜವಳಿ ಉದ್ದಿಮೆ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ಅವಕಾಶ, ನೇಮಕಾತಿ ಮತ್ತು ಬಡ್ತಿ ನೀಡುವುದರಲ್ಲಿ ಕಂಡುಬರುವ ತಾರತಮ್ಯಗಳನ್ನು ನಿರ್ಮೂಲನೆ ಮಾಡಬೇಕು

**೫.೧.೪.೩.** ಸೇವಾ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಆದ್ಯತೆ ಮತ್ತು ಪ್ರಾಮುಖ್ಯತೆ ನೀಡಬೇಕು, ಹೋಟೆಲ್ ಮತ್ತು ಉಪಾಹಾರ ಮಂದಿರ, ಆಹಾರೋದ್ಯಮ, ಪೆಟ್ರೋಲ್ ಪಂಪ್‌ಗಳು, ಸಾರಿಗೆ ಸೇವೆಗಳು, ಮನರಂಜನೆ ಇತ್ಯಾದಿಗಳಲ್ಲಿ ಸಮರ್ಪಕ ರಹದಾರಿ ನೀತಿಗಳನ್ನು ಮತ್ತು ಸಹಾಯ ಸೇವೆಗಳನ್ನು ಒದಗಿಸಬೇಕು.

**೫.೧.೪.೪.** ಮಹಿಳಾ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವುದು ಮತ್ತು ಪ್ರೇರಕಗೊಳಿಸುವುದು.

೫.೧.೪.೫. ಜಿಲ್ಲಾ ಕೈಗಾರಿಕಾ ಕೇಂದ್ರಗಳು, ಕರ್ನಾಟಕ ರಾಜ್ಯ ಹಣಕಾಸು ನಿಗಮ ಮತ್ತು ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಸಂಸ್ಥೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸಬೇಕು, ಅವರಿಗೆ ಸೌಲಭ್ಯಗಳಾದ ಸಮಾಲೋಚನೆ, ಅರ್ಜಿ, ಸಲ್ಲಿಸುವಿಕೆ, ಅನುಮತಿ, ಅನುಮೋದನೆ ಪಡೆಯುವುದು, ಕಚ್ಚಾ ಸಾಮಾಗ್ರಿ ಪೂರೈಕೆ ಮತ್ತು ಮಾರಾಟಕ್ಕೆ ಮಾರ್ಗದರ್ಶನ ನೀಡುವಂತಹ ಸೇವೆಗಳು ಒಂದೇ ಸೂರಿನಡಿ ಸಿಗುವಂತೆ ಮಾಡಬೇಕು.

೫.೧.೪.೬. ಪ್ರವಾಸೋದ್ಯಮದಲ್ಲಿ ಮಹಿಳೆಯರ ಪ್ರಮುಖ ಆರ್ಥಿಕ ಕೊಡುಗೆಗಳನ್ನು ಮಾನ್ಯ ಮಾಡಬೇಕು. ಮಹಿಳಾ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ ಮೂಲಕ ಮಹಿಳಾ ಉದ್ಯಮಶೀಲತೆಯನ್ನು ಸಮಗ್ರಗೊಳಿಸುವುದು, ಆದಾಯೋತ್ಪನ್ನ ಚಟುವಟಿಕೆಗಳಲ್ಲಿ ಅವಕಾಶವನ್ನು ಕಲ್ಪಿಸಿಕೊಡುವದು, ಹಾಗು ಪರಿಣಾಮಕಾರಿ ಮಾರುಕಟ್ಟೆಯನ್ನು ಒದಗಿಸಿಕೊಡಬೇಕು.

ಪಿ.ಎಂ.ಇ.ಜಿ.ಬಿ, ಕೆ.ವಿ.ಐ.ಸಿ ಮತ್ತು ಇತರೆ ಸ್ವ-ಉದ್ಯೋಗ ಸೃಷ್ಟಿ ಕಾರ್ಯಕ್ರಮಗಳಲ್ಲಿ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳೆಯರಿಗೆ ಆದ್ಯತೆ ನೀಡುವುದು. ಒಟ್ಟು ಅನುದಾನದಲ್ಲಿ ಶೇಕಡ ೩೩ ಅನ್ನು ಮಹಿಳೆಯರಿಗೆ ಮೀಸಲಿಡುವುದು.

೫.೧.೪.೭. ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ವಿಶೇಷ ಸೌಲಭ್ಯಗಳು, ಮಾರುಕಟ್ಟೆ ಸ್ಥಳಗಳು ಮತ್ತು ಎ.ಪಿ.ಎಂ.ಸಿ ಮತ್ತು ಮಾರುಕಟ್ಟೆ ಸಮಿತಿಗಳಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ದೊರಕುವಂತೆ ಮಾಡುಬೇಕು.

೫.೧.೪.೮. ಈ ಕ್ಷೇತ್ರಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದನ್ನು ಪ್ರೋತ್ಸಾಹಿಸಲು ಒಂದು 'ಸಮಾನ ಅವಕಾಶಗಳ ಸಮಿತಿ'ಯನ್ನು ಸ್ಥಾಪಿಸಬೇಕು.

೫.೧.೪.೯. ಜಂಡರ್ ಸ್ನೇಹಿ ಸಾರ್ವಜನಿಕ ಸಾರಿಗೆ, ಉದ್ಯೋಗಸ್ತ ಮಹಿಳೆಯರಿಗೆ ವಸತಿನಿಲಯ, ವಿಶ್ರಾಂತಿ ಕೊಠಡಿ, ಶೌಚಾಲಯ ಸೌಲಭ್ಯ, ಮಗು ಮತ್ತು ಆರೋಗ್ಯ ಸೇವಾ ಸೌಲಭ್ಯ ಮುಂತಾದ ಮೂಲ ಸೌಕರ್ಯಗಳನ್ನು ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಒದಗಿಸಬೇಕು.

೫.೧.೪.೧೦. ಕಾರ್ಯನೀತಿಯನ್ನು ತಯಾರಿಸುವಾಗ ನಡವಳಿಕೆ ಸಂಹಿತೆಯನ್ನು ಅಳವಡಿಸಿಕೊಂಡರೆ ಕ್ಷೇಮ. ಪ್ರವಾಸೋದ್ಯಮ ಸಚಿವಾಲಯವು ಪ್ರವಾಸಸೋದ್ಯಮವನ್ನು ಅಭಿವೃದ್ಧಿಗೊಳಿಸುವಾಗ ಮಹಿಳೆಯರ ಮೇಲೆ ಯಾವುದೇ ಪ್ರಕಾರದ ಅಪರಾಧ ನಡೆಯದಂತೆ ಮತ್ತು ಶೋಷಣೆ ನಡೆಯದಂತೆ ರಕ್ಷಣೆ ನೀಡಬೇಕು. ಲೈಂಗಿಕ ಪ್ರವಾಸೋದ್ಯಮ ಮತ್ತು ಅಲ್ಲಿ ನಡೆಯುವ ಎಲ್ಲಾ ರೀತಿಯ ಲೈಂಗಿಕ ಶೋಷಣೆಯನ್ನು ತಡೆಗಟ್ಟಬೇಕು

೫.೧.೪.೧೧. ಈ ಕ್ಷೇತ್ರಗಳಲ್ಲಿ ಮಹಿಳೆಯರಿಗಿರುವ ವಿಶೇಷ ಸೌಲಭ್ಯಗಳ ಅನುಷ್ಠಾನವನ್ನು ಮೆಲ್ವಿಚಾಣೆ ಮಾಡಲು ಮತ್ತು ಪರಿಣಾಮಗಳನ್ನು ವಿಶ್ಲೇಷಿಸಲು ಒಂದು ಮೇಲ್ವಿಚಾರಣಾ ವ್ಯವಸ್ಥೆಯನ್ನು ಸ್ಥಾಪಿಸಬೇಕು.

### ೫.೧.೫. ಅಸಂಘಟಿತ ವಲಯಗಳಲ್ಲಿ ಗೌರವಯುತ ಕೆಲಸ ಮತ್ತು ಸಾಮಾಜಿಕ ಭದ್ರತೆ :

೫.೧.೫.೧. ಅಸಂಘಟಿತ ವಲಯವು ಅಧಿಕ ಮಹಿಳೆಯರನ್ನು ಒಳಗೊಂಡಿದ್ದು ಇಲ್ಲಿ ಅವರು ಉತ್ಪಾದಕರಾಗಿ, ಕೆಲಸಗಾರರಾಗಿ, ಸೇವೆಯನ್ನು ಒದಗಿಸುವವರಾಗಿ ದುಡಿಯುತಿದ್ದಾರೆ. (ಲೈಂಗಿಕ ಕಾರ್ಯಕರ್ತರನ್ನೂ ಒಳಗೊಂಡಂತೆ). ಈ ಮಹಿಳೆಯರಿಗೆ ಯೋಗ್ಯ ಕೆಲಸ ಮತ್ತು ಸಾಮಾಜಿಕ ಭದ್ರತೆಯನ್ನು ಕಲ್ಪಿಸಿಕೊಡಬೇಕು. ಕಾರ್ಮಿಕ ಕಾಯ್ದೆ ಮತ್ತು ಸಾಮಾಜಿಕ ಭದ್ರತೆಯ ಕ್ರಮಗಳು ದುಡಿಮೆಗಾರರಿಗೆ ಅನ್ವಯಿಸುವುದಿಲ್ಲ. ಈ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚು ಶೋಷಣೆ ಮತ್ತು ತಾರತಮ್ಯಕ್ಕೆ ಒಳಗಾಗುತ್ತಾರೆ. ಕಡಿಮೆ ವೇತನ, ಕೆಟ್ಟ ಮತ್ತು ಅಶುಚಿತ್ವದಿಂದ ಕೂಡಿದ ಪರಿಸರದಲ್ಲಿ ಕೆಲಸಮಾಡುತ್ತಾರೆ, ಇಲ್ಲಿ ಯಾವುದೆ ಸುರಕ್ಷತೆ ಮತ್ತು ಭದ್ರತೆಯಿರುವುದಿಲ್ಲ.

೫.೧.೫.೨. ಅಧಿಕ ವೇತನ, ಒಳ್ಳೆಯ ಕೆಲಸದ ಪರಿಸರ, ಕೆಲಸದ ದಾಖಲೆ, ಕೆಲಸದ ಉಪಕರಣಗಳು ಮತ್ತು ಸುರಕ್ಷತಾ ಪರಿಸರವನ್ನು ಒದಗಿಸಿ ಗೌರವಯುತವಾಗಿ ದುಡಿಯುವಂತೆ ಮಾಡಬೇಕು.

೫.೧.೫.೩. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಸೂಕ್ತ ಸೌಲಭ್ಯ ಮತ್ತು ಸುರಕ್ಷತೆಯನ್ನು ಒದಗಿಸಬೇಕು. ಸೇವಾ ಕ್ಷೇತ್ರಗಳಾದ ಬಿ.ಪಿ.ಒ, ಆಸ್ಪತ್ರೆ, ಮಾಹಿತಿ ತಂತ್ರಜ್ಞಾನ ವಲಯ, ಸಾರಿಗೆ ಮತ್ತು ಪ್ರವಾಸೋದ್ಯಮ, ಹೋಟೆಲ್ ನಿರ್ವಹಣೆ ಮುಂತಾದವುಗಳಲ್ಲಿ ಮಹಿಳೆಯರಿಗೆ ಉತ್ತಮ ಸುರಕ್ಷತೆ ದೊರಕುವಂತಾಗಬೇಕು. ಸುರಕ್ಷಿತ ಮತ್ತು ಗೌರವಯುತ ಪ್ರವಾಸೋಧ್ಯಮದಲ್ಲಿ ನಡವಳಿಕೆ ಸಂಹಿತೆಯನ್ನು ಸರಿಯಾಗಿ ಅನುಷ್ಠಾನಗೊಳಿಸಬೇಕು.

೫.೧.೫.೪. ಉದ್ಯೋಗಿಗಳ ಸೇವಾ ವಿಮೆ(ಇ.ಎಸ್.ಐ) ಹೆರಿಗೆ ರಜೆ, ಮಕ್ಕಳ ರಕ್ಷಣೆ, ಗುಂಪು ವಿಮೆ, ಅಪಘಾತ ಸಂತ್ರಸ್ತರಿಗೆ ಸೂಕ್ತ ಪರಿಹಾರಗಳನ್ನು ಒಳಗೊಂಡಿರುವ ಸಮಗ್ರವಾದ ಸಾಮಾಜಿಕ ಭದ್ರತೆಯ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು.

೫.೧.೫.೫. ಕುಟುಂಬದ ಒಳಗೆ ಮತ್ತು ಹೊರಗೆ ಮಹಿಳೆಯರ ಮೇಲೆ ನಡೆಯುವ ಶೋಷಣೆ, ಲೈಂಗಿಕ ಕಿರುಕುಳ, ದೌರ್ಜನ್ಯ ಮತ್ತು ಅಪರಾಧ ತಡೆಯಲು ಸೂಕ್ತ ವ್ಯವಸ್ಥೆ ಹಾಗು ವೇದಿಕೆಯನ್ನು ನಿರ್ಮಿಸಬೇಕು.

೫.೧.೫.೬. ಕೆಲಸ ಮತ್ತು ವೇತನದಲ್ಲಿ ತೋರುವ ತಾರತಮ್ಯ, ಶೋಷಣೆ, ಲೈಂಗಿಕ ಕಿರುಕುಳ, ಅನ್ಯಾಯಗಳನ್ನು ನಿಲ್ಲಿಸಲು ಸಮಿತಿಗಳನ್ನು ಸ್ಥಾಪಿಸಬೇಕು. ಆಡಳಿತ ಮತ್ತು ಪ್ರಕರಣಗಳನ್ನು ಬಗೆಹರಿಸುವುದಕ್ಕೆ ಸಂಬಂಧಪಟ್ಟಂತೆ ಸಾಮಾಜಿಕ ಮತ್ತು ಆಡಳಿತ ಜಂಡರ್ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಬೇಕು.

೫.೧.೫.೭. ಗ್ರಾಮೀಣ ಮತ್ತು ನಗರ ದ ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಪ್ರಕರಣಗಳನ್ನು ನಿವಾರಿಸಲು ತ್ರಿಪೀಠ ಮಂಡಳಿಯ ಸ್ಥಾಪನೆಯಾಗಬೇಕು. ಇಲ್ಲಿ ಕೈಗೊಂಡ ನಿದಾರ್ರ್ಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮತ್ತು ಅನುಸರಣೆಗೊಳಿಸಲು ಸೂಕ್ತ ವ್ಯವಸ್ಥೆ ಮಾಡಿಕೊಳ್ಳಬೇಕು.

೫.೧.೫.೮. ಸಾಮಾಜಿಕ ಭದ್ರತಾ ನಿಧಿಯನ್ನು ಸ್ಥಾಪಿಸಲು ಒಟ್ಟು ಆಯವ್ಯದಲ್ಲಿ ಶೇಕಡ ೩ ರಷ್ಟನ್ನು ವಿಶೇಷವಾಗಿ ಹಂಚಿಕೆ ಮಾಡಬೇಕು. ಈ ನಿಧಿಯನ್ನು ದಾನ, ಕೊಡುಗೆಗಳ ಮೂಲಕ ಹೆಚ್ಚಿಸಬಹುದು.

ಬೀದಿಯಲ್ಲಿ ಮಾರಾಟ ಮಾಡುವ, ಮನೆಕೆಲಸ ಮತ್ತು ಗೃಹ ಆಧಾರಿತ ಕೆಲಸಗಳಲ್ಲಿ ತೊಡಗಿರುವ ಮಹಿಳೆಯರಿಗೆ ವಿಶೇಷ ಸಾಮಾಜಿಕ ಭದ್ರತೆಯನ್ನು ಒದಗಿಸಬೇಕು.

## ೫.೧.೬. ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ

೫.೧.೬.೧. ಜಾಗತೀಕರಣದಿಂದ ಕೌಶಲ್ಯ ಅಭಿವೃಧ್ಧಿಯು ಹೆಚ್ಚಿನ ಮಹತ್ವ ಪಡೆದುಕೊಂಡಿತು.ಇದಕ್ಕೆ ಉನ್ನತ ಮಟ್ಟದ ಶಿಕ್ಷಣ ಅವಶ್ಯಕ. ಮಹಿಳೆಯರು ಮತ್ತು ಅಸಂಘಟಿತ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಇದು ತಲುಪಿಲ್ಲ. ಆದರೆ ಮತ್ತೊಂದೆಡ ಜಾಗತೀಕರಣವು ಹೊಸ ಮಾರುಕಟ್ಟೆಯನ್ನು ಸೃಷ್ಟಿಸುತ್ತಿರುವುದರಿಂದ ಕೆಲಸಗಾರರು ಪಾರಂಪರಿಕ ಕೌಶಲ್ಯಗಳನ್ನು ಪುನರ್‌ರಚಿಸಿಕೊಳ್ಳುತ್ತಿದ್ದಾರೆ ಮತ್ತು ಹೊಸ ಕೌಶಲ್ಯಗಳನ್ನು ಸಂಪಾದಿಸಿಕೊಳ್ಳುತ್ತಿದ್ದಾರೆ. ಶಿಕ್ಷಣ, ಕೌಶಲ್ಯ, ಉದ್ಯಮಶೀಲತೆ ಮತ್ತು ನಿರ್ವಹಣಾ ಕೌಶಲ್ಯ ಕೊರತೆಯು ಜಾಗತೀಕರಣಗೊಂಡ ವಲಯಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ದೊಡ್ಡ ಅಡಚಣೆಯುಂಟುಮಾಡುತ್ತಿದೆ

೫.೧.೬.೨. ಸರ್ಕಾರವು ಕಾರ್ಪೊರೆಟ್ ವಲಯಗಳೊದಿಗೆ ಸೇರಿ ಕಡಿಮೆ ಜಂಡರ್ ಅನುಪಾತವಿರುವ (ಚಿಲ್ಲರೆ ವ್ಯಾಪಾರ ಮತ್ತು ಮಾರುಕಟ್ಟೆ), ಮತ್ತು ತರಬೇತಿ ಹೊಂದಿದ ಸಿಬ್ಬಂದಿ ಕೊರತೆಯಿರುವ ವಲಯಗಳನ್ನು ಗುರುತಿಸಬೇಕು. ಅಲ್ಲಿ ಸಾಕಷ್ಟು ಮತ್ತು ಸಮರ್ಪಕ ಸಾಮರ್ಥ್ಯಾಭಿವೃದ್ಧಿ ತರಬೇತಿಗಳನ್ನು ಆಯೋಜಿಸಬೇಕು.

ಉದ್ಯಮಶಿಲತಾ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮಹಿಳೆಯರ ಉದ್ಯಮಶಿಲತೆಗೆ ಆದ್ಯತೆ ನೀಡಿ ಪ್ರೋತ್ಸಾಹಿಸಬೇಕು. ಉದ್ಯಮಗಳನ್ನು ಸ್ಥಾಪಿಸಲು ಮೂಲಭೂತ ಸೌಕರ್ಯ, ಸಾಲ ಸೌಲಭ್ಯ ಮತ್ತು ಬೆಂಬಲ ಸೇವಾ ಸೌಲಭ್ಯವನ್ನು ಒದಗಿಸಬೇಕು.

ರಾಷ್ಟ್ರೀಯ ಮತ್ತು ರಾಜ್ಯ ಕೌಶಲ್ಯ ಅಭಿವೃದ್ಧಿ ನಿಗಮಗಳು ಮಹಿಳೆಯರ ಕೌಶಲ್ಯ ಅವಶ್ಯಕತೆಗಳನ್ನು ಪರಿಗಣಿಸಿ ಅದಕ್ಕೆ ತಕ್ಕಂತೆ ಪಠ್ಯವನ್ನು ವಿನ್ಯಾಸಗೊಳಿಸಬೇಕು. ಉದ್ಯೋಗ ದೊರಕಿಸಿಕೊಡುವಂತಹ ಕೌಶಲ್ಯಗಳಲ್ಲಿ ತರಬೇತಿ ನೀಡಬೇಕು.

.೬.೩. ಮಹಿಳೆಯರಿಗೆ ಪುನರ್ ತರಬೇತಿ ನೀಡಿ ಅವರ ಕೌಶಲ್ಯವನ್ನು ಉನ್ನತಗೊಳಿಸುವುದಕ್ಕೆಂದೆ ವೃತ್ತಿ ತರಬೇತಿ ಸಂಸ್ಥೆಗಳಲ್ಲಿ ಕೆಲವು ತರಗತಿಗಳನ್ನು ಮೀಸಲಿಡಬೇಕು. ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುವ ಸಲುವಾಗಿ ಕೆಲಸದಿಂದ ವಿರಾಮ ತೆಗೆದುಕೊಂಡ ಮಹಿಳೆಯರಿಗೆ (ಮಕ್ಕಳ ಪೋಷಣೆ ಪಾಲನೆಯು ಸೇರಿದಂತೆ) ವಿಶೇಷ ತರಬೇತಿ ಆಯೋಜಿಸಬೇಕು. ಇದರಿಂದ ಮಹಿಳೆಯರು ಪುನರ್ ಪ್ರವೇಶ ಪಡೆದು ಕೆಲಸದಲ್ಲಿ ಮುಂದುವರೆಯಲು ಸಾದ್ಯವಾಗುತ್ತದೆ.

ಇ–ಟ್ರೇಡಿಂಗ್, ಇ–ಬಿಸಿನೆಸ್ ಮತ್ತು ಇ–ಕಾಮರ್ಸ್‌ಗಳಲ್ಲಿ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಹಿಳೆಯರ ಸಾಮರ್ಥ್ಯವನ್ನು ಬೆಳೆಸಬೇಕು.

**೫.೧.೬.೪.** ನಿರಂತರವಾಗಿ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ ಸಣ್ಣ ಉದ್ಯಮಗಳ ಸ್ಥಾಪನೆ ಮತ್ತು ನಿರ್ವಹಣೆಯ ಬಗ್ಗೆ ಮಹಿಳೆಯರಿಗೆ ತರಬೇತಿ ನೀಡಬೇಕು. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ ಸ್ವ ಸಹಾಯ ಸಂಘಗಳಲ್ಲಿ ಕೌಶಲ್ಯ ಆಧಾರಿತ ಸಹಕಾರಿ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸಬೇಕು.

**೫.೧.೬.೫.** ವ್ಯಾಪಾರಕ್ಕೆ ತುಂಬ ಅವಶ್ಯಕವಾದ ಸಂವಹನ ಕೌಶಲ್ಯ ತರಬೇತಿಯನ್ನು ಮಹಿಳಾ ಉದ್ಯಮಿಗಳಿಗೆ ನೀಡಬೇಕು. ಉದ್ಯಮ ಕ್ಷೇತ್ರದಲ್ಲಿ ಖ್ಯಾತಿ ಗಳಿಸಿದ ಮಹಿಳಾ ಉದ್ಯಮಿಗಳಿಂದ ಉಪನ್ಯಾಸ ಏರ್ಪಡಿಸುವುದರ ಮೂಲಕ ಮಹಿಳೆಯರಲ್ಲಿ ಉದ್ಯಮಶಿಲತೆಯನ್ನು ಪ್ರೋತ್ಸಾಹಿಸಬೇಕು.

**೫.೧.೬.೬.** ಜಿಲ್ಲಾ ಕೈಗಾರಿಕಾ ಕೇಂದ್ರಗಳು, ಎಂ.ಎಸ್.ಎಂ.ಇ ಅಭಿವೃದ್ಧಿ ಸಂಘಟನೆ, ಕರ್ನಾಟಕ ರಾಜ್ಯ ಹಣಕಾಸು ನಿಗಮ ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸಬೇಕು. ಅವರು ಸ್ಥಾಪಿಸಲು ಯೋಗ್ಯವಾದ ಉದ್ಯಮಗಳನ್ನು ಗುರುತಿಸಲು, ಯೋಜನಾ ವರದಿ ತಯಾರಿಸಲು, ಏಕಗವಾಕ್ಷಿ ಸೇವಾ ಸೌಲಭ್ಯ ಸಿಗುವಂತೆ ಮಾಡುವುದು, ಸಾಲ ಸೌಲಭ್ಯ ಮತ್ತು ಬ್ಯಾಂಕ್ ಸಂಪರ್ಕ ಮುಂತಾದವುಗಳಿಗೆ ನೆರವು ನೀಡಬೇಕು. ಎಲ್ಲಾ ಕಂಪೆನಿಗಳ ಸಾಮಾಜಿಕ ಜವಾಬ್ದಾರಿ ಕಾರ್ಯಕ್ರಮಗಳು ಮಹಿಳೆಯರ ಸಬಲೀಕರಣ, ಸಾಮರ್ಥ್ಯಾಭಿವೃದ್ಧಿ ಮತ್ತು ತರಬೇತಿ ಘಟಕಗಳನ್ನು ಒಳಗೊಂಡಿರಬೇಕು.

**೫.೧.೬.೭.** ಕರಕುಶಲ, ಕೈಮಗ್ಗ ಮತ್ತು ಇತರ ಕ್ಷೇತ್ರಗಳಲ್ಲಿ ಮಹಿಳೆಯರು ಹೊಂದಿರುವ ಪಾರಂಪರಿಕ ಕೌಶಲ್ಯಗಳನ್ನು ಗುರುತಿಸಿ, ಸೂಕ್ತ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಇದರಿಂದ ಸ್ಥಳೀಯ ಹಾಗೂ ಜಾಗತಿಕ ಮಾರುಕಟ್ಟೆಯ ಅಭಿರುಚಿ ಮತ್ತು ಅವಶ್ಯಕತೆಗಳಿಗೆ ಅನುಗುಣವಾಗಿ ತಯಾರಾಗಲು ಪುನರ್ ರೂಪುಗೊಳ್ಳುತ್ತಾರೆ.

### ೫.೧.೭. ಸೂಕ್ಷ್ಮ ಸಾಲ ಮತ್ತು ಸ್ವ–ಸಹಾಯ ಸಂಘಗಳು :

**೫.೧.೭.೧.** ಸ್ವ–ಸಹಾಯ ಸಂಘ ಮತ್ತು ಮಹಿಳಾ ಗುಂಪುಗಳನ್ನು, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಮಟ್ಟದಲ್ಲಿ ಮಹಿಳೆಯರ ಕತೃತ್ವನ್ನು ಹೆಚ್ಚು ಮಾಡುವ ವಿಶಾಲ ಕಾರ್ಯತಂತ್ರದ ಭಾಗವನ್ನಾಗಿ ನೋಡಬೇಕು. ಅದೇ ಸಮಯದಲ್ಲಿ ಮಹಿಳೆಯರ ಅತ್ಮವಿಶ್ವಾಸ, ಅರಿವು, ವ್ಯವಾಹರ ಸಾಮರ್ಥ್ಯ, ಸಾಕ್ಷರತೆ, ಆರೋಗ್ಯ ಕಾರ್ಯನೀತಿ ಮತ್ತು ಕಾರ್ಯಕ್ರಮಗಳನ್ನೂ ಸಹ ಹಮ್ಮಿಕೊಳ್ಳಬೇಕು. ಇದರ ಜೊತೆಗೆ, ಸೂಕ್ಷ್ಮ ಹಣಕಾಸು ವ್ಯವಸ್ಥೆಯನ್ನು ಸುಸ್ಥಿರ ಸಬಲೀಕರಣವನ್ನಾಗಿ ಪರಿವರ್ತಿಸಲು ವೃತ್ತಿಪರ, ಉದ್ಯಮಶೀಲ ಮತ್ತು ನಿರ್ವಹಣಾ ಕೌಶಲ್ಯಗಳನ್ನು ಬೆಳೆಸಬೇಕು.

**೫.೧.೭.೨.** ನಗರ ಮತ್ತು ಗ್ರಾಮೀಣ ಪ್ರದೇಶಗಳ ಬಡ ಮಹಿಳೆಯರನ್ನು ಸಶಕ್ತಗೊಳಿಸಲು ಸ್ವ ಸಹಾಯ ಸಂಘಗಳು ಪ್ರಬಲವಾದ ಕಾರ್ಯತಂತ್ರವಾಗಬಹುದು. ಸ್ವ–ಸಹಾಯ ಸಂಘಗಳು ಕ್ಷಿಪ್ರವಾಗಿ ಬೆಳಯುತ್ತಿದ್ದರೂ ಅಗತ್ಯ ಸಹಾಯ ಸಿಗದೆ ಇರುವುದರಿಂದ ಹೆಚ್ಚಿನ ಸಂಘಗಳು ಸುಸ್ಥಿರವಾಗಿ ನಡೆಯಲು ಸಾಧ್ಯವಾಗುತ್ತಿಲ್ಲ. ಗುರಿ ಸಾದಿಸುವ ಒತ್ತಡವಿರುವುದರಿಂದ ಅನುದಾನ ನೀಡುವ ಸಂಸ್ಥೆಗಳು ಸ್ವ–ಸಹಾಯ ಸಂಘದ ಸದಸ್ಯರುಗಳ ಮೇಲೆ ಹಕ್ಕು ಚಲಾಯಿಸುತ್ತವೆ. ಇದರಿಂದ ಸ್ವ ಸಹಾಯ ಸಂಘಗಳಲ್ಲಿರುವ ಮಹಿಳೆಯರ ಸಂಖ್ಯೆಯನ್ನು ಉತ್ಪ್ರೇಕ್ಷೆಮಾಡಿ ಹೇಳಲಾಗುತ್ತದೆ. ಇದು ತಳ ಮಟ್ಟದಲ್ಲಿ ಸ್ವ ಸಹಾಯ ಸಂಘದ ಸದಸ್ಯರುಗಳ ನಡುವೆ ಗೊಂದಲ ಮತ್ತು ಜಗಳವನ್ನು ಹುಟ್ಟು ಹಾಕುತ್ತಿದೆ. ಸಂಘಗಳನ್ನು ಸುಸ್ಥಿರವಾಗಿ ಉಳಿಸಲು ಸೂಕ್ತ ತಂತ್ರಗಳನ್ನು ರೂಪಿಸಬೇಕಾಗಿದೆ.

೫.೧.೭.೩. ಅನುಭೋಗ ಮತ್ತು ಉತ್ಪಾದನೆಗೋಸ್ಕರ ಮಹಿಳೆಯರ ಸಾಲ ಸೌಲಭ್ಯದ ಲಭ್ಯತೆಯನ್ನು ಹೆಚ್ಚಿಸಬೇಕು. ಹೊಸ ಸೂಕ್ಷ್ಮ ಹಣಕಾಸು ವ್ಯವಸ್ಥೆಯನ್ನು ಸ್ಥಾಪಿಸುವುದು ಮತ್ತು ಈಗಿರುವ ಸೂಕ್ಷ್ಮ– ಹಣಕಾಸು ವ್ಯವಸ್ಥೆ ಹಾಗು ಸೂಕ್ಷ್ಮ ಹಣಕಾಸು ಸಂಸ್ಥೆಯನ್ನು ಬಲಪಡಿಸಬೇಕು. ಇದರಿಂದ ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ಮಹಿಳೆಯರಿಗೂ ಸಾಲ ಸೌಲಭ್ಯವು ಸುಲಭವಾಗಿ ದೊರಕುತ್ತದೆ.

೫.೧.೭.೪ ಸರ್ಕಾರವು ಸೂಕ್ಷ್ಮ ಹಣಕಾಸು ಆಂದೋಲವನ್ನು ಒಳಗೊಳ್ಳುವಿಕೆಯನ್ನಾಗಿ ಮಾಡಬೇಕು. ಏಕೆಂದರೆ ಸ್ವ ಸಹಾಯ ಸಂಘಗಳಿಂದ ನಿರೀಕ್ಷಿಸುವ ಉಳಿತಾಯದ ಮೊತ್ತ ಹಾಗು ನಿರಂತರತೆಯಿಂದ ಅತ್ಯಂತ ಬಡವರು, ದಲಿತ, ಆದಿವಾಸಿ, ಮುಸ್ಲಿಂ ಸಮುದಾಯದವರು ಮತ್ತು ಮಹಿಳಾ ಯಜಮಾನಿಕೆ ಕುಟುಂಬಗಳೂ ಸ್ವ–ಸಹಾಯ ಸಂಘಗಳಿಂದ ಹೊರಗುಳಿದಿದ್ದಾರೆ.

೫.೧.೭.೫. ಮಹಿಳಾ ಸ್ವ–ಸಹಾಯ ಸಂಘಗಳು ಭೂಮಿಯನ್ನು ಕೊಂಡುಕೊಂಡು ಗುಂಪು ವ್ಯವಸಾಯ ಮಾಡಲು ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕ್‌ಗಳು ಪ್ರೋತ್ಸಾಹ ನೀಡಬೇಕು. ಬ್ಯಾಂಕ್‌ಗಳು ಮಹಿಳೆಯರಿಗಾಗಿ ಉಳಿತಾಯ ಖಾತೆ ಮತ್ತು ಸಾಲಗಳನ್ನು ಮೀಸಲಿಡಬೇಕು. ಮಹಿಳೆಯರಿಗಾಗಿಯೆ ಪ್ರತ್ಯೇಕ ರಾಜ್ಯ ಮಟ್ಟದ ಸಹಕಾರಿ ಬ್ಯಾಂಕ್‌ನ್ನು ಸ್ಥಾಪಿಸಬೇಕು.

೫.೧.೭.೬. ಕೃಷಿಯಲ್ಲಿ ತೊಡಗಿರುವ ಮಹಿಳೆಯರಿಗೆ ಹಣಕಾಸಿನ ಸಾಲವನ್ನು ವ್ಯಕ್ತಿಗತವಾಗಿ ಮತ್ತು ಮಹಿಳಾ ಗುಂಪುಗಳಿಗೆ ನೀಡಬೇಕು. ಈ ನಿಟ್ಟಿನಲ್ಲಿ ಜಿಲ್ಲಾ ಬ್ಯಾಂಕ್‌ಗಳು ಮತ್ತು ಲೀಡ್ ಬ್ಯಾಂಕ್‌ಗಳಿಗೆ ಗುರಿಯನ್ನು ನಿಗದಿಪಡಿಸಿ ವ್ಯವಸಾಯದಲ್ಲಿ ತೊಡಗಿರುವ ಮಹಿಳೆಯರಿಗೆ ಮತ್ತು ಸ್ವ–ಸಹಾಯ ಸಂಘಗಳಿಗೆ ಹಣಕಾಸಿನ ನೆರವು ನೀಡಬೇಕು. ಸಾವಯವ ಕೃಷಿಯಲ್ಲಿ ತೊಡಗಿರುವ ಮಹಿಳೆಯರಿಗೆ ಆದ್ಯತೆಯ ಮೇರೆಗೆ ರಿಯಾಯಿತಿ ನೀಡಬೇಕು

೫.೧.೭.೭. ಕರ್ನಾಟಕ ಸರ್ಕಾರವು, ಕಾರ್ಯಕ್ರಮ ಮತ್ತು ಅದರ ಕಾರ್ಯಕರ್ತರ ನಿರ್ವಹಣೆಗೆ ಮಾಡುವ ಖರ್ಚಿನಲ್ಲಿ ಕಂಡುಬರುವ ವಂಚನೆಯನ್ನು ತಪ್ಪಿಸಬೇಕು. ವಂಚನೆ, ಗೊಂದಲ ಮತ್ತು ಸರ್ಕಾರದ ಬೊಕ್ಕಸವನ್ನು ಕಡಿತಗೊಳಿಸಲು ಸ್ವ ಸಹಾಯ ಸಂಘಗಳ ಚಳುವಳಿಯನ್ನು ಕರ್ನಾಟಕದಲ್ಲು, ಬೇರೆ ರಾಜ್ಯಗಳಲ್ಲಿರುವಂತೆ ಒಂದೇ ಇಲಾಖೆಯಡಿ ಅನುಷ್ಠಾನಗೊಳಿಸಬೇಕು. ಇದರಿಂದ ರಾಜ್ಯದಲ್ಲಿ ಸ್ವ–ಸಹಾಯ ಚಳುವಳಿಗೆ ವೇಗ ಮತ್ತು ಬಲ ಸಿಕ್ಕಂತಾಗುತ್ತದೆ. ಎಲ್ಲಾ ಇಲಾಖೆಗಳ ಕಾರ್ಯಕ್ರಮಗಳನ್ನು ಒಗ್ಗೂಡಿಸಿ ಅನುಷ್ಠಾನಗೊಳಿಸಬೇಕು.

## ೫.೧.೮. ವಿಜ್ಞಾನ ಮತ್ತು ತಂತ್ರಜ್ಞಾನ :

೫.೧.೮.೧. ವೈಜ್ಞಾನಿಕ ಮನೋಭಾವ ಮತ್ತು ಅರಿವನ್ನು ಬೆಳೆಸಲು ಹೆಚ್ಚಿನ ಶ್ರಮ ಹಾಕಬೇಕು.

೫.೧.೮.೨. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಹೆಚ್ಚು ಮಹಿಳೆಯರನ್ನು ಸೇರಿಸಿಕೊಳ್ಳಲು ಈಗಿರುವ ಕಾರ್ಯಕ್ರಮಗಳನ್ನು ಬಲಗೊಳಿಸಬೇಕು. ಇದರಲ್ಲಿ ಹೆಣ್ಣು ಮಕ್ಕಳು ಉನ್ನತ ಮಟ್ಟದ ಶಿಕ್ಷಣದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯಗಳನ್ನು ತೆಗೆದುಕೊಳ್ಳುವಂತೆ ಪ್ರೇರೇಪಿಸಬೇಕು ಮತ್ತು ಅದಕ್ಕೆ ಬೇಕಾದ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

೫.೧.೮.೩. ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿ ಯೋಜನೆಗಳಲ್ಲಿ ಮಹಿಳೆಯರನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು. ವೈಜ್ಞಾನಿಕ ಸಂಶೋಧನೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಮಹಿಳಾ ಸಂಶೋಧಕರಿಗಾಗಿ ವಿಶೇಷ ಸಂಶೋಧನಾ ಅನುದಾನವನ್ನು ಪ್ರಾರಂಭಿಸಬೇಕು.

೫.೧.೮.೪. ಮಹಿಳೆಯರಿಗೆ ವಿಶೇಷ ಕೌಶಲ್ಯವಿರುವ ಸಂವಹನ ಮತ್ತು ಮಾಹಿತಿ ತಂತ್ರಜ್ಞಾನದಂತಹ ಕ್ಷೇತ್ರದಲ್ಲಿ ತರಬೇತಿ ನೀಡಲು ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕು.

೫.೧.೮.೫. ಮಹಿಳೆಯರ ಅವಶ್ಯಕತೆಗೆ ಅನುಗುಣವಾಗಿ ಸೂಕ್ತ ತಂತ್ರಜ್ಞಾನಗಳನ್ನು ಅಭಿವೃದ್ಧಿಗೊಳಿಸಬೇಕು ಜೊತೆಗೆ ಅವರ ಕೆಲಸದ ಹೊರೆಯನ್ನು ಕಡಿಮೆ ಮಾಡಲು ವಿಶೇಷ ಗಮನವನ್ನು ನೀಡಬೇಕು. ಮಹಿಳೆಯರು ವಿಜ್ಞಾನದ ಪದವಿಯನ್ನು ತೆಗೆದುಕೊಳ್ಳಲು ಒತ್ತು ನೀಡಬೇಕು.

೫.೧.೮.೬. ಸಂಶೋಧನಾ ಪ್ರಯೋಗಾಲಯಗಳಲ್ಲಿ ಲೈಂಗಿಕ ದೌರ್ಜನ್ಯ ಮತ್ತು ಜಂಡರ್ ತಾರತಮ್ಯ ರಹಿತ ಪರಿಸರವನ್ನು ಸೃಷ್ಟಿಸುವುದರ ಮೂಲಕ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಬೇಕು. ಸಂಶೋಧನಾ ಸಂಸ್ಥೆಗಳಲ್ಲಿ ಶಿಶು ಪಾಲನಾ ಸೌಲಭ್ಯಗಳು ಮತ್ತು ಅನುಕೂಲಕರ ಕೆಲಸದ ಅವಧಿಯನ್ನು ನೀಡಬೇಕು.

೫.೧.೯.೭ ಕಂಪೆನಿಗಳು ತಮ್ಮ ಸಾಮಾಜಿಕ ಜವಾಬ್ದಾರಿಯಡಿಯಲ್ಲಿ, ಶಿಕ್ಷಣ ಸಂಸ್ಥೆಗಳು, ಮಹಿಳಾ ಸ್ವ–ಸಹಾಯ ಸಂಘಗಳನ್ನು ಪ್ರಾರಂಭಿಸಬೇಕು. ಸ್ವಯಂ ಸೇವಾ ಸಂಸ್ಥೆಗಳು  ಮಹಿಳೆಯರಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಕಲಿಕೆಯ ಸೌಲಭ್ಯ ದೊರಕುವಂತೆ ಪ್ರೋತ್ಸಾಹಿಸಬೇಕು.

## ೫.೨. ಸಾಮಾಜಿಕ ಸಬಲೀಕರಣ

**೫.೨.೧.೧. ಶಿಕ್ಷಣ :** ಎಲ್ಲಾ ಹಂತಗಳಲ್ಲಿ ಶಿಕ್ಷಣದ ಖಾಸಗೀಕರಣ ಹೆಚ್ಚಾಗುತ್ತಿರುವುದರಿಂದ ಶಿಕ್ಷಣದಲ್ಲಿ ಹೆಣ್ಣು ಮಕ್ಕಳ ಭಾಗವಹಿಸುವಿಕೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಆದುದರಿಂದ ಸರ್ಕಾರ  ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಿ ಶಿಕ್ಷಣ ಸಂಸ್ಥೆಗಳ ಸಂಖ್ಯೆಯನ್ನು ಅಧಿಕಗೊಳಿಸಬೇಕು ಮತ್ತು ಅವುಗಳನ್ನು ಹೆಚ್ಚು ಬಲಪಡಿಸುವುದರ  ಮೂಲಕ ಶಿಕ್ಷಣದಲ್ಲಿ ಜಂಡರ್ ಸಮಾನತೆಯನ್ನು ಪ್ರೋತ್ಸಾಹಿಸುವ ಅವಶ್ಯಕತೆಯಿದೆ.

**೫.೨.೧.೨. ಶಿಕ್ಷಣದ ಗುರಿ:** ಪ್ರಾಥಮಿಕ ಶಿಕ್ಷಣದ ಮಹತ್ವ ಮತ್ತು ಮಹಿಳೆಯರ ಸಶಕ್ತೀಕರಣದ ಸಾಧನೆಯಲ್ಲಿ ಶಿಕ್ಷಣದ ಮಹತ್ವಪೂರ್ಣ ಪಾತ್ರವನ್ನು ಗಮನದಲ್ಲಿ ಇಟ್ಟುಕೊಂಡಿದ್ದರೂ  ಶಿಕ್ಷಣ ಕಾರ್ಯನೀತಿ  ಚೌಕಟ್ಟು ಮತ್ತು ಕಾರ್ಯಕ್ರಮಗಳ ಒತ್ತು ಸಮಗ್ರವಾಗಿರಬೇಕು, ಪ್ರತಿ ಹಂತದಲ್ಲೂ ನಿರ್ದಿಷ್ಟ ಶೈಕ್ಷಣಿಕ ಅಗತ್ಯತೆಗಳನ್ನು ಪೂರೈಸುವಂತಾಗಿ ಅದಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ಒದಗಿಸಿಕೊಡಬೇಕು. ಮಹಿಳಾ ಶಿಕ್ಷಣವು ಕೇವಲ ಪ್ರಾಥಮಿಕ ಶಿಕ್ಷಣದ ಬಗ್ಗೆ ಮಾತ್ರವಲ್ಲದೆ ಮಾಧ್ಯಮಿಕ, ಉನ್ನತ, ವೃತ್ತಿಪರ, ತಾಂತ್ರಿಕ ಶಿಕ್ಷಣದ ಮೇಲೂ ಕೇಂದ್ರೀಕರಿಸಬೇಕಾಗಿದೆ.

**೫.೨.೧.೩. ಜಂಡರ್ ಆಧರಿಸಿ ವಿಂಗಡಣೆಗೊಳ್ಳದ ಸಮುದಾಯ ನಿರ್ದಿಷ್ಟ ದತ್ತಾಂಶದ ಪ್ರತಿಫಲನ:–** ಶಿಕ್ಷಣದ ದತ್ತಾಂಶಗಳು ಜಂಡರ್ ಆಧರಸಿ ವಿಂಗಡಣೆಗೋಳ್ಳಬೇಕು. ಅಂದರೆ ಎಲ್ಲಾ ಸಮಾಜಿಕ ಗುಂಪುಗಳಿಂದಲೂ ಮಾಹಿತಿ ಸಂಗ್ರಹಿಸಬೇಕಾಗುತ್ತದೆ(ಉದಾ: ಪ.ಜಾ./ಪ.ಪಂ/ಅಲ್ಪಸಂಖ್ಯಾತರು) ಮತ್ತು ಈ ಮಾಹಿತಿಯು ಸಾರ್ವಜನಿಕ ವಲಯದಲ್ಲಿ ಎಲ್ಲರಿಗೂ ಸಿಗುವಂತಿರಬೇಕು. ಯೋಜನಾ ಪದ್ದತಿ ಮತ್ತು ಕಾರ್ಯಕ್ರಮ ವಿನ್ಯಾಸ ಪ್ರಕ್ರಿಯೆಯನ್ನು ತೀಕ್ಷ್ಣಗೊಳಿಸಲು ಸಾಮಾಜಿಕ ಗುಂಪುಗಳ ವ್ಯವಸ್ಥಿತ ನಕ್ಷೆಯನ್ನು ತಯಾರಿಸುವ ಕಾರ್ಯವನ್ನು ಕೈಗೊಳ್ಳಬೇಕು.

**೫.೨.೧.೪. ಸಮಾನ ಲಭ್ಯತೆ –** ಮಹಿಳೆಯರಿಗೆ ಮತ್ತು ಹೆಣ್ಣು ಮಕ್ಕಳಿಗೆ  ಶಿಕ್ಷಣವನ್ನು ಪಡೆಯಲು ಸಮಾನ ಅವಕಾಶಗಳು ಸಿಗುವಂತಾಗಬೇಕು. ತಾರತಮ್ಯವನ್ನು ಹೋಗಲಾಡಿಸಲು, ಶಿಕ್ಷಣವನ್ನು ಸಾರ್ವತ್ರೀಕರಿಸಲು, ಅನಕ್ಷರತೆಯನ್ನು ಹೋಗಲಾಡಿಸಲು, ವಿವಿದ ಹಂತಗಳಲ್ಲಿ ಪಠ್ಯಕ್ರಮವೂ ಸೇರಿದಂತೆ  ಇಡೀ ಶಿಕ್ಷಣ ವ್ಯವಸ್ಥೆಯನ್ನು ಜಂಡರ್

ಪ್ರತಿಕ್ರಯೆಯೆಯನ್ನಾಗಿಸಲು ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕು. ಹೆಣ್ಣುಮಕ್ಕಳಲ್ಲಿ ಶಾಲಾ ಬಿಡುವಿಕೆ ಅಧಿಕವಾಗಿರುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಶಾಲಾ ದಾಖಲಾತಿಯನ್ನು ಹೆಚ್ಚಿಸಬೇಕು ಮತ್ತು ಅವರನ್ನು ಉಳಿಸಿಕೊಳ್ಳುವ ಕಡೆಗೆ ಗಮನ ನೀಡಬೇಕು. ಜೀವನದುದ್ದಕ್ಕೂ ಕಲಿಯುವಂತಾಗಲು ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಬೇಕು. ಹಳ್ಳಿ ಮಟ್ಟದಿಂದ ಹಿಡಿದು ಮೇಲಿನವರೆಗೂ ಹೆಣ್ಣುಮಕ್ಕಳು, ಗಂಡು ಮಕ್ಕಳು, ಮಹಿಳೆಯರು ಮತ್ತು ಪುರುಷರೆಲ್ಲರು ವೃತ್ತಿ ಅಭಿವೃದ್ಧಿ/ವೃತ್ತಿಪರ/ತಾಂತ್ರಿಕ ಶಿಕ್ಷಣ ಪಡೆಯುವಂತಾಗಬೇಕು.

**೫.೨.೧.೫. ಜಂಡರ್ ಸೂಕ್ಷ್ಮ ಮತ್ತು ಪ್ರತಿಕ್ರಿಯಾತ್ಮಕ ಪಠ್ಯಕ್ರಮ:–** ಶಿಕ್ಷಣ ವ್ಯವಸ್ಥೆಯ ಎಲ್ಲಾ ಹಂತಗಳಲ್ಲು ಜಂಡರ್ ಸೂಕ್ಷ್ಮ ಮತ್ತು ಪ್ರತಿಕ್ರಿಯಾತ್ಮಕ ಪಠ್ಯಕ್ರಮವನ್ನು ಅಭಿವೃದ್ಧಿಗೊಳಿಸಬೇಕು. ಜಂಡರ್ ತಾರತಮ್ಯಕ್ಕೆ ಕಾರಣವಾಗುವ ಲಿಂಗ ಸ್ಥಿರಮಾದರಿ, ಪರುಷಾತ್ಮಕತೆ, ಸ್ತ್ರೀಯಾತ್ಮಕತೆಯನ್ನು ಬೆಳೆಸುವುದನ್ನು ನಿಲ್ಲಿಸಬೇಕು.

**೫.೨.೧.೬. ಪಠ್ಯ ಪುಸ್ತಕಗಳ ಸುಧಾರಣೆ:–** ಶೈಕ್ಷಣಿಕ ತಜ್ಞರು ಮತ್ತು ಪರಿಣತರನ್ನು ಒಳಗೊಂಡ ಪಠ್ಯ ಪುಸ್ತಕಗಳ ಸುಧಾರಣಾ ಪ್ರಕ್ರಿಯೆಯಯನ್ನು ಮುಂದುವರೆಸಬೇಕು. ಈ ಪ್ರಕ್ರಿಯೆಯಲ್ಲಿ ಬಳಕೆಯಲ್ಲಿರುವ ಎಲ್ಲಾ ಇತರ ಕಲಿಕಾ ಸಾಮಗ್ರಿಗಳನ್ನು ಸೇರಿಸಿಕೊಳ್ಳಬೇಕು. ಜಂಡರ್ ಅನ್ನು ಒಂದು ಸೇರಿಸುವ ಅಂಶವಾಗಿ ನೋಡಬಾರದು ಬದಲಿಗೆ ಎಲ್ಲಾ ವಿಷಯಗಳಲ್ಲೂ ಅದನ್ನು ಒಂದು ಅವಿಭಾಜ್ಯ ಭಾಗವಾಗಿ ಸೇರಿಸಬೇಕು. ಜಂಡರ್ ಅನ್ನು ಸರ್ಕಾರದ ಪಠ್ಯಕ್ರಮ ಮತ್ತು ಪಠ್ಯ ಪುಸ್ತಕಗಳಲ್ಲಿ ಪ್ರಮುಖ ತತ್ವವನ್ನಾಗಿ ಸೇರಸಬೇಕು. ಲೈಂಗಿಕತೆಗೆ ಸಂಬಂಧಪಟ್ಟ ಪಠ್ಯಕ್ರಮದಲ್ಲಿ ಸೇರಿಸಿ ಮಕ್ಕಳಿಗೆ ಅದರ ಬಗ್ಗೆ ಮಾಹಿತಿ ದೊರಕುವಂತಾಗಬೇಕು. ಇದರಿಂದ ತಿಳಿವಳಿಕೆಯ ಆಯ್ಕೆ ಮಾಡಲು, ಲೈಂಗಿಕತೆ ಮತ್ತು ಜಂಡರ್ ನ ವೈವಿಧ್ಯಮಯ ಅಭಿವ್ಯಕ್ತಿ ಬಗ್ಗೆ ಅರಿವು ಮೂಡಿಸಿ ಲೈಂಗಿಕ ಹಕ್ಕಿನ ಉಲ್ಲಂಘನೆಯಾದರೆ ಅದನ್ನು ಎದುರಿಸಲು ಅವರನ್ನು ಸಿದ್ದಪಡಿಸಬಹುದು. ಶಿಕ್ಷಕರ ತರಬೇತಿಗೆ ಪಠ್ಯಕ್ರಮ ಮತ್ತು ವಿದ್ಯಾರ್ಥಿ ಶಿಕ್ಷಕರ ತರಬೇತಿಯಲ್ಲಿ (ಡಿ.ಇ.ಇ.ಟಿ.ಎಸ್) ಜಂಡರ್ ವಿಷಯಗಳ ಕುರಿತು ಸ್ವಂತಂತ್ರ ಕೈಪಿಡಿಯನ್ನು ಸೇರಿಸಬೇಕು. ಸೇವಾ ಪೂರ್ವ ಮತ್ತು ಸೇವಾ ನಿರತ ಶಿಕ್ಷಕರ ತರಬೇತಿ ಕಾರ್ಯಕ್ರಮಗಳಲ್ಲೂ ಜಂಡರ್ ವಿಷಯಗಳು ಒಳಗೊಳ್ಳುವಂತಾಗಬೇಕು.

**೫.೨.೧.೭. ಜಂಡರ್ ಅಂತರವನ್ನು ಕಡಿಮೆ ಮಾಡುವುದು:–** ಮಾಧ್ಯಮಿಕ ಮತ್ತು ಉನ್ನತ ಶಿಕ್ಷಣದಲ್ಲಿರುವ ಜಂಡರ್ ಅಸಮಾನತೆಯನ್ನು ಕಡಿಮೆ ಮಾಡುವುದು ಪ್ರಮುಖ ಅಂಶವಾಗಬೇಕು. ದುರ್ಬಲ ಗುಂಪಿಗೆ ಸೇರಿದ ಅದರಲ್ಲೂ ವಿಶೇಷವಾಗಿ ಪರಿಶಿಷ್ಟ ವರ್ಗ/ಪರಿಶಿಷ್ಟ ಪಂಗಡ/ಇತರ ಹಿಂದುಳಿದ ವರ್ಗ/ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಮಹಿಳೆಯರು ಮತ್ತು ವಿಶೇಷ ಅಗತ್ಯವಿರುವ ಹೆಣ್ಣು ಮಕ್ಕಳಿಗೆ ಕೇಂದ್ರೀಕರಿಸಿದರೆ ಈಗಿರುವ ಕಾರ್ಯನೀತಿಯಲ್ಲಿ ವಲಯವಾರು ನಿಗದಿತ ಗುರಿಯನ್ನು ಸಾಧಿಸಬಹುದು. ಯುವತಿಯರನ್ನು ಶಾಲೆಯಲ್ಲಿ ಉಳಿಸಿಕೊಳ್ಳಲು ವಿಶೇಷ ಪ್ರಯತ್ನ ಮಾಡುವ ಅವಶ್ಯಕತೆಯಿದೆ. ಹೆಣ್ಣು ಮಕ್ಕಳಿಗೆ ಸುರಕ್ಷಿತ ಮತ್ತು ಅನುಕೂಲಕರ ಸಾರಿಗೆ ವ್ಯವಸ್ಥೆ, ಶೌಚಾಲಯ, ಉಚಿತ ಮತ್ತು ಸುರಕ್ಷಿತ ವಸತಿನಿಲಯ, ಹಣಕಾಸಿನ ನೆರವು ಮತ್ತು ಇತರ ಬೆಂಬಲ ಸೌಕರ್ಯಗಳು ದೊರಕುವಂತಾಗುವುದು ತುಂಬ ಮುಖ್ಯ. ಇದರಿಂದ ಶಿಕ್ಷಣದ ಎಲ್ಲಾ ಹಂತಗಳಲ್ಲೂ ಹುಡುಗಿಯರ ದಾಖಲಾತಿಯನ್ನು ಹೆಚ್ಚಿಸಿ ಅವರನ್ನು ಶಾಲೆಯಲ್ಲಿ ಉಳಿಸಿಕೊಳ್ಳಲು ಸಾದ್ಯವಾಗುತ್ತದೆ.

**೫.೨.೧.೮. ಉದ್ಯೋಗ ಸೃಷ್ಟಿಸುವ ಶಿಕ್ಷಣ:–** ಉದ್ಯೋಗ ದೊರಕಿಸಿಕೊಡುವ/ವೃತ್ತಿ ಶಿಕ್ಷಣ ನೀಡಲು ಸೂಕ್ತ ಸೌಲಭ್ಯಗಳನ್ನು ಒದಗಿಸುವುದಕ್ಕೆ ವಿಶೇಷ ಪ್ರಯತ್ನ ಮಾಡಲಾಗುವುದು.ಅಂದರೆ ಸ್ಥಿರಮಾದರಿಯಲ್ಲದ ಮಹಿಳೆಯರು ತಮ್ಮ ಜೀವನೋಪಾಯ ಅವಕಾಶಗಳನ್ನು ಉತ್ತಮಪಡಿಸಿಕೊಳ್ಳಲು ಅನುಕೂಲವಾದ ಪದವಿಗಳನ್ನು ತೆಗೆದುಕೊಳ್ಳಲು ಪ್ರೋತ್ಸಾಹಿಸಬೇಕು. ಮಹಿಳೆಯರಿಗೆ ವೃತ್ತಿ ಆಪ್ತಸಮಾಲೋಚನೆ ಮಾಡಿ ಅವರಿಗೆ ಹೆಚ್ಚು ಆಸಕ್ತಿಯಿರುವ ಪದವಿಗಳನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡಬೇಕು.

**೫.೨.೧.೯. ದೂರ ಶಿಕ್ಷಣ ವ್ಯವಸ್ಥೆ:–** ಉನ್ನತ ಮಟ್ಟದಲ್ಲಿ ಔಪಚಾರಿಕ ಶಿಕ್ಷಣ ವ್ಯವಸ್ಥೆ ಜೊತೆಗೆ ತೆರೆದ ಶಾಲೆ ಮತ್ತು ದೂರ ಶಿಕ್ಷಣ ವ್ಯವಸ್ಥೆಯನ್ನು ಪ್ರೋತ್ಸಾಹಿಸಲಾಗುವುದು. ವಿವಿಧ ಶೈಕ್ಷಣಿಕ ಹಂತದಲ್ಲಿ ಕಲಿಯುತ್ತಿರುವವರಿಗೆ ಪ್ರಾದೇಶಿಕ ಭಾಷೆಗಳಲ್ಲಿ ಮಾಹಿತಿ, ಗಣಕಯಂತ್ರ, ತಂತ್ರಜ್ಞಾನ ಆಧಾರಿತ ಪಠ್ಯಕ್ರಮವು ಲಭ್ಯವಾಗಬೇಕು. ಹಿಂದುಳಿದ ಮತ್ತು ಅತಿ ದೂರದ

ಸ್ಥಳಗಳಲ್ಲಿ ವಾಸಿಸುವ ಹುಡುಗಿಯರ ಮತ್ತು ಮಹಿಳೆಯರ ದಾಖಲಾತಿ ಮತ್ತು ಬೆಂಬಲ ನೀಡಲು ವಿಶಿಷ್ಟ ಪ್ರಯತ್ನ ಮಾಡಲಾಗುವುದು.

**೫.೨.೧.೧೦. ಶೈಕ್ಷಣಿಕ ಸಂಸ್ಥೆಗಳಲ್ಲಿ ಲೈಂಗಿಕ ಕಿರುಕುಳವನ್ನು ತಡೆಗಟ್ಟುವುದು:–** ಜಂಡರ್ ಸೂಕ್ಷ್ಮತೆಯನ್ನು ಬೆಳೆಸುವ ಪುನಶ್ಚೇತನ ಕಾರ್ಯಕ್ರಮವನ್ನು ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಣ ಸಂಸ್ಥೆಯ ಸಿಬ್ಬಂದಿ ವರ್ಗದವರಿಗೆ ವಿವಿಧ ಹಂತಗಳಲ್ಲಿ ನೀಡಲಾಗುವುದು. ಪ್ರತಿಯೊಂದು ಶಿಕ್ಷಣ ಸಂಸ್ಥೆಯೂ ಲೈಂಗಿಕ ಕಿರುಕುಳ ನಿಷೇಧ ಕಾಯಿದೆ ೨೦೧೩ ಮತ್ತು ಪೋಕ್ಸೊ ಕಾಯಿದೆ ೨೦೧೨ ರ ಸವಲತ್ತುಗಳನ್ನು  ಕಡ್ಡಾಯವಾಗಿ ಜಾರಿಗೊಳಿಸಬೇಕು. ಹೆಣ್ಣು ಮಕ್ಕಳಿಗೆ ಪ್ರತ್ಯೇಕ ವಸತಿನಿಲಯ ಒದಗಿಸಬೇಕು. ಶಿಕ್ಷಣ ಸಂಸ್ಥೆಗಳ ಶಾಲೆಗಳು ಸೇರಿದಂತೆ(ಮಾಧ್ಯಮಿಕ ಮತ್ತು ಅದಕ್ಕಿಂತ ಮೇಲ್ಪಟ್ಟ) ಎಲ್ಲಾ ಹಂತಗಳಲ್ಲೂ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಮಾರ್ಗಸೂಚಿಯನ್ನು ರೂಪಿಸಿ ಅದರ ಮೇಲ್ವಿಚಾರಣೆ ನಡೆಸಬೇಕು. ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲಾಗುವ ಲೈಂಗಿಕ ಮತ್ತು ಇತರ ಪ್ರಕಾರದ ದೌರ್ಜನ್ಯಗಳ ಬಗ್ಗೆ ಅರಿವು ಮೂಡಿಸುವ ಅಂಶಗಳನ್ನು ಶಿಕ್ಷಕರ ತರಬೇತಿ ಕಾರ್ಯಕ್ರಮದಲ್ಲಿ ಸೇರಿಸಬೇಕು. ಶಾಲಾ ಪಠ್ಯಕ್ರಮದಲ್ಲಿ ಈ ವಿಷಯವನ್ನು ಅತ್ಯಂತ ಸೂಕ್ಷ್ಮವಾಗಿ ಸೇರಿಸಬೇಕು. ಶಿಕ್ಷಣ ಸಂಸ್ಥೆಗಳು ಇಂತಹ ವಿಷಯಗಳ ಕುರಿತು ಅರಿವು ಮೂಡಿಸುವ ಜವಾಬ್ದಾರಿಯನ್ನು ಹೊರುವಂತೆ ಮಾಡಬೇಕು.

## ೫.೨.೨. ಆರೋಗ್ಯ ಮತ್ತು ಪೌಷ್ಟಿಕತೆ:

೫.೨.೨.೧. ಮಹಿಳೆಯರ ಆರೋಗ್ಯ ಸಂತಾನೋತ್ಪತ್ತಿ ಆರೋಗ್ಯಕ್ಕಿಂತ ಹೆಚ್ಚಿನದು. ಶಾರೀರಿಕ ಮತ್ತು ಮಾನಸಿಕ ತೊಂದರೆಗಳೆರಡೂ ಸೇರಿದಂತೆ ಮಹಿಳೆಯರ ಜೀವನದಲ್ಲಿ ಉಂಟಾಗುವ ಎಲ್ಲಾ ಪ್ರಕಾರದ ಆರೋಗ್ಯದ ತೊಂದರೆಗಳಿಗೂ ಸಮಾನವಾದ ಗಮನ ಮತ್ತು ಆರೈಕೆಯನ್ನು ನೀಡಬೇಕು. ಖಾಸಗೀಕರಣ ಹೆಚ್ಚಾದಂತೆ ಮತ್ತು ಆರೋಗ್ಯ ಸೇವೆಯ ವೆಚ್ಚ ದುಬಾರಿಯಾದಂತೆ ಆರೋಗ್ಯ ಸೇವೆಗಳನ್ನು ಪಡೆಯುವುದು ಕಷ್ಟವಾಗಿತ್ತಿದೆ.

**೫.೨.೨.೨. ಸಮಗ್ರ ಆರೋಗ್ಯ ಸಶಕ್ತೀಕರಣ :–** ಆರೋಗ್ಯ ಸಶಕ್ತೀಕರಣವು ಆರೋಗ್ಯ ವೃದ್ಧಿಯ ಒಂದು ಪ್ರಕ್ರಿಯೆ. ಆರೋಗ್ಯವು ಎಲ್ಲಾ ಒಳಿತಿನ ಆಧಾರವಾಗಿದೆ. ಇದರಿಂದ ಜನರು ನಿರ್ಧಾರ ಕೈಗೊಳ್ಳುವುದರ ಮೇಲೆ ಮತ್ತು ತಮ್ಮ ಆರೋಗ್ಯದ ಪರಿಣಾಮ ಬೀರುವ ಕ್ರಿಯೆಗಳ ಮೇಲೆ ನಿಯಂತ್ರಣ ಹೊಂದಬಹುದು. ಮಹಿಳೆಯರ ಆರೋಗ್ಯ, ಪೌಷ್ಟಿಕತೆ ಮತ್ತು ಆರೋಗ್ಯ ಸೇವೆಗಳನ್ನು ಸೇರಿದಂತೆ ಮಹಿಳಾ ಆರೋಗ್ಯಕ್ಕೆ ಸಮಗ್ರ ಪರಿಕ್ರಮವನ್ನು ಅಳವಡಿಸಿಕೊಳ್ಳಬೇಕು. ಜೀವನ ಚಕ್ರದ ಎಲ್ಲಾ ಹಂತಗಳಲ್ಲೂ ಮಹಿಳೆಯರು ಮತ್ತು ಹೆಣ್ಣು ಮಕ್ಕಳ  ಅಗತ್ಯಗಳಿಗೆ ವಿಶೇಷ ಗಮನವನ್ನು ನೀಡಬೇಕು.

**೫.೨.೨.೩. ಮಕ್ಕಳ ಲಿಂಗ ಅನುಪಾತ:–** ರಾಜ್ಯದ ಜನಸಂಖ್ಯೆಯು ಅಡ್ಡಾದಿಡ್ಡಿಯಾಗಿ ಮತ್ತು ಭೀಕರ ಅಸಮತೋಲನ ಹೊಂದಿರುವುದರಿಂದ ಭಯಂಕರವಾಗಿ ಕುಸಿಯುತ್ತಿರುವ ಮಕ್ಕಳ ಲಿಂಗಾನುಪಾತದ ವಿಷಯಕ್ಕೆ ಅತಿ  ಗಮನ ಮತ್ತು ಸಂಪನ್ಮೂಲವನ್ನು ಮೊದಲಿಗಿಂತ ಹೆಚ್ಚಿಗೆ ನೀಡಲೇಬೇಕಾಗಿದೆ. ಪೋಷಕರಲ್ಲಿ ಅರಿವು ಮೂಡಿಸಲು ಮತ್ತು ಹೆಣ್ಣು ಮಕ್ಕಳನ್ನು ಪಡೆಯಲ್ಲು ಪ್ರೋತ್ಸಾಹ ನೀಡಲು ಆಸ್ಪತ್ರೆಗಳನ್ನು ಕೇಂದ್ರ ಸ್ಥಳಗಳನ್ನಾಗಿ ಮಾಡಿಕೊಳ್ಳಬೇಕು. ಸಂತಾನೋತ್ಪತ್ತಿ ತಂತ್ರಜ್ಞಾನದ ಮೂಲಕ ಲಿಂಗ ಪತ್ತೆ ಹಚ್ಚುವ ಕಾರ್ಯಗಳನ್ನು ಕೂಲಂಕುಷವಾಗಿ ಮೇಲ್ವಿಚಾರಣೆಗೆ ಒಳಪಡಿಸಬೇಕು. ಜೊತೆಗೆ ಲಿಂಗ ನಿರ್ಣಯ ನಿಷೇಧ ಕಾಯಿದೆಯನ್ನು ಕಠಿಣವಾಗಿ ಅನುಷ್ಠಾನಕ್ಕೆ ತರಬೇಕು. ಹೆಣ್ಣು ಮಗುವಿಗೆ ಜನ್ಮ ನೀಡುವುದು ಸ್ವ ಇಚ್ಛೆಯ ಆಯ್ಕೆ ಮತ್ತು ಸಂತೋಷದ ವಿಷಯವಾಗಿ ರೂಡಿಯಾಗಿಸಬೇಕಾಗಿದೆ .

**೫.೨.೨.೪. ತಾಯಂದಿರ ಮರಣ ದರ ಮತ್ತು ಶಿಶು ಮರಣ ದರ :–** ಮಾನವ ಅಭಿವೃದ್ಧಿಯ ಅತ್ಯಂತ ಸೂಕ್ಷ್ಮ ಸೂಚಿಗಳಾದ ಶಿಶು ಮರಣ ಮತ್ತು ತಾಯಂದಿರ ಮರಣವನ್ನು ಕಡಿಮೆಗೊಳಿಸುವುದಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿದೆ. ರಾಷ್ಟ್ರೀಯ ಜನಸಂಖ್ಯಾ ನೀತಿ ೨೦೦೦ ರಲ್ಲಿ ಶಿಶು ಮರಣ ದರ (ಐಎಮ್ಆರ್), ತಾಯಂದಿರ ಮರಣ ದರಕ್ಕೆ (ಎಂಎಂಆರ್) ಸಂಬಂಧಪಟ್ಟಂತೆ ಇಟ್ಟುಕೊಡಿರುವ ಗುರಿಯನ್ನು ಈ ಕಾರ್ಯನೀತಿಯು ಪುನರುಚ್ಚರಿಸುತ್ತದೆ.

ತಾಯಂದಿರ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಮಹಿಳೆಯರಿಗೆ ವಿಸ್ತಾರವಾದ, ಕೈಗೆಟುಕುವ ಬೆಲೆಯಲ್ಲಿ ಗುಣಮಟ್ಟದ ಆರೋಗ್ಯ ಸೇವೆ ಲಭ್ಯವಾಗಬೇಕು. ಬಾಲ್ಯ ವಿವಾಹ, ಪೌಷ್ಟಿಕತೆ ಮತ್ತು ಒಳ್ಳೆಯ ಆರೋಗ್ಯ ಸೇವೆಯ ಕೊರತೆ, ಅವಶ್ಯಕ ಆರೋಗ್ಯ ಸೌಲಭ್ಯಗಳ ಕೊರತೆ ಮತ್ತು ಸಾಂಸ್ಥಿಕ ವೈದ್ಯಕೀಯ ಸೇವೆಯಿಲ್ಲದಿರುವದು ತಾಯಂದಿರ ಮರಣ ಪ್ರಮಾಣ ಹೆಚ್ಚಾಗಲು ಕಾರಣವಾಗಿವೆ. ಆದ್ಯತೆಯ ಮೇರೆಗೆ ಇವೆಲ್ಲವನ್ನೂ ಸರಿಪಡಿಸಬೇಕಾಗಿದೆ. ಮರಣ, ಜನನ ಮತ್ತು ಮದುವೆಯ ಬಗ್ಗೆ ಸೂಕ್ಷ್ಮ ಮಟ್ಟದಲ್ಲಿ ಸರಿಯಾದ ಮತ್ತು ಖಚಿತವಾದ ಅಂಕಿ ಅಂಶಗಳು ಲಭ್ಯವಾಗಿಸುವುದು ತುಂಬ ಅವಶ್ಯಕ. ಜನನ ಮತ್ತು ಮರಣವನ್ನು ನೊಂದಣಿ ಮಾಡಿಸುವ ನಿಯಮವನ್ನು ಜಾರಿಗೊಳಿಸಿ ವಿವಾಹ ನೊಂದಣಿಯನ್ನು ಕಡ್ಡಾಯಗೊಳಿಸಬೇಕು.

**೫.೨.೨.೫. ಸಂತಾನೋತ್ಪತ್ತಿ ಹಕ್ಕು:–** ಮಹಿಳೆಯರ ಸಂತಾನೋತ್ಪತ್ತಿ ಹಕ್ಕು ರಕ್ಷಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು. ಇದರಿಂದ ಅವರು ಆಯ್ಕೆ ಹಕ್ಕನ್ನು ಚಲಾಯಿಸಲು ಹಾಗು ಲೈಂಗಿಕ ಮತ್ತು ಆರೋಗ್ಯ ಸಮಸ್ಯೆಗಳನ್ನು ಅರಿತುಕೊಳ್ಳುವುದರ ಜೊತೆಗೆ ಸಾಂಕ್ರಾಮಿಕ ಕಾಯಿಲೆಗಳಾದ ಮಲೇರಿಯಾ, ಟಿ.ಬಿ, ಮತ್ತು ನೀರಿನಿಂದ ಹರಡುವ ರೋಗಗಳು, ರಕ್ತದೊತ್ತಡ ಮತ್ತು ಹೃದಯ ಸಂಬಂಧಿ ಕಾಯಿಲೆಗಳು ತಮ್ಮ ದುರ್ಬಲ ಪರಿಸ್ಥಿತಿಗೆ ಕಾರಣವಾಗುವುದನ್ನು ಅರ್ಥಮಾಡಿಕೊಳ್ಳುತ್ತಾರೆ.

**೫.೨.೨.೬. ಬಂಜೆತನಕ್ಕೆ ಸೇವಾ ಸೌಲಭ್ಯ :–** ಬಂಜೆತನವು ದಂಪತಿಗಳ ಸಮಸ್ಯೆಯಾಗಿದ್ದರೂ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ತಪ್ಪಿಲ್ಲದಿದ್ದರೂ ಅವರನ್ನೇ ಬಲಿಪಶು ಮಾಡಲಾಗುತ್ತದೆ. ಸಂತಾನೋತ್ಪತ್ತಿ ತಂತ್ರಜ್ಞಾನವು ತುಂಬ ದುಬಾರಿಯಾಗಿದೆ. ಎಲ್ಲಾ ವರ್ಗದ ಮಹಿಳೆಯರಿಗೆ ಈ ತಂತ್ರಜ್ಞಾನದ ಪ್ರಯೋಜನವು ಅವರ ಶಕ್ತ್ಯಾನುಸಾರ ಲಭ್ಯವಾಗಬೇಕು. ಇದೇ ಸಮಯದಲ್ಲಿ ಸರ್ಕಾರವು, ಹೆಚ್ಚುತ್ತಿರುವ ತಾರತಮ್ಯ ಮತ್ತು ಬಾಡಿಗೆ ತಾಯಿತನಕ್ಕೆ ಬಲಿಯಾಗುತ್ತಿರುವ ಬಡ ಮಹಿಳೆಯರನ್ನು ನಿರ್ಲಕ್ಷಿಸಬಾರದು.

**೫.೨.೨.೭. ಕುಟುಂಬ ಯೋಜನೆ:–** ರಾಷ್ಟ್ರೀಯ ಜನಸಂಖ್ಯಾ ನೀತಿಯು ಜನಸಂಖ್ಯೆಯನ್ನು ಸ್ಥಿರಗೊಳಿಸುವುದಕ್ಕೆ ಬದ್ಧವಾಗಿರುವ ಪ್ರಕಾರ ಈ ಕಾರ್ಯನೀತಿಯು, ಸುರಕ್ಷಿತ, ಪರಿಣಾಮಕಾರಿಯಾದ, ಶಕ್ತ್ಯಾನುಸಾರ, ಸೂಕ್ತ ಬೆಲೆಯ ಕುಟುಂಬ ಯೋಜನಾ ವಿಧಾನಗಳನ್ನು ತಮ್ಮಿಚ್ಛೆಯಂತೆ ಆಯ್ಕೆಮಾಡಿಕೊಳ್ಳಲು ಮಹಿಳೆ ಮತ್ತು ಪುರುಷರಿಬ್ಬರ ಅವಶ್ಯಕತೆಗಳನ್ನು ಗುರುತಿಸುತ್ತದೆ. ಬಾಲ್ಯ ವಿವಾಹ ಮತ್ತು ಮಕ್ಕಳ ನಡುವಿನ ಅಂತರ ಕುರಿತಾದ ವಿಷಯಗಳನ್ನು ಸೂಕ್ತವಾಗಿ ಪರಿಹರಿಸಬೇಕಾಗಿದೆ. ಶಿಕ್ಷಣದ ಹರಡುವಿಕೆ, ವಿವಾಹ ನೊಂದಣಿ ಮತ್ತು ಇತರೆ ವಿಶೇಷ ಕಾರ್ಯಕ್ರಮಗಳ ಮೂಲಕ ಮದುವೆಯ ವಯಸನ್ನು ನಿಧಾನಗೊಳಿಸಿ ತನ್ಮೂಲಕ ಬಾಲ್ಯ ವಿವಾಹಗಳನ್ನು ತೆಗೆದುಹಾಕಬಹುದು. ಈಗಿರುವ ತಾಯಿ ಮತ್ತು ಮಗುವಿನ ಆರೋಗ್ಯ ಕಾರ್ಯಕ್ರಮಗಳನ್ನು ಹದಿಹರೆಯದವರು ಮತ್ತು ವೃದ್ಧ ಮಹಿಳೆಯರನ್ನು ಒಳಗೊಳ್ಳುವಂತೆ ವಿಸ್ತರಿಸಬೇಕು. ಕುಟುಂಬ ಯೋಜನೆಯ ಹೊಣೆಗಾರಿಕೆಯನ್ನು ಮಹಿಳೆಯರ ಮೇಲೆ ಹೇರದೆ ದಂಪತಿಗಳು ಹೊರುವಂತೆ ಮಾಡಬೇಕು.

**೫.೨.೨.೮. ಹೆಚ್.ಐ.ವಿ/ಏಡ್ಸ್:–** ಹೆಚ್.ಐ.ವಿ ಸಾಂಕ್ರಮಿಕ ಕಾಯಿಲೆಗೆ ಮಹಿಳೆಯರೆ ಹೆಚ್ಚು ಈಡಾಗುತಿದ್ದಾರೆ. ಇದಕ್ಕೆ ಪ್ರಮುಖ ಕಾರಣ ಮಹಿಳೆಯರಿಗೆ ಸುರಕ್ಷಿತ ಲೈಂಗಿಕತೆ ಬಗ್ಗೆ ಮಾತುಕತೆ ನಡೆಸಲು ಮತ್ತು ಲೈಂಗಿಕ ದೌರ್ಜನ್ಯದ ವಾಸ್ತವಿಕತೆ ಮತ್ತು ಅಪಾಯದಿಂದ ತಪ್ಪಿಸಿಕೊಳ್ಳವ ಅವಕಾಶ ತುಂಬ ಕಡಿಮೆ. ಅಂದರೆ ಅಸುರಕ್ಷಿತ ಲೈಂಗಿಕತೆಯಿಂದ ಹೆಚ್.ಐ.ವಿ ಹರಡುವಿಕೆಯು ಹೆಚ್ಚಾಗುತ್ತಿದೆ. ಹೆಚ್.ಐ.ವಿ/ಏಡ್ಸ್ ಮತ್ತು ಇತರೆ ಲೈಂಗಿಕತೆಯಿಂದ ಹರಡುವ ಕಾಯಿಲೆಗಳ ಸಾಮಾಜಿಕ, ಅಭಿವೃದ್ಧಿ ಮತ್ತು ಆರೋಗ್ಯ ಪರಿಣಾಮವನ್ನು ಜಂಡರ್ ದೃಷ್ಟಿಕೋನದಿಂದ ಬಗೆಹರಿಸಬೇಕು. ಹೆಚ್.ಐ.ವಿ.ಪೀಡಿತ ಮಹಿಳೆಯರಿಗೆ ಸಮುದಾಯ ಆಶ್ರಯ ತಾಣ ಮತ್ತು ಬೆಂಬಲ ಸೇವೆಗಳನ್ನು ಒದಗಿಸಿಕೊಡಬೇಕು. ಹೆಚ್.ಐ.ವಿ.ಪೀಡಿತ ಮಹಿಳೆಯರು ಜೀವನೋಪಾಯ ಕಂಡುಕೊಳ್ಳುಲು ಅವಕಾಶ ಕಲ್ಪಿಸಿ ಕೊಡಬೇಕು. ಬಡತನ ರೇಖೆಗಿಂತ ಕೆಳಗಿರುವ ಹೆಚ್.ಐ.ವಿ.ಪೀಡಿತ ಮಹಿಳೆಯರಿಗೆ ಮತ್ತು ಅವರ ಜೊತೆಯಿರುವವರಿಬ್ಬರಿಗೂ ಉಚಿತ ಸಾರಿಗೆ ವ್ಯವಸ್ಥೆಯನ್ನು ಒದಗಿಸಿಕೊಡಬೇಕು. ಸಮರ್ಪಕ ಹಣ, ಅವಕಾಶಗಳು, ಕೆಲಸ, ವೈದ್ಯಕೀಯ ಔಷದೋಪಚಾರ ದೊರಕುವಂತಾಗಬೇಕು.

**೫.೨.೨.೯. ನಗರ ಪ್ರದೇಶಗಳ ಬಡ ಮತ್ತು ವಲಸೆ ದುಡಿಮೆಗಾರರು:–** ನಗರ ಪ್ರದೇಶದ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮಹಿಳೆಯರ ಆರೋಗ್ಯಕ್ಕೆ ಗಮನ ನೀಡಬೇಕು. ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ವಲಸೆ ದುಡಿಮೆಗಾರರು, ಮಹಿಳಾ ಕೆಲಸಗಾರರು ಮತ್ತು ಅವರ ಕುಟುಂಬ ಸದಸ್ಯರುಗಳಿಗೆ ಸಂಚಾರಿ ಆರೋಗ್ಯ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು. ಜೊತೆಗೆ  ಸಾಂಸ್ಥಿಕ ಆರೋಗ್ಯ ಸೇವಾ ವ್ಯವಸ್ಥೆಯು ಅವರಿಗೆ ಲಭ್ಯವಾಗುವಂತೆ ಮಾಡಬೇಕು. ಶಿಶು ಪಾಲನಾ ಕೇಂದ್ರ, ಲೈಂಗಿಕ ಕಿರುಕುಳದ ವಿರುದ್ಧ ರಕ್ಷಣೆ, ಸಮಾನ ವೇತನ, ಹೆರಿಗೆ ಭತ್ಯೆ ಸೌಲಭ್ಯಗಳನ್ನು ಇವರಿಗೂ ವಿಸ್ತರಿಸಬೇಕು.

**೫.೨.೨.೧೦. ಆರೋಗ್ಯ ವಿಮೆ:–**  ಸಾಮಾಜಿಕ–ಆರ್ಥಿಕ ಹಿನ್ನೆಲೆಯನ್ನು ಪರಿಗಣಿಸದೆ ಎಲ್ಲಾ ವರ್ಗದ ಮಹಿಳೆಯರಿಗೂ ಆರೋಗ್ಯ ವಿಮಾ ಸೌಲಭ್ಯಗಳನ್ನು ಒದಗಿಸಬೇಕು. ಆರೋಗ್ಯ ವಿಮೆಯು ಎಲ್ಲಾ ತರಹದ ಕಾಯಿಲೆಗಳನ್ನೂ ಒಳಗೊಳ್ಳುವಂತೆ ಮಾಡಿ  ಮಹಿಳೆಯರಿಗಾಗಿ ವಿಶೇಷ ಕ್ರಮಗಳನ್ನು ಕೈಗೊಂಡು ಈ  ಎಲ್ಲಾ ಸೌಲಭ್ಯಗಳನ್ನು ಅವರು ಬಳಸಿಕೊಳ್ಳುವಂತೆ ಮಾಡಬೇಕು. ಆರೋಗ್ಯ ವಿಮೆಯು ಗರ್ಭಿಣಿ ಮತ್ತು ಹೆರಿಗೆ ಸಂಬಂಧಿ ವಿಷಯಗಳನ್ನು ಒಳಗೊಳ್ಳಬೇಕು.

**೫.೨.೨.೧೧. ಋತುಚಕ್ರ ಆರೋಗ್ಯ ಮತ್ತು ಶುಚಿತ್ವ :–** ಋತುಚಕ್ರ ಶುಚಿತ್ವವನ್ನು ಮಹಿಳೆಯರ ಆರೋಗ್ಯ ಸೇವಾ ಕಾರ್ಯದ ಒಂದು ಭಾಗವಾಗಿ ಮಾಡಬೇಕು.  ಕಡಿಮೆ ವೆಚ್ಚದಲ್ಲಿ ಗುಣಾತ್ಮಕ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಉತ್ಪಾದನೆ ಮಾಡಿ ಇಡೀ ರಾಷ್ಟ್ರದಲ್ಲಿ ಮಹಿಳೆಯರಿಗೆ ಸಿಗುವಂತೆ ಮಾಡಬೇಕು. ಮನೆ ಮತ್ತು ಕುಟುಂಬದಲ್ಲಿ ಋತುಚಕ್ರದ ಬಗ್ಗೆ ಇರುವ ಮಲಿನತೆಯ ಭಾವವನ್ನು ಹೋಗಲಾಡಿಸಬೇಕು. ನ್ಯಾಪಕಿನ್ ಬದಲಾಯಿಸಲು ಸುರಕ್ಷಿತ ಸ್ಥಳ, ನೀರು, ಸಾಬೂನು ಒದಗಿಸುವುದು ಋತುಚಕ್ರದ ಶುಚಿತ್ವಕ್ಕೆ ತುಂಬ ಅಗತ್ಯ. ಈ ಒಂದು ಸಣ್ಣ  ಕ್ರಮದಿಂದ ಗರ್ಭಕೋಶದ ತೊಂದರೆಗಳು ಮತ್ತು ಸಂತಾನೋತ್ಪತ್ತಿ ಸಂಬಂಧಿತ ಸಮಸ್ಯೆಗಳನ್ನು ತಡೆಗಟ್ಟಬಹುದು. ಋತುಚಕ್ರದ ಬಗ್ಗೆ  ಅರಿವು ಮತ್ತು ಲೈಂಗಿಕ ಆರೋಗ್ಯ ಶಿಕ್ಷಣವನ್ನು ಕಡ್ಡಾಯವಾಗಿ ಶಾಲೆಯ ಪಠ್ಯಕ್ರಮದ  ಒಂದು ಭಾಗವಾಗಿ ಮಾಡಬೇಕು ಮತ್ತು ಸಮೂಹ ಮಾಧ್ಯಮದ ಮೂಲಕ ಜನಪ್ರಿಯಗೊಳಿಸಬೇಕು.

**೫.೨.೨.೧೨. ದೌರ್ಜನ್ಯಕ್ಕೊಳಗಾದವರಿಗೆ ಆರೋಗ್ಯ ಸೇವಾ ಸೌಲಭ್ಯ:–** ಗಲಭೆ ಸಂದರ್ಭಗಳಲ್ಲಿ (ಜಾತಿ, ಕೋಮು ಇತ್ಯಾದಿ) ಮಹಿಳೆಯರಿಗೆ ವಿಶೇಷ ಆರೋಗ್ಯ ಸೇವಾಸೌಲಭ್ಯಗಳನ್ನು ಒದಗಿಸುವುದು ತುಂಬ ಮುಖ್ಯ. ಏಕೆಂದರೆ ಇಂತಹ ಸಂದರ್ಭಗಳಲ್ಲಿ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಶಾರೀರಿಕ ಮತ್ತು ಮಾನಸಿಕ ಹಿಂಸೆ, ಘಾಸಿಗೆ ಮತ್ತು ಅದರ ಪರಿಣಾಮಗಳಿಗೆ ಒಳಗಾಗುವ ಸಾಧ್ಯತೆಗಳಿವೆ. ಆದುದರಿಂದ ಆಸ್ಪತ್ರೆಗಳಲ್ಲಿ ತರಬೇತಿ ಪಡೆದ ಸಿಬ್ಬಂದಿಯನ್ನು ಹೊಂದಿರುವ ವಿಶೇಷ ಲೈಂಗಿಕ ದೌರ್ಜನ್ಯ ಘಾಸಿ ಕೇಂದ್ರಗಳನ್ನು ಸ್ಥಾಪಿಸಿ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಸಹಾಯ ಮಾಡಬೇಕು.

**೫.೨.೨.೧೩. ಮಾನಸಿಕ ಆರೋಗ್ಯ:–** ಮಾನಸಿಕ ಯಾತನೆಗೆ ಒಳಗಾಗುತಿರುವ ಮಹಿಳೆಯರ ಪ್ರಮಾಣ ಹೆಚ್ಚಾಗುತ್ತಿದೆ, ಆದರೆ ಮಹಿಳೆಯರು ತಾವೆ ನಿಭಾಯಿಸಿಕೊಳ್ಳುತ್ತಾರೆ ಎಂದು ಭಾವಿಸಿ ಇದನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ ಅಥವಾ ಒಂದು ಗಂಭೀರ ವಿಷಯವನ್ನಾಗಿ ತೆಗೆದುಕೊಳ್ಳುತ್ತಿಲ್ಲ. ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರಗಳೆರಡರಲ್ಲೂ ಇರುವ ಈ ಮನೋಭಾವನೆ ಬದಲಾಗಬೇಕು: ಮಹಿಳೆಯ ಮಾನಸಿಕ ಆರೋಗ್ಯವು ಅತ್ಯಂತ ಕಾಳಜಿವಹಿಸಬೇಕಾದ ವಿಷಯವೆಂದು ಪರಿಗಣಿಸಬೇಕಾಗಿದೆ, ವಿಶೇಷ ಗಮನ ನೀಡಬೇಕಾದ ಅವಶ್ಯಕತೆಯಿದೆ. ಆತ್ಮಗೌರವ ಮತ್ತು ತನ್ನ ದೇಹದ ಬಗ್ಗೆ ಗೌರವ ಬೆಳೆಸುವಂತಹ ಮಾನಸಿಕ ಆರೋಗಕ್ಕೆ ಬೇಕಾದ ಜೀವನ ಕೌಶಲ್ಯಗಳನ್ನು ಕಲಿಸಲು ಸರ್ಕಾರ ಹೆಚ್ಚು ಗಮನ ನೀಡಬೇಕು. ಆಪ್ತಸಮಾಲೋಚನೆ ಮತ್ತು ಇತರ ಮಾನಸಿಕ ಆರೋಗ್ಯ ಸೇವ ಸೌಲಭ್ಯಗಳನ್ನು ತಾಲ್ಲೂಕು ಮಟ್ಟದಲ್ಲಿ ಒದಗಿಸಬೇಕು. ಜೊತೆಯಲ್ಲೆ ಸಮಾಜದಲ್ಲಿ ಆಳವಾಗಿ ಬೇರೂರಿರುವ ತಪ್ಪು ನಂಬಿಕೆಗಳ ವಿರುದ್ಧ ಅರಿವು ಮೂಡಿಸಬೇಕು. ಮಾನಸಿಕ ಆರೋಗ್ಯ ತಜ್ಞರು,  ಮನಃಶಾಸ್ತ್ರಜ್ಞರು, ಮಾನಸಿಕ ಆರೋಗ್ಯ ಸಮಾಜ ಕಾರ್ಯಕರ್ತರು ಮತ್ತು ಮಾನಸಿಕ ಆರೋಗ್ಯ ದಾಯಿ ಮೊದಲಾದ ಮಾನಸಿಕ ಆರೋಗ್ಯ ವೃತ್ತಿಪರರು  ಎಲ್ಲಾ ಮಟ್ಟಗಳಲ್ಲೂ ಲಭ್ಯವಿರುವಂತೆ ಮಾಡಬೇಕು. ತಾಲೂಕು ಮಟ್ಟದಲ್ಲಿ ಪುನರ್ವಸತಿಗೊಂಡಿರುವದನ್ನು ಸೇರಿಸಿದಂತೆ ಕಾಲಕಾಲಕ್ಕೆ ಔಷದೋಪಚಾರ ಸೌಲಭ್ಯಗಳನ್ನು ಪರಿಶಿಲಸಬೇಕು. ಮಾನಸಿಕ ರೋಗಿಗಳನ್ನು ನೋಡಿಕೊಳ್ಳುವವರಿಗೆ ಮೂಲ ಮಾನಸಿಕ ಆರೋಗ್ಯ ಮತ್ತು ಆಪ್ತ ಸಮಾಲೋಚನೆ ಬಗ್ಗೆ ತರಬೇತಿ ನೀಡಬೇಕು.

೫.೨.೨.೧೪. :- ಅತಿ ಹೆಚ್ಚು ವೃದ್ಧರ ಜನಸಂಖ್ಯೆಯನ್ನು ಹೊಂದಿರುವ ದೇಶಗಳಲ್ಲಿ ಭಾರತವೂ ಒಂದಾಗಿದ್ದರೂ ವೃದ್ದಾಪ್ಯ ಸೇವಾ ಸೌಲಭ್ಯಗಳನ್ನು ಒದಗಿಸುವುದು ರಾಜ್ಯದ ಆದ್ಯತೆಯಾಗಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ವೃದ್ದಾಪ್ಯ ಸೇವಾ ಸೌಲಭ್ಯಗಳನ್ನು ಒದಗಿಸುವುದು ತುರ್ತಾಗಿ ಆಗಬೇಕು. ಕಡಿಮೆ ಖರ್ಚಿನಲ್ಲಿ ಸಾಂಸ್ಥಿಕ ಸೇವಾ ಸೌಲಭ್ಯ, ಸಮುದಾಯ ಆಶ್ರಯ ತಾಣ, ಹಗಲು ವಸತಿ ಸೌಕರ್ಯಗಳನ್ನು ಪ್ರಾರಂಭಿಸಬೇಕು.

**೫.೨.೨.೧೫. ಮಹಿಳೆಯರು ಮತ್ತು ವೃತ್ತಿಆರೋಗ್ಯ:-** ಈ ಕಾರ್ಯನೀತಿಯು ವೃತ್ತಿ ಆರೋಗ್ಯ ಸಮಸ್ಯೆಗಳನ್ನು ಬಗೆಹರಿಸಬೇಕು ಮತ್ತು ಅತ್ಯಂತ ಪ್ರತಿಕೂಲಪರಿಸ್ಥಿತಿಯ ಸ್ಥಳಗಳಲ್ಲಿ ದುಡಿಯುವ ಮಹಿಳೆಯರಿಗೆ ಉದಾಹರಣೆಗೆ –ಗಣಿ, ತೋಟಗಳು, ಕಲ್ಲು ಗಣಿ, ಕಟ್ಟಡ ನಿರ್ಮಾಣ, ಸಿದ್ದ ಉಡುಪು ವಲಯ, ಅಸಂಘಟಿತ ವಲಯ, ಮುಕ್ತ ವ್ಯಾಪಾರ ವಲಯ, ಪೌರಕಾರ್ಮಿಕರು, ಕಸವಿಲೇವಾರಿ ಮಾಡುವ ಮಹಿಳೆಯರ ಅವಶ್ಯಕತೆಗಳನ್ನು ಪೂರೈಸಬೇಕು.

**೫.೨.೨.೧೬. ಪೌಷ್ಟಿಕತೆ:-** ಶಿಶು, ಬಾಲ್ಯ, ಹದಿಹರೆಯ ಮತ್ತು ಸಂತಾನೋತ್ಪತ್ತಿ ಮೂರು ಹಂತಗಳಲ್ಲಿ ಮಹಿಳೆಯರು ಅಪೌಷ್ಟಿಕತೆ ಮತ್ತು ಕಾಯಿಲೆಗಳನ್ನ ಅನುಭವಿಸುತ್ತಾರೆ. ಮಹಿಳೆಯರ ಜೀವನ ಚಕ್ರದ ಎಲ್ಲಾ ಹಂತಗಳಲ್ಲು ಅವರ ಪೌಷ್ಟಿಕತೆಯ ಅವಶ್ಯಕತೆಗಳನ್ನು ಪೂರೈಸಬೇಕು. ಪೌಷ್ಟಿಕತೆಯ ಪರಿಮಾಣಾತ್ಮಕವಷ್ಟೆ ಅಲ್ಲ ಗುಣಾತ್ಮಕದೆಡೆಗೂ ಕೂಡ ಗಮನಹರಿಸಬೇಕು. ಸ್ಥಳೀಯ ಮತ್ತು ಸಾಂಪ್ರದಾಯಿಕ ಆಹಾರ ವೈವಿಧ್ಯತೆಗೆ ಆದ್ಯತೆಕೊಡಬೇಕು.

**೫.೨.೨.೧೭. ವಿವಿಧ ವಯೋಮಾನದವರ ಪೌಷ್ಟಿಕತೆ :-** ಪೌಷ್ಟಿಕಾಂಶದ ಅವಶ್ಯಕತೆ ಬಾಲ್ಯದಲ್ಲಿ (೬ವರ್ಷ ಕೆಳಗಿನ) ತುಂಬಾ ಮುಖ್ಯವಾಗಿದ್ದು ಪ್ರತೀ ಮಗುವಿನ ಶಾರೀರಿಕ ಮತ್ತು ಮಾನಸಿಕ ಅಭಿವೃದ್ಧಿಗೆ ಅತ್ಯವಶ್ಯಕ. ಆದುದರಿಂದ ಅಂಗನವಾಡಿ ಮತ್ತು ಶಾಲೆಗಳಲ್ಲಿ ನೀಡುತ್ತಿರುವ ಬಿಸಿಯೂಟವು ಸಮರ್ಪಕವೂ ಹಾಗು ಪೌಷ್ಟಿಕಾಂಶದಿಂದ ಕೂಡಿರಬೇಕು. ಮಗು ಮತ್ತು ಸಣ್ಣ ಮಕ್ಕಳ ಆರೋಗ್ಯ ಹಾಗೂ ಹದಿಹರೆಯದವರ, ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರ ಆರೋಗ್ಯದ ನಡುವೆ ತುಂಬ ಹತ್ತಿರದ ಕೊಂಡಿಯಿರುವ ದೃಷ್ಟಿಯಿಂದಲೂ ಪೌಷ್ಟಿಕತೆಯು ಮುಖ್ಯವಾಗುತ್ತದೆ. ಪೌಷ್ಟಿಕತೆಯನ್ನು ಸಾರ್ವಜನಿಕ ಪಡಿತರ ವ್ಯವಸ್ಥೆಯೊಂದಿಗೆ ಜೋಡಿಸಿಸುವುದರ ಮೂಲಕ ಗರ್ಭಿಣಿ ಮಹಿಳೆಯರಿಗೆ ಐ.ಎಫ್.ಎ, ಕ್ಯಾಲ್ಸಿಯಂ ಮಾತ್ರೆಗಳು ಸುಲಭವಾಗಿ ಲಭ್ಯವಾಗುವಂತಾಗಬೇಕು. ದೊಡ್ಡ ಮತ್ತು ಸೂಕ್ಷ್ಮ ಹಂತಗಳಲ್ಲಿ ಉಂಟಾಗುತ್ತಿರುವ ಪೌಷ್ಟಿತೆಯ ಕೊರತೆಯ ಸಮಸ್ಯೆಗಳನ್ನು ಹೋಗಲಾಡಿಸಲು ವಿಶೇಷ ಪ್ರಯತ್ನ ಮಾಡಬೇಕು. ಗರ್ಭಿಣಿ ಮತ್ತು ಹಾಲುಣಿಸುವ ಮಹಿಳೆಯರು ಅಪೌಷ್ಟಿಕತೆಯಿಂದ ಅನೇಕ ಕಾಯಿಲೆ ಮತ್ತು ಅಂಗವೈಕಲ್ಯತೆಗೆ ಗುರಿಯಾಗುವುದರಿಂದ ಅವರ ಪೌಷ್ಟಿಕತೆಗೆ ವಿಶೇಷ ಗಮನನೀಡಬೇಕು. ಸಾರ್ವಜನಿಕ ಪಡಿತರ ವ್ಯವಸ್ಥೆಯು ವೈವಿಧ್ಯತೆಗೊಂಡು ಪ್ರಾದೇಶಿಕ- ನಿರ್ದಿಷ್ಟ ಆಹಾರ ಧಾನ್ಯಗಳನ್ನು ಪೂರೈಸಬೇಕು. ಯುವತಿಯರಲ್ಲಿ ರಕ್ತಹೀನತೆಯನ್ನು ತಡೆಗಟ್ಟಲು ಸ್ಥಳಿಯವಾಗಿ ಕಡಿಮೆ ದರದಲ್ಲಿ ಲಭ್ಯವಾಗುವ ಆಹಾರ ಯೋಜನೆಯನ್ನು ಜನಪ್ರಿಯಗೊಳಿಸಬೇಕು.

**೫.೨.೨.೧೮. ಮನೆಯೊಳಗೆ ಪೌಷ್ಟಿಕತೆಯ ತಾರತಮ್ಯ :-**ಮನೆಯೊಳಗೆ ಹುಡುಗಿಯರು ಮತ್ತು ಮಹಿಳೆಯರಿಗೆ ತೋರುವ ಪೌಷ್ಟಿಕತೆ ತಾರತಮ್ಯವನ್ನು ಶಿಕ್ಷಣ ಮತ್ತು ಮಾಧ್ಯಮಗಳ ಮೂಲಕ ಜಂಡರ್ ಸೂಕ್ಷ್ಮಗೊಳಿಸುವದರಿಂದ ಕೊನೆಗಾಣಿಸಬೇಕು. ಮನೆಯೊಳಗಿನ ಪೌಷ್ಟಿಕತೆಯ ಅಸಮತೋಲನವನ್ನು ಹೋಗಲಾಡಿಸಲು ಹಾಗು ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರಿಗೆ ವಿಶೇಷ ಅವಶ್ಯಕತೆಗಳ ಬಗ್ಗೆ ಅರಿವು ಮೂಡಿಸಲು ಪೌಷ್ಟತಿಕತೆಯ ಶಿಕ್ಷಣವನ್ನು ವ್ಯಾಪಕವಾಗಿ ಬಳಸಿಕೊಳ್ಳಬೇಕು. ಈ ಎಲ್ಲಾ ಕಾರ್ಯಗಳ ಯೋಜನೆ, ಮೇಲ್ವಿಚಾರಣೆ ಮತ್ತು ಜಾರಿಗೊಳಸುವಿಕೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಇರಲೇಬೇಕು. ಚಪ್ಪಲಿ ಮತ್ತು ಶೌಚಾಲಯಗಳನ್ನು ಬಳಸುವದರಿಂದ ಹೆಣ್ಣು ಮಕ್ಕಳು & ಮಹಿಳೆಯರಲ್ಲಿ ಪಾದದ ಬಿರುಕುಗಳ ಮೂಲಕ ಹುಳುಗಳ ಪ್ರವೇಶಿಸುವುದನ್ನು ತಡೆಗಟ್ಟಬಹುದೆಂಬುದರ ಬಗ್ಗೆ ಪರುಷರೂ ಸೇರಿದಂತೆ ಕುಟುಂಬ ಸದಸ್ಯರುಗಳಲ್ಲಿ ಸೂಕ್ಷ್ಮತೆ ಬೆಳೆಸಬೇಕು.

**೫.೨.೨.೨೦. ವೃದ್ಧ ಮಹಿಳೆಯರಲ್ಲಿ ಪೌಷ್ಟಿಕತೆಯ ಕೊರತೆ:-** ವೃದ್ಧ ಮಹಿಳೆಯಲ್ಲಿ ಸಾಮಾನ್ಯವಾಗಿ, ಕ್ಯಾಲ್ಸಿಯಂ, ವಿಟಮಿನ್ ಡಿ, ಇ ಪೌಷ್ಟಿಕಾಂಶದ ಕೊರತೆ ಹೆಚ್ಚು ಕಂಡುಬರುತ್ತದೆ. ಇದನ್ನು ತಡೆಗಟ್ಟಬಹುದಾಗಿದ್ದರೂ ಇವುಗಳ ಕೊರತೆಯಿಂದ ಶಕ್ತಿಗುಂದಿ ಎಲುಬಿನ ಕಾಯಿಲೆಗೆ ತುತ್ತಾಗುತ್ತಿದ್ದಾರೆ. ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರಿಗೆ ಹೆಚ್ಚಿನ ಗಮನ

ನೀಡುವಂತೆಯೆ ಋತುಬಂಧೋತ್ತರ ಮಹಿಳೆಯರಿಗೂ ಪೂರಕ ಪೌಷ್ಟಿಕತೆಯ ಅವಶ್ಯಕತೆಗಳನ್ನು ಪೂರೈಸಬೇಕು. ಆರೋಗ್ಯ ಶಿಕ್ಷಣ ಆಂದೋಲನವನ್ನು ಇಡೀ ರಾಷ್ಟ್ರದಲ್ಲಿ ಹಮ್ಮಿಕೊಂಡು ಮಹಿಳೆಯರೂ ಪೌಷಿಕ ಆಹಾರಗಳಾದ ಹಸಿರು-ಸೊಪ್ಪು ತರಕಾರಿಗಳು, ಹಾಲು, ಮೊಟ್ಟೆ ಮತ್ತು ಇತರ ಪೌಷ್ಟಿಕತೆಯ ಮೂಲಗಳನ್ನು ಸೇವಿಸಲು ಪ್ರೋತ್ಸಾಹಿಸಬೇಕು. ಇದರಿಂದ ವೃದ್ಧಾಪ್ಯದಲ್ಲಿ ಎದುರಿಸಬಹುದಾದ ಎಲುಬು ಕಾಯಿಲೆ, ಮನೋದೌರ್ಬಲ್ಯ ಮತ್ತಯ ಅಲ್ಜೈಮೈರ್ ನಂತಹ ಕಾಯಿಲೆಗಳನ್ನು ತಡೆಗಟ್ಟಬಹುದು.

**೫.೨.೨.೨೧. ಆರೋಗ್ಯ ಸೇವೆ ಮತ್ತು ಪೌಷ್ಟಿಕತೆ ಬಗ್ಗೆ ಮಹಿಳೆಯರ ಪಾರಂಪರಿಕ ಜ್ಞಾನ:-** ಆರೋಗ್ಯ ಮತ್ತು ಪೌಷ್ಟಿಕಾಂಶದ ಬಗ್ಗೆ ಸಾಂಪ್ರದಾಯಿಕ ಜ್ಞಾನವನ್ನು ದಾಖಲೀಕರಿಸುವುದರ ಮೂಲಕ ಗುರುತಿಸಿ ಅದರ ಬಳಕೆಯನ್ನು ಪ್ರೋತ್ಸಾಹಿಸಬೇಕು. ಭಾರತೀಯ ಮತ್ತು ಪರ್ಯಾಯ ವೈದ್ಯಕೀಯ ವ್ಯವಸ್ಥೆಯನ್ನು ಬಳಸುವುದರ ಮೂಲಕ ಈಗ ಲಭ್ಯವಿರು ಆರೋಗ್ಯ ಮೂಲ ಸೌಕರ್ಯಗಳನ್ನು ಮಹಿಳೆಯರಿಗೆ ಸಿಗುವಂತೆ ಮಾಡಬೇಕು.

**೫.೨.೩. ಶಕ್ತಗೊಳಿಸುವ ಪರಿಸರ:-** ಕುಡಿಯುವ ನೀರಿನ ಸೌಲಭ್ಯ, ಪ್ರತ್ಯೇಕ ಬಾವಿ, ಶಾಲೆಗಳಲ್ಲಿ ಮತ್ತು ಇತರೆ ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ಮಾರುಕಟ್ಟೆ ಕೇಂದ್ರಗಳಲ್ಲಿ ಕುಡಿಯುವ ನೀರಿನ ಶೌಚಾಲಯಗಳ ವ್ಯವಸ್ಥೆಯಿದ್ದು ಅವುಗಳನ್ನು ಸರಿಯಾಗಿ ನಿರ್ವಹಣೆ ಮಾಡಬೇಕು. ಈ ಸ್ಥಳಗಳಲ್ಲಿ ವಿದ್ಯುತ್ ಪೂರೈಕೆ ನೀಡಿ ಸುರಕ್ಷತೆ ಒದಗಿಸಬೇಕು. ಈ ಎಲ್ಲಾ ಕಾರ್ಯಗಳ ಯೋಜನೆ, ನಿರ್ವಹಣೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಖಂಡಿತವಾಗಿ ಇರುವಂತೆ ನೋಡಿಕೊಳ್ಳಬೇಕು.

## ೫.೨.೩.೧. ಮನೆ ಮತ್ತು ಆಶ್ರಯ :

೫.೨.೩.೧.೧. ಪರಿಶಿಷ್ಟ ಜಾತಿ, ಪರಿಶಿಷ್ಟ ಮಂಗಡ, ಅಲ್ಪ ಸಂಖ್ಯಾತರು, ಸ್ತ್ರೀ ಯಜಮಾನಿಕೆ ಕುಟುಂಬಗಳು, ವಿಧವೆಯರು, ಮನೆಯಿಲ್ಲದವರು, ವೃದ್ಧ ಮಹಿಳೆಯರು, ಬೀದಿಯಲ್ಲಿ ವಾಸಿಸುವವರು, ಲೈಂಗಿಕ ಕಾರ್ಯಕರ್ತೆಯರು, ಒಂಟಿ ಮಹಿಳೆ ಇವರೆಲ್ಲರನ್ನೂ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳದೊಳಗೆ ಸೇರಿಸಿ ಅವರಿಗೆ ಆದ್ಯತೆ ನೀಡಬೇಕು. ಭೂಮಿ/ಮನೆಯ ಹಕ್ಕುಪತ್ರವನ್ನು ದಂಪತಿಗಳ ಜಂಟಿ ಹೆಸರಿನಲ್ಲಿ ಅಥವಾ ಮಹಿಳೆಯ ಹೆಸರಿನಲ್ಲೇ ನೀಡಬೇಕು

೫.೨.೩.೧.೨. ಬಡವರಿಗೆ ಮತ್ತು ಬಡತನ ರೇಖೆಗಿಂತೆ ಕೆಳಗಿಲ್ಲದ ಕುಟುಂಬಗಳಿಗೆ ಸಾಲ ಮತ್ತು ಸಹಾಯಧನ ಯೋಜನೆಯನ್ನು ಅಳವಡಿಸಿಕೊಳ್ಳಬೇಕು.

೫.೨.೩.೧.೩. ಮನೆಗಳಲ್ಲಿ ಮೂಲಭೂತ ಸೌಕರ್ಯಗಳ ಲಭ್ಯತೆಯನ್ನು ಉತ್ತಮಪಡಿಸಬೇಕು.

೫.೨.೩.೧.೪. ಸರ್ಕಾರಿ-ಖಾಸಗಿ ಪಾಲುಗಾರಿಕೆ/ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯನೀತಿಯನ್ನು ಜಾರಿಗೊಳಿಸಬೇಕು.

೫.೨.೩.೧.೫. ಭೂಮಿಯ ಕೊರತೆಯಿರುವುದರಿಂದ ಸರ್ಕಾರಿ ಅನುದಾನಕ್ಕೆ ಸಹಾಯಧನ ನೀಡುವಾಗ ಗುಂಪು ಗೃಹ ಯೋಜನೆಗಳನ್ನು ರೂಪಿಸಿ ಮೇಲು ಅಂತಸ್ತಿನ ಕಟ್ಟಡಗಳನ್ನು ಪರಿಗಣಿಸಬೇಕು.

೫.೨.೩.೧.೬. ಮನೆಯಿಲ್ಲದ ಮತ್ತು ಸಂಕಷ್ಟದಲ್ಲಿರುವ ಮಹಿಳೆಯರಿಗೆ ನಗರ ಪ್ರದೇಶಗಳಲ್ಲಿ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಹೆಚ್ಚು ಹೆಚ್ಚು ಆಶ್ರಯತಾಣಗಳನ್ನು ಕಟ್ಟಿಸಬೇಕು. ಅಲ್ಲಿಗೆ ತರಬೇತಿ ಪಡೆದ ಮತ್ತು ಸೂಕ್ಷ್ಮತೆಯನ್ನು ಹೊಂದಿರುವ ವ್ಯಕ್ತಿಗಳನ್ನು ಸಿಬ್ಬಂದಿಯಾಗಿ ನೇಮಿಸಿ ಅಲ್ಲಿ ಅವರಿಗೆ ಆಗಬಹುದಾದ ಶೋಷಣೆಯನ್ನು ತಪ್ಪಿಸಬೇಕು.

೫.೨.೩.೧.೭. ನಗರೀಕರಣ, ಸಮೂಹ ವಲಸೆ, ವಿಭಕ್ತ ಕುಟುಂಬಗಳು ಹೆಚ್ಚಾಗುತ್ತಿರುವುದನ್ನು ವೃದ್ಧರ ಸಂಖ್ಯೆ ಏರುತ್ತಿರುವ ಸಂದರ್ಭವನ್ನು ಕಾಣಬಹುದು. ಸರ್ಕಾರ ಜನರಿಗೆ ಹಣ ಕೊಡಲು ಸಾಧ್ಯವಾಗುವಂತಹ ವೃದ್ಧಾಶ್ರಮಗಳನ್ನು ತೆರೆಯಬೇಕು.

## ೫.೨.೩.೨. ಕುಡಿಯುವ ನೀರು, ನೈರ್ಮಲ್ಯ

೫.೨.೩.೨.೧. ಸುರಕ್ಷಿತ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಮತ್ತು ಶೌಚಾಲಯ ಸೌಲಭ್ಯಗಳನ್ನು ಒದಗಿಸುವಾಗ ಮಹಿಳೆಯರ ಅಗತ್ಯಗಳಿಗೆ ವಿಶೇಷ ಗಮನ ನೀಡಬೇಕು. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬುಡಕಟ್ಟು ಹಾಡಿಗಳಲ್ಲಿ, ನಗರದ ಕೊಳಚೆ ಪ್ರದೇಶ ಹಾಗೂ ಹೆದ್ದಾರಿಗಳಲ್ಲಿ ಶೌಚಾಲಯಗಳನ್ನು ಮನೆಗೆ ಹತ್ತಿರವಾಗಿ ಮಹಿಳೆಯರಿಗೆ ಲಭ್ಯವಾಗುವಂತೆ ಕಟ್ಟಿಸಬೇಕು.

೫.೨.೩.೨.೨. ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಮಹಿಳಾ ಸಮುದಾಯಕ್ಕೆ ಮಳೆ ಕೊಯ್ಲಿನಲ್ಲಿ ತರಬೇತಿ ನೀಡಿ ಅದರಲ್ಲಿ ತೊಡಗುವಂತೆ ಮಾಡಬೇಕು.

### ೫.೨.೩.೩. ಸಾಮಾಜಿಕ ಸುರಕ್ಷತಾ ಕ್ರಮಗಳು

೫.೨.೩.೩.೧. ತನ್ನ ಜನರಿಗೆ ಸಾಮಾಜಿಕ ಸುರಕ್ಷತೆಯನ್ನು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯ ಹಾಗೂ ಜವಾಬ್ದಾರಿ. ಸಾಮಾಜಿಕ ಸುರಕ್ಷತೆಗೆ ಹಣ ಖರ್ಚು ಮಾಡುವುದು ಬಂಡವಾಳ ಹೂಡಿದಂತೆಯೇ ಹೊರತು ಹೊರೆಯಲ್ಲ.

೫.೨.೩.೩.೨. ಸಾಮಾಜಿಕ ಸುರಕ್ಷತಾ ವ್ಯವಸ್ಥೆಯು ಕೆಲವು ಸಂಕಷ್ಟಗಳು ಎದುರಾದಾಗ ರಕ್ಷಣೆ ನೀಡಬೇಕು. ಉದಾಹರಣೆಗೆ ವೃದ್ಧಾಪ್ಯ, ಅಂಗವೈಕಲ್ಯತೆ, ಅನಾರೋಗ್ಯ, ಅಪೌಷ್ಟಿಕತೆ, ಹೆರಿಗೆ, ವೇತನ ರಹಿತ ಸೇವಾ ಕೆಲಸ ಹಾಗೂ ಮರಣ. ಎಲ್ಲಾ ಪ್ರಕಾರದ ದೌರ್ಜನ್ಯಗಳು, ಘರ್ಷಣೆಗಳ ಸಂದರ್ಭಗಳಲ್ಲಿ ಉಂಟಾಗುವ ಹಿಂಸೆ, ಜೀವನೋಪಾಯ ಕಳಕೊಂಡಾಗ ಮತ್ತು ನಿರುದ್ಯೋಗವಿದ್ದಾಗ ಸಾಮಾಜಿಕ ಸುರಕ್ಷತೆಯನ್ನು ಒದಗಿಸಬೇಕು.

೫.೨.೩.೩.೩. ಸಾಮಾಜಿಕ ಸುರಕ್ಷತೆಯು ಉತ್ಪಾದನಾ ಸಂಪನ್ಮೂಲಗಳಾದ ಹಣಕಾಸಿನ ಸೇವೆ, ತಂತ್ರಜ್ಞಾನ, ಉತ್ತಮ ಮೂಲ ಸೌಕರ್ಯ, ಭೂಮಿ, ನೀರು, ಮನೆ ಮತ್ತು ಇತರ ಸಾಮಾನ್ಯ ಆಸ್ತಿ ಮೂಲಗಳ ಮೇಲೆ ಮಹಿಳೆಯರ ಲಭ್ಯತೆ ಮತ್ತು ನಿಯಂತ್ರಣವನ್ನು ಹೆಚ್ಚಿಸಬೇಕು.

೫.೨.೩.೩.೪. ಸಾಮಾಜಿಕ ಸುರಕ್ಷತೆಯು ಸಾರ್ವತ್ರಿಕವಾಗಿರಬೇಕು ಆದರೆ ಏಕರೂಪವಾಗಿರಬಾರದು. ನಿರ್ದಿಷ್ಟ ಮತ್ತು ಬಹುಸ್ತರದ ದೌರ್ಬಲ್ಯಗಳನ್ನು ಪರಿಹರಿಸುವಂತಿರಬೇಕು. ಅದರಲ್ಲಿ ವಿಶೇಷ ತಾತ್ಕಾಲಿಕ ಕ್ರಮಗಳೂ ಸೇರಿರಬೇಕು. ದುರ್ಬಲ ಗುಂಪುಗಳಿಗೆ ಅತಿ ಶೀಘ್ರವಾಗಿ ಪರಿಹಾರ ದೊರಕುವಂತಾಗಲು ಈ ಕ್ರಮಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳಬೇಕು.

೫.೨.೩.೩.೫. ಮಹಿಳೆಯರಿಗೆ ಈ ಸಾಮಾಜಿಕ ಸುರಕ್ಷತೆಯನ್ನು ನೀಡುವಾಗ ಅವರನ್ನು ಪರಾವಲಂಬಿಗಳು ಅಥವಾ ಕುಟುಂಬದ ಸದಸ್ಯರು ಎಂದು ನೋಡದೆ ಸ್ವತಂತ್ರವಾದ ಹಕ್ಕಿರುವ ವ್ಯಕ್ತಿಯನ್ನಾಗಿ ನೋಡಬೇಕು. ಸಮುದಾಯ ಮಟ್ಟದಲ್ಲಿ ಮಹಿಳಾ ಸಮೂಹಗಳನ್ನು ರಚಿಸಲು ಸರ್ಕಾರವು ಬೆಂಬಲ ನೀಡಬೇಕು. ಇದರಿಂದ ಮಹಿಳೆಯರು ಆಡಳಿತದ ಎಲ್ಲಾ ವಿಷಯಗಳಲ್ಲಿ ಹಾಗೂ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು, ಸಾಮಾಜಿಕ ಸುರಕ್ಷತೆಯ ಲಾಭಗಳನ್ನು ಪಡೆಯಲು ಪ್ರೋತ್ಸಾಹ ನೀಡುವಂತಾಗುತ್ತದೆ.

### ೫.೨.೩.೪. ಸಂಸ್ಕೃತಿ ಮತ್ತು ಕ್ರೀಡೆ

೫.೨.೩.೪.೧. ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಬೇಕಿದೆ. ಬಾಲ್ಯದಿಂದಲೇ ಶಾಲೆಗಳಲ್ಲಿ ಮತ್ತು ಸಮುದಾಯಗಳಲ್ಲಿ ಮಹಿಳೆಯರ ಪ್ರತಿಭೆಯನ್ನು ಗುರುತಿಸುವುದು ಹೆಚ್ಚಾಗಬೇಕು. ಇದು ಅವರ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಒಳಿತನ್ನು ಹೆಚ್ಚಿಸುತ್ತದೆ.

೫.೨.೩.೪.೨. ಮಹಿಳಾ ಕ್ರೀಡಾ ಪಟುಗಳಿಗೆ ಮತ್ತು ವಿವಿಧ ಕ್ಷೇತ್ರಗಳ ಕಲಾವಿದರಿಗೆ ಸೂಕ್ತ ತರಬೇತಿ ಸೌಲಭ್ಯ, ಹಣಕಾಸಿನ ನೆರವು ಹಾಗೂ ಕಿರುಕುಳ ಮುಕ್ತ ವಾತಾವರಣ ಒದಗಿಸಬೇಕು.

೫.೨.೩.೪.೩. ವಿವಿಧ ಕ್ರೀಡಾ ಮತ್ತು ಸಾಂಸ್ಕೃತಿಕ ಮಂಡಳಿಗಳ ನಿರ್ಧಾರ ಕೈಗೊಳ್ಳುವ ಅತ್ಯುನ್ನತ ಸ್ಥಾನಗಳಲ್ಲಿ ಮಹಿಳೆಯರಿಗೆ ಮೀಸಲಾತಿ ದೊರಕುವಂತಾಗಬೇಕು.

೫.೨.೩.೪.೪. ಸ್ತ್ರೀ ಪುರುಷ ಅಥ್ಲೆಟ್‌ಗಳಿಗೆ ತೋರುವ ವೇತನ ತಾರತಮ್ಯ, ಜಾಹೀರಾತು ಲಭ್ಯತೆಯಲ್ಲಿ ಕಂಡುಬರುವ ವ್ಯತ್ಯಾಸ ಮತ್ತು ಲೈಂಗಿಕ ಕಿರುಕುಳ ಮುಂತಾದ ಸಮಸ್ಯೆಗಳನ್ನು ಬಗೆಹರಿಸಬೇಕು.

### ೫.೨.೩.೪. ಸಾಂಪ್ರದಾಯಿಕ ಮತ್ತು ಸಾಮಾಜಿಕ ಮಾಧ್ಯಮ

೫.೨.೩.೫.೧. ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಮಾನವ ಘನತೆಯನ್ನು ಎತ್ತಿ ಹಿಡಿಯಲು ಮಾಧ್ಯಮವನ್ನು ಬಳಸಿಕೊಳ್ಳಲಾಗುವುದು. ಮಹಿಳೆಯರನ್ನು ಕೀಳಾಗಿ, ಅವಮಾನಿಸುವ, ನಕರಾತ್ಮಕ ಸಾಂಪ್ರದಾಯಿಕ ಸ್ಥಿರಮಾದರಿಗಳಲ್ಲಿ ಬಿಂಬಿಸುವ ಹಾಗೂ ಅವರ ಮೇಲೆ ನಡೆಯುವ ದೌರ್ಜನ್ಯವನ್ನು ಬಿತ್ತರಿಸುವುದನ್ನು ಹೋಗಲಾಡಿಸಲು ಈ ಕಾರ್ಯನೀತಿ ವಿಶೇಷ ಪ್ರಯತ್ನ ಮಾಡುತ್ತದೆ.

೫.೨.೩.೫.೨. ಪತ್ರಿಕಾ ಮಾಧ್ಯಮವು ಸಾಮಾನ್ಯವಾಗಿ ಲೈಂಗಿಕ ಆಕ್ರಮಣ ಮುಂತಾದ ಘಟನೆಗಳನ್ನು ನೋವುಂಟಾಗುವ ಭಾವೋದ್ರೇಕಗೊಳಿಸುವಂತೆ ತೋರಿಸಿ, ತೊಂದರೆಗೊಳಗಾದವರ ಖಾಸಗಿ ಜೀವನವನ್ನು ಅತಿಕ್ರಮಿಸುತ್ತವೆ. ಮಾಧ್ಯಮಕ್ಕೆ ಒಂದು ಮಾರ್ಗಸೂಚಿಯನ್ನು ರೂಪಿಸುವುದು ಉತ್ತಮ. ಇದರಿಂದ ಹೆಣ್ಣು ಮಕ್ಕಳನ್ನು ಮತ್ತು ಮಹಿಳೆಯರನ್ನು ಸಕರಾತ್ಮಕವಾಗಿ ಬಿಂಬಿಸಲು ಸಾಧ್ಯವಾಗುತ್ತದೆ. ಭಾವೋದ್ವೇಗಕ್ಕೊಳಪಡಿಸುವ ಸುದ್ದಿಗಳು ಮತ್ತು ಮಹಿಳೆಯರ ದೇಹವನ್ನು ವಸ್ತೂಕರಣಗೊಳಿಸುವುದರ ಮೇಲೆ ನಿಯಂತ್ರಣ ಹೇರಲು ಸಾಧ್ಯವಾಗುತ್ತದೆ.

೫.೨.೩.೫.೩. ಮಾಧ್ಯಮವು ನಡವಳಿಕೆ ಸಂಹಿತೆ ಮತ್ತು ಕಾನೂನು ಮತ್ತು ವೃತ್ತಿ ಮಾರ್ಗಸೂಚಿಯನ್ನು ಅನುಸರಿಸುವಂತಾಗಬೇಕು. ಮಾಧ್ಯಮದಲ್ಲಿ ಕಂಡುಬರುವ ಜಂಡರ್ ಸ್ಥಿರಮಾದರಿಗಳನ್ನು ಮತ್ತು ಮಹಿಳೆಯರನ್ನು ಅಗೌರವವಾಗಿ ಚಿತ್ರಿಸುವುದನ್ನು ಹೋಗಲಾಡಿಸಲು ಸೆನ್ಸಾರ್ ಮಂಡಳಿ ಮತ್ತು ಇತರೆ ಸ್ವ-ನಿಯಂತ್ರಿತ ಸಂಸ್ಥೆಗಳಿಗೆ ಹೆಚ್ಚಿನ ಮಹಿಳೆಯರು ಸೇರುವಂತಾಗಬೇಕು.

೫.೨.೩.೫.೪. ಸಮಾಜದಲ್ಲಿರುವ ಪುರುಷ ಪ್ರಧಾನ ಮೌಲ್ಯಗಳು ಮಹಿಳೆಯರ ಮೇಲೆ ತಾರತಮ್ಯ ತೋರಿ ಅವರನ್ನು ತುಳಿತಕ್ಕೊಳಪಡಿಸುತ್ತವೆ. ಇದನ್ನು ಬೆಳಕಿಗೆ ತಂದು ಜನರಲ್ಲಿ ಜಂಡರ್ ಸೂಕ್ಷ್ಮತೆಯನ್ನು ಬೆಳೆಸಲು ಸೂಕ್ತ ಸಂದೇಶ ಹಾಗೂ ಕಾರ್ಯಕ್ರಮಗಳನ್ನು ರೂಪಿಸಬೇಕು. ಈ ಕಾರ್ಯದಲ್ಲಿ ನಾಗರೀಕ ಸಮಾಜದ ಸಂಘಟನೆಗಳು ತೊಡಗುವಂತೆ ಪ್ರೋತ್ಸಾಹ ನೀಡಬೇಕಾಗಿದೆ. ಇದಕ್ಕೆ ಬೇಕಾದ ವಿಶೇಷ ಅನುದಾನವನ್ನು ಪ್ರತ್ಯೇಕವಾಗಿ ನೀಡಬೇಕು. ಮಹಿಳೆಯರನ್ನು ಸಕಾರಾತ್ಮಕವಾಗಿ ಬಿಂಬಿಸುವುದಕ್ಕೆ ಒತ್ತಾಯಪೂರ್ವಕವಾಗಿಯಾದರೂ ಮಾಧ್ಯಮವನ್ನು ಹೆಚ್ಚು ಜಂಡರ್ ಸೂಕ್ಷ್ಮಗೊಳಿಸಬೇಕು. ಈ ನಿಟ್ಟಿನಲ್ಲಿ ಮಾಧ್ಯಮವು ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡು ಸಮಾಜದ ಮನೋಭಾವವನ್ನು ಬದಲಾಯಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಇದಕ್ಕಾಗಿ ಜಂಡರ್ ಸ್ನೇಹಿ ಮಾಧ್ಯಮ ನೀತಿಯನ್ನು ರೂಪಿಸಬೇಕಿದೆ.

೫.೨.೩.೪.೪. ಇತ್ತೀಚಿನ ದಿನಗಳಲ್ಲಿ ಪುಂಡಾಟಿಕೆ, ವ್ಯಭಿಚಾರ ಮತ್ತು ಬೆನ್ನತ್ತಿ ಹೋಗುವಂತಹ ಸೈಬರ್ ಹಿಂಸಾಚಾರಗಳು ಮತ್ತು ಸೈಬರ್ ಅಶ್ಲೀಲ ಚಿತ್ರಗಳು ಹೆಚ್ಚಾಗುತ್ತಿವೆ. ಇವುಗಳನ್ನು ತಡೆಗಟ್ಟಲು ಮತ್ತು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಹೊಸ ಕಾಯಿದೆಯ ಅವಶ್ಯಕತೆಯಿದೆ.

### ೫.೨.೩.೬. ಸಾರಿಗೆ

೫.೨.೩.೬.೧. ಮಹಿಳೆಯರು ಮುಕ್ತವಾಗಿ ಓಡಾಡಲು ಅನುಕೂಲವಾಗುವಂತೆ, ಬೀದಿ ದೀಪ, ರಸ್ತೆ ಮತ್ತು ಸಾರಿಗೆ ವ್ಯವಸ್ಥೆಯಲ್ಲಿ ಸುರಕ್ಷತೆಯನ್ನು ಒದಗಿಸಿಕೊಡಬೇಕು.

೫.೨.೩.೬.೨. ಸಾರಿಗೆಗೆ ಸಂಬಂಧಿಸಿದಂತೆ ಸ್ತ್ರೀ ಪುರುಷರ ಅವಶ್ಯಕತೆ ಹಾಗೂ ಅಡಚಣೆಗಳು ಭಿನ್ನವಾಗಿರುತ್ತವೆ ಮತ್ತು ಇಬ್ಬರ ಮೇಲೂ ಭಿನ್ನವಾಗಿ ಪರಿಣಾಮ ಬೀರುತ್ತವೆ ಅನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಮಹಿಳೆಯರಿಗೆ ಕಿರುಕುಳ ಮುಕ್ತ ಮತ್ತು ಅವರ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಬಳಸಲು ಯೋಗ್ಯವಾದಂತಹ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮಾಡಿಕೊಡಬೇಕು.

೫.೨.೩.೬.೩. ಗ್ರಾಮದ ಸುತ್ತ ಮುತ್ತ ಕಾಲ್ನಡಿಗೆಯಲ್ಲಿ ಓಡಾಡುವ ಗ್ರಾಮೀಣ ಮಹಿಳೆಯರಿಗೆ ಗ್ರಾಮೀಣ ಸಾರಿಗೆ ಯೋಜನೆಗಳು, ವಾಹನ ಸಾರಿಗೆ ರಸ್ತೆಗಳಿಂದ ಯವುದೇ ಲಾಭವಾಗುವುದಿಲ್ಲ. ಗ್ರಾಮೀಣ ರಸ್ತೆಗಳು ಮಹಿಳೆಯ ಅವಶ್ಯಕತೆಗಳನ್ನು ಪೂರೈಸುವಂತಾಗಬೇಕು. ಕೆಲಸ, ಆಸ್ಪತ್ರೆ, ಶಿಕ್ಷಣ ಸಂಸ್ಥೆ, ಸಮುದಾಯದ ಸ್ಥಳ ಹಾಗೂ ನಗರ ಪ್ರದೇಶಗಳಿಗೆ ಸುಲಭವಾಗಿ ಕರೆದೊಯ್ಯುವಂತಹ ಸಾರಿಗೆ ವ್ಯವಸ್ಥೆಯನ್ನು ರೂಪಿಸಬೇಕು.

೫.೨.೩.೬.೪. ಜನರು ಕೆಲಸದ ಸ್ಥಳಗಳಿಗೆ ಹೋಗಿ ಬರಲು ಅನುಕೂಲವಾಗುವಂತೆ ಸಾರಿಗೆ ಸೌಲಭ್ಯವನ್ನು ಹೆಚ್ಚಿಸಬೇಕು.

೫.೨.೩.೬.೫. ಮಹಿಳೆಯರ ಸಾರಿಗೆ ಅಗತ್ಯಗಳಾದ ಉತ್ತಮ ರಸ್ತೆ ಯೋಜನೆ ಅಥವಾ ವಿಶೇಷ ಬಸ್‌ಗಳ ಸೌಲಭ್ಯ ಅಥವಾ ಜನ ವಾಹನ ದಟ್ಟಣೆ ಇಲ್ಲದ ಸಮಯದಲ್ಲಿ ಅಥವಾ ಕಡಿಮೆ ಜನ ಓಡಾಡುವ ಹೆಚ್ಚಿನ ಬಸ್ ಸೌಲಭ್ಯ ಒದಗಿಸಬೇಕು.

೫.೨.೩.೬.೬. ಕ್ಷಿಪ್ರ ಸಮೂಹ ಸಾರಿಗೆ ಮತ್ತು ರೈಲ್ವೆ ಸಾರಿಗೆಗಳು ಜಂಡರ್‌ನ್ನು ಒಳಗೊಂಡಂತೆ ನೀತಿಗಳನ್ನು ರೂಪಿಸಬೇಕು. ಇಲ್ಲಿ ಮಹಿಳೆಯರಿಗೆ ನಿರಂತರವಾಗಿ ಸುರಕ್ಷಿತ, ಸ್ವಚ್ಛವಾದ ಮತ್ತು ಅವರ ಸಾಮರ್ಥ್ಯಕ್ಕಾಗಿ ಇರುವ ವಿಶ್ರಾಂತಿ ಕೊಠಡಿಗಳು, ಶೌಚಾಲಯ ಮತ್ತು ಉಪಹಾರ ಸೌಲಭ್ಯಗಳನ್ನು ಒದಗಿಸುವಂತಿರಬೇಕು. ರೈಲ್ವೆ ನಿಲ್ದಾಣ ಹಾಗೂ ಅಂತರ್ ನಗರ ಬಸ್ ನಿಲ್ದಾಣಗಳಲ್ಲಿ ಶಿಶು ಪಾಲನಾ ಕೇಂದ್ರಗಳನ್ನು ತೆರೆಯಬೇಕು.

### ೫.೨.೩.೭. ಇಂಧನ

೫.೨.೩.೭.೧. ಮಹಿಳೆಯರು ಗೃಹಕೃತ್ಯ, ಕಡಿಮೆ ಕೂಲಿ ಮತ್ತು ಕೂಲಿ ರಹಿತ ಕೆಲಸಗಳಲ್ಲಿ ತೊಡಗಿದ್ದರೂ ಇಂಧನ ಮೂಲಗಳ ಲಭ್ಯತೆಯಲ್ಲಿ ಕೊರತೆಯಿದೆ. ಇದು ಅವರ ದುಡಿಮೆ ಮೇಲೆ ಅಪಾರವಾದ ಪರಿಣಾಮ ಬೀರುತ್ತದೆ. ಆದುದರಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ಮಹಿಳೆಯರಿಗೆ ಕಡಿಮೆ ಖರ್ಚಿನಲ್ಲಿ ಅಡಿಗೆ ಅನಿಲ ಅಥವಾ ಸೀಮೆ ಎಣ್ಣೆ ದೊರಕುವಂತಾಗಬೇಕು.

೫.೨.೩.೭.೨. ಈಗಲೂ ಗ್ರಾಮೀಣ ಮಹಿಳೆಯರು ಸ್ಥಳೀಯವಾಗಿ ದೊರಕುವ ವಾಣಿಜ್ಯೀಕರಣವಲ್ಲದ ಇಂಧನ ಮೂಲಗಳನ್ನು ಅವಲಂಬಿಸಿದ್ದಾರೆ. ಬೆರಣಿ, ಬೆಳೆ ತ್ಯಾಜ್ಯ ಮತ್ತು ಸೌದೆಯನ್ನು ಹೆಚ್ಚಾಗಿ ಬಳಸುತ್ತಾರೆ. ಪರಿಸರ ಸ್ನೇಹಿಯಾದ ಈ ಪ್ರಕಾರದ ಇಂಧನ ಮೂಲಗಳನ್ನು ಸಮರ್ಥವಾಗಿ ಬಳಸುವಂತಾಗಲು, ಅಸಂಪ್ರದಾಯಿಕ ಇಂಧನ ಮೂಲಗಳನ್ನು ಬೆಳೆಸುವ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವ ಗುರಿಯನ್ನು ಈ ಕಾರ್ಯನೀತಿಯು ಹೊಂದಿದೆ.

೫.೨.೩.೭.೫. ವಿವಿಧ ಪ್ರಕಾರಗಳ ಗೃಹ ಇಂಧನ, ಉದಾಹರಣೆಗೆ ಚಿಕ್ಕ ಗಾತ್ರದ ಜೈವಿಕ ಇಂಧನ ಘಟಕ, ಉರುವಲು ಮರಗಳನ್ನು ನೆಡುವುದು, ಚಿಕ್ಕ ಜಲ ಘಟಕ ಹಾಗೂ ಇತರ ನವೀಕೃತ ಇಂಧನ ಮೂಲಗಳನ್ನು ಒದಗಿಸುವ ಸಮಗ್ರ ಇಂಧನ ಕಾರ್ಯನೀತಿಯ ಅವಶ್ಯಕತೆಯಿದೆ. ಇದು ಒಂದು ಮೂಲಕ್ಕಿಂತ ಹಲವಾರು ಇಂಧನ ಮೂಲಗಳನ್ನು ಸೃಷ್ಟಿಸಿಕೊಡುವಂತಿರಬೇಕು. ಜೊತೆಗೆ ಸೌರವಿದ್ಯುತ್‌ನಂತಹ ಅಜೈವಿಕ ಇಂಧನ ಮೂಲಗಳನ್ನು ಸಣ್ಣ ಉತ್ಪಾದನಾ ಘಟಕಗಳಿಗೆ ಬಳಸಿದಂತೆ ಮನೆಗೆ ಉರುವಲನ್ನು ಬಳಸಿಕೊಳ್ಳಬಹುದು.

## ೫.೨.೩.೮. ಕಾಯಿದೆಯ ಅನುಷ್ಠಾನ ಮತ್ತು ಜಂಡರ್ ಆಧಾರಿತ ದೌರ್ಜನ್ಯ

೫.೨.೩.೮.೧. ಜಂಡರ್ ಆಧಾರಿತ ಯಾವುದೇ ದೌರ್ಜನ್ಯವು ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವೆನಿಸಿಕೊಳ್ಳುತ್ತದೆ. ಇದು ದೈಹಿಕ, ಲೈಂಗಿಕ ಮತ್ತು ಮಾನಸಿಕವಾಗಿ ಹಾನಿಯುಂಟು ಮಾಡುವ ಕೃತ್ಯವಾಗಿದೆ. ಸಾರ್ವಜನಿಕವಾಗಲಿ ಅಥವಾ ಖಾಸಗಿ ಜೀವನದಲ್ಲಾಗಲಿ ಒತ್ತಾಯವಾಗಿ ಅಥವಾ ಮನಸ್ಸೋಯಿಚ್ಛೆ ಮಹಿಳೆಯರ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ದೌರ್ಜನ್ಯವಾಗಿದೆ. ಇದು ಅನೇಕ ಪ್ರಕಾರಗಳಲ್ಲಿ ಕಾಣಿಸಿಕೊಳ್ಳುತ್ತದೆ. ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯವು ಜಗತ್ತಿನಲ್ಲಿ ಅತ್ಯಂತ ವ್ಯಾಪಕವಾಗಿ ಹರಡಿರುವ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಎಲ್ಲಾ ಮಹಿಳೆಯರು ಹಿಂಸೆಯನ್ನು ಅನುಭವಿಸುತ್ತಾರೆ. ಅಂದರೆ ಅದು ಇತರ ಸಾಮಾಜಿಕ ಮತ್ತು ಅನನ್ಯತೆಯನ್ನು ಕಟ್ಟಿಕೊಡುವ ಜಾತಿ, ಧರ್ಮ, ಅಂಗವೈಕಲ್ಯತೆ ಮತ್ತು ಲೈಂಗಿಕ ಸಂಬಂಧಿತ ನಿರ್ದಿಷ್ಟ ಗುಂಪುಗಳೊಂದಿಗೆ ತಳುಕು ಹಾಕಿಕೊಂಡು ವಿವಿಧ ಅಥವಾ ನಿರ್ದಿಷ್ಟ ಪ್ರಕಾರದ ದೌರ್ಜನ್ಯಗಳಿಗೆ ಒಳಪಡಿಸುವುದರೊಂದಿಗೆ ಮಹಿಳೆಯರನ್ನು ದುರ್ಬಲಗೊಳಿಸುತ್ತದೆ.

೫.೨.೩.೮.೨. ಮಹಿಳೆಯರ ಮೇಲಿನ ದೌರ್ಜನ್ಯವು ಹೆಣ್ಣು ಮಕ್ಕಳು ಮತ್ತು ಮಹಿಳೆಯರಿಗೆ ಅಭದ್ರತೆ ಯನ್ನುಂಟುಮಾಡಿ ಅವರನ್ನು ಪ್ರತ್ಯೇಕಗೊಳಿಸುತ್ತದೆ, ನಿರ್ಬಂಧಿಸುತ್ತದೆ. ಕುಟುಂಬ, ಸಮುದಾಯದಲ್ಲಿ ಸಾಮಾಜಿಕವಾಗಿ, ರಾಷ್ಟ್ರೀಯವಾಗಿ ಮೂಲಭೂತ ಸ್ವಾತಂತ್ರ್ಯವನ್ನು ಅನುಭವಿಸುವ ಮತ್ತು ಮಾನವ ಹಕ್ಕುಗಳನ್ನು ಚಲಾಯಿಸುವುದರಿಂದ ವಂಚಿತರಾಗುತ್ತಾರೆ. ಆದುದರಿಂದ ಎಲ್ಲಾ ಪ್ರಕಾರದ ಮತ್ತು ಜೀವನದ ಪ್ರತಿ ವಲಯದಲ್ಲೂ ನಡೆಯುವ ದೌರ್ಜನ್ಯಗಳನ್ನು ತಡೆಯುವುದಾಗಬೇಕು. ಪೋಸ್ಕೋ ಕೌಟುಂಬಿಕ ದೌರ್ಜನ್ಯ ತಡೆ ಕಾಯಿದೆ, ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆ ಕಾಯಿದೆ, ಮಾರಾಟ ನಿಷೇಧ ಕಾಯಿದೆ, ಮಹಿಳಾ ಸಂಬಂಧಿ ಕಾಯಿದೆಗಳು ಪರಿಣಾಮಕಾರಿಯಾಗಿ ಜಾರಿಯಾಗುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು.

### ಸೂಕ್ಷ್ಮಗೊಳಿಸುವಿಕೆ

೫.೨.೩.೮.೩. ಎಲ್ಲಾ ಕಾರ್ಯನೀತಿ ಮತ್ತು ಕಾರ್ಯಕ್ರಮಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ಸೇರಿಸುವುದು ಸೇರಿದಂತೆ ಜಂಡರ್ ದೃಷ್ಟಿಕೋನವನ್ನು ಮುಖ್ಯವಾಹಿನಿಯಾಗಿಸುವ ನಕ್ಷೆಯ ಹಾಗೂ ಸ್ಪಷ್ಟ ಕಾರ್ಯನೀತಿಯನ್ನು ಪ್ರೋತ್ಸಾಹಿಸಬೇಕು. ಜಂಡರ್ ಸೂಕ್ಷ್ಮಗೊಳಿಸುವಿಕೆಯು ಪಠ್ಯಕ್ರಮ ಹಾಗೂ ತರಬೇತಿ ಕಾರ್ಯಕ್ರಮಗಳ ಕಡ್ಡಾಯ ಭಾಗವಾಗಬೇಕು. ಆದ್ಯತೆ ಮೇರೆಗೆ ವಕೀಲರು, ಪಬ್ಲಿಕ್ ಪ್ರಾಸಿಕ್ಯೂಟರ್ಸ್, ಪೋಲೀಸರು ಹಾಗೂ ನ್ಯಾಯಾಧೀಶರುಗಳ ತರಬೇತಿಯಲ್ಲಿ ಜಂಡರ್ ಸೂಕ್ಷ್ಮಗೊಳಿಸುವಿಕೆಯನ್ನು ಕಡ್ಡಾಯವಾಗಿ ಸೇರಿಸಬೇಕು. ವರದಕ್ಷಿಣೆ ಸಾವುಗಳ ಪ್ರಕರಣಗಳ ಸಾಕ್ಷಿಗಳನ್ನು ದಾಖಲು ಮಾಡುವ ಸಂದರ್ಭವನ್ನು ಗಮನಿಸುವುದಾದರೆ ವೈದ್ಯರನ್ನೂ ಜಂಡರ್ ಸೂಕ್ಷ್ಮಗೊಳಿಸುವ ಅವಶ್ಯಕತೆಯಿದೆ.

೫.೨.೩.೮.೪. ಶಿಕ್ಷಕರ ತರಬೇತಿ ಪಠ್ಯಕ್ರಮ ರಚನೆ ಮತ್ತು ಪುನಶ್ಚೇತನ ತರಬೇತಿಗಳಲ್ಲೂ ಜಂಡರ್ ವಿಷಯ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯದ ವಿಷಯವನ್ನು ಸೇರಿಸಬೇಕು. ಯುವಜನ ಸಚಿವಾಲಯವು ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಜಂಡರ್ ವಿಷಯವನ್ನು ಆದ್ಯತೆಯ ವಿಷಯವನ್ನಾಗಿ ತೆಗೆದುಕೊಳ್ಳಬೇಕು. ಯುವಜನತೆಯೊಂದಿಗೆ ವಿಶೇಷವಾಗಿ ಗಂಡು ಮಕ್ಕಳು ಮತ್ತು ಪುರುಷರೊಂದಿಗೆ ಈ ವಿಷಯಗಳಲ್ಲಿ ಸಂವಾದ ನಡೆಸಬೇಕು.

೫.೨.೩.೮.೫. ನೊಂದಾಯಿತ ಸ್ವ–ಸಹಾಯ ಒಕ್ಕೂಟಗಳಿಗೆ, ಮಹಿಳೆಯರ ಮೇಲಿನ ದೌರ್ಜನ್ಯದ ವಿಷಯಗಳನ್ನು ಗುರುತಿಸಿ ನಿರ್ವಹಿಸುವ, ತರಬೇತಿ ನೀಡಬೇಕು. ಸಂಕಷ್ಟದಲ್ಲಿರುವ ಮಹಿಳೆಯರಿಗೆ ಸಹಾಯ ನೀಡಲು ಅಗತ್ಯವಿರುವ ಮಾರ್ಗಸೂಚಿಯೊಂದಿಗೆ ಒಂದು ಸಣ್ಣ ಹಣಕಾಸಿನ ನೆರವನ್ನು ಒದಗಿಸಬೇಕು.

೫.೨.೩.೮.೬. ಮಾಧ್ಯಮ ಸಿಬ್ಬಂದಿಗಳನ್ನು ಜಂಡರ್ ಸೂಕ್ಷ್ಮಗೊಳಿಸಿದರೆ ಮುದ್ರಣ ಮತ್ತು ವಿದ್ಯುದ್ಮಾನ ಮಾಧ್ಯಮಗಳು ಮಹಿಳೆಯರಿಗೆ ಸಂಬಂಧಿಸಿದ ಸುದ್ದಿಗಳನ್ನು ಪ್ರಚಾರ ಮಾಡುವಾಗ ಮತ್ತು ಮಹಿಳೆಯರನ್ನು ಸ್ಥಿರಮಾದರಿ ಪಾತ್ರಗಳಲ್ಲಿ

ಬಿತ್ತರಿಸುವಾಗ ಹೆಚ್ಚು ಸೂಕ್ಷ್ಮಗ್ರಾಹಿಗಳಾಗುತ್ತಾರೆ. ರಕ್ಷಣಾ ತಾಣಗಳಲ್ಲೂ ಸಿಬ್ಬಂದಿಯವರನ್ನು ವಿಶೇಷವಾಗಿ ತರಬೇತುಗೊಳಿಸಿ ಸೂಕ್ಷ್ಮಗ್ರಾಹಿಗಳನ್ನಾಗಿಸಬೇಕು.

**ಬೆಂಬಲ ಸೇವೆಗಳು**

೫.೩.೩.೮.೭. ಪ್ರತಿ ಜಿಲ್ಲೆಯು ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗಾಗಿ ಕನಿಷ್ಟ ಎರಡು ತಾತ್ಕಾಲಿಕ ಆಶ್ರಯ ತಾಣಗಳನ್ನು ಹೊಂದಿರಬೇಕು. ಇದು ಅವರ ಏಕಗವಾಕ್ಷಿ ಕೇಂದ್ರದ ರೀತಿಯಲ್ಲಿ ಕೆಲಸ ಮಾಡಬೇಕು. ಅದರಲ್ಲಿ ಉಚಿತ ಕಾನೂನು ಸಹಾಯ, ಆಪ್ತ ಸಮಾಲೋಚನೆ, ವೈದ್ಯಕೀಯ ಸಹಾಯ ಮುಂತಾದ ಸೌಕರ್ಯಗಳು ದೊರಕುವಂತಾಗಬೇಕು. ಸರ್ಕಾರೇತರ ಸಂಸ್ಥೆಗಳು ಮತ್ತು ಸರ್ಕಾರಿ ಸಂಸ್ಥೆಗಳು ನಡೆಸುವ ಇಂತಹ ಕೇಂದ್ರಗಳಿಗೆ ಸೂಕ್ತ ತರಬೇತಿ ನೀಡಬೇಕು. ಉತ್ತಮ ವೇತನ ನೀಡಿ ಅರ್ಹ ಸಮಾಜ ಕಾರ್ಯಕರ್ತರು ಹಾಗೂ ಆಪ್ತಸಮಾಲೋಚನಾಕಾರರನ್ನು ನೇಮಿಸಿಕೊಂಡಿರುವಂತಹ ಆಪ್ತಸಮಾಲೋಚನಾ ಕೇಂದ್ರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸಬೇಕು.

೫.೨.೩.೮.೮. ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರತ್ಯೇಕವಾಗಿ ವೈದ್ಯಕೀಯ/ತುರ್ತು ಕೇಂದ್ರಗಳನ್ನು ಸ್ಥಾಪಿಸಲು ಹೆಚ್ಚು ಅನುದಾನವನ್ನು ನೀಡಬೇಕು. ತೊಂದರೆಗೆ ಒಳಗಾದ ಮಹಿಳೆಯರಿಗೆ ಪುನರ್ವಸತಿ ಒದಗಿಸಬೇಕು. ಅವರಲ್ಲಿ ಸ್ವಾವಲಂಬನೆಯ ಕೌಶಲ್ಯ ಬೆಳೆಸಿ, ಆಸ್ತಿ ಹಕ್ಕು, ಜೀವನೋಪಾಯ, ಆರೈಕೆ ಮತ್ತು ರಕ್ಷಣೆ ಲಭ್ಯವಾಗುಯವಂತೆ ಮಾಡಿದರೆ ತಾರತಮ್ಯ ಮತ್ತು ಕಳಂಕಕ್ಕೆ ಒಳಗಾಗುವುದನ್ನು ತಪ್ಪಿಸಬಹುದು.

೫.೨.೩.೮.೯. ಹೆಚ್ಚು ಹೆಚ್ಚು ಜನರು ನಗರ ಪ್ರದೇಶಗಳಿಗೆ ವಲಸೆ ಬರುವುದರಿಂದ ಅಲ್ಲಿ ಅವರಿಗೆ ಉಚಿತ ರಾತ್ರಿ ಆಶ್ರಯ ತಾಣಗಳನ್ನು ಕಟ್ಟಿಕೊಡಬೇಕು. ಇದರಿಂದ ಮಾರಾಟ ಜಾಲದಲ್ಲಿ ಸಿಕ್ಕಿಕೊಳ್ಳುವುದನ್ನು ಹಾಗೂ ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುವ ಹಿಂಸೆಯನ್ನು ತಪ್ಪಿಸಬಹುದು. ಹಿಂಸೆಗೆ ಒಳಗಾಗುವ ಮಹಿಳೆಯರಿಗೆ ಕಾನೂನಿನ ಅನುಷ್ಠಾನ ಮತ್ತು ನ್ಯಾಯವಾದ ತೀರ್ಪು ದೊರಕುವಂತಾಗಬೇಕು. ಮಾಹಿತಿ, ವಕೀಲಿ, ಬೆಂಬಲ ಹಾಗೂ ಸಂಕಷ್ಟದಲ್ಲಿ ಆಪ್ತಸಮಾಲೋಚನೆ ನೀಡುವ ಹಾಟ್‌ಲೈನ್ ಮತ್ತು ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಬೇಕು.

೫.೨.೩.೮.೧೦. ಸಾಗಾಟಕ್ಕೆ ಒಳಪಟ್ಟ ಮಹಿಳೆಯರ ಪುನರ್ವಸತಿಗೆ ವಿಶೇಷ ಆಶ್ರಯ ತಾಣಗಳನ್ನು ತೆರೆಯಬೇಕು. ಅಲ್ಲಿ ಅವರನ್ನು ಗೌರವದಿಂದ ನಡೆಸಿಕೊಂಡು ತಮ್ಮದೆ ಹಕ್ಕಿನಿಂದ ಬದುಕುವಂತಾಗಬೇಕು. ಅವರನ್ನು ಅಪರಾಧಿಗಳಂತೆ ನೋಡಬಾರದು. ರಕ್ಷಣೋತ್ತರ ಪುನರ್ವಸತಿ ಮತ್ತು ಅನುದಾನ ಒದಗಿಸುವ ವ್ಯವಸ್ಥೆಯನ್ನು ಬೆಳೆಸಬೇಕು.

ತೊಂದರೆಗೆ ಸಿಕ್ಕಿಕೊಂಡಿರುವ ಮಹಿಳೆಯರು ಮನೆಗೆ ಹಿಂತಿರುಗಿ ಹೋಗಲು ಒತ್ತಾಯ ಮಾಡಬಾರದು. ಒಂದು ವೇಳೆ ಅವರು ಹಿಂದುರಿಗಿದರೂ ಅವರು ಸುರಕ್ಷಿತವಾಗಿದ್ದಾರೆ ಎಂದು ಅನುಸರಣೆ ಮಾಡಬೇಕು. ರಕ್ಷಿಸಿದ ನಂತರ ೩ ವರ್ಷಗಳವರೆಗೆ ನಿರಂತರ ನಿಗಾ ಇಟ್ಟಿರಬೇಕು. ಆಗ ಪರಿಣಾಮಕಾರಿಯಾಗಿ ಮಾನಸಿಕ-ಸಾಮಾಜಿಕ ಪುನರ್‌ಸಮಗ್ರಗೊಳಿಸಲು ಮತ್ತು ಪುನರ್ವಸತಿಗೊಳ್ಳಲು ಸಾಧ್ಯವಾಗುತ್ತದೆ.

೫.೨.೩.೮.೧೧. ಶಾಲೆ, ವಸತಿನಿಲಯ ಮತ್ತು ಮನೆಗಳು ಸೇರಿದಂತೆ ಯಾವುದೇ ವಾಸ ಸ್ಥಳದಲ್ಲಿ ಹೆಣ್ಣು ಮಕ್ಕಳು ಮತ್ತು ಮಹಿಳೆಯರಿಗೆ ರಕ್ಷಣೆ ಮತ್ತು ಸುರಕ್ಷತೆಯನ್ನು ನೀಡುವ ಕ್ರಮವನ್ನು ಬಲಗೊಳಿಸಬೇಕು.

೫.೨.೩.೮.೧೨. ರಕ್ಷಣಾ ಅಧಿಕಾರಿಗಳು, ಸೇವೆ ಒದಗಿಸುವವರು, ನ್ಯಾಯಾಂಗದ ಸದಸ್ಯರು, ಪೋಲೀಸರು, ವೈದ್ಯರು, ಆಪ್ತಸಮಾಲೋಚನಾಕಾರರು, ವಕೀಲರು ಮುಂತಾದವರನ್ನು ನೇಮಕ ಮಾಡಲು, ತರಬೇತಿ ನೀಡಲು, ಸೂಕ್ಷ್ಮಗ್ರಾಹಿಗಳನ್ನಾಗಿಸಲು ಮತ್ತು ಅವರಲ್ಲಿ ಸಾಮರ್ಥ್ಯ ಬೆಳೆಸಲು ಸೂಕ್ತ ಅನುದಾನವನ್ನು ಒದಗಿಸಬೇಕು. ಕೌಟುಂಬಿಕ ಹಿಂಸೆಯ ಸೇರಿದಂತೆ ಇತರ ನಾಗರೀಕ ಮತ್ತು ಅಪರಾಧಿ ಕಾಯಿದೆಗಳ ಬಗ್ಗೆ ಅವರನ್ನು ಸೂಕ್ಷ್ಮಗೊಳಿಸಿ ಅಪರಾಧಗಳನ್ನು ತಡೆಗಟ್ಟಬೇಕು.

೫.೨.೩.೮.೧೩. ಬಾಲ್ಯ ವಿವಾಹ ವ್ಯಾಪಕವಾಗಿ ನಡೆಯುತ್ತಿರುವ ಸಮುದಾಯ ಮತ್ತು ಜಿಲ್ಲೆಗಳ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಆದ್ಯತೆ ಕೊಡುವುದರ ಮೂಲಕ ಬಾಲ್ಯ ವಿವಾಹವನ್ನು ತಡೆಗಟ್ಟಲು ವಿಶೇಷ ಪ್ರಯತ್ನ ಮಾಡಬೇಕು.

೫.೨.೩.೮.೧೪. ಮಾನವ ಸಾಗಾಟ ಮತ್ತು ಲೈಂಗಿಕ ಶೋಷಣೆಗೆ ಬಲಿಯಾದವರ ರಕ್ಷಣೆ ಮತ್ತು ಪುನರ್ವಸತಿಗೆ ಈಗಿರುವ ಕಾಯಿದೆ ಮತ್ತು ಯೋಜನೆಗಳನ್ನು ಬಲಪಡಿಸಲು ಕ್ರಮ ಕೈಗೊಳ್ಳಬೇಕು.

ಮಾನವ ಸಾಗಾಟದ ಪ್ರಕರಣಗಳ ವಿಚಾರಣೆ ನಡೆಸಲು ವಿಶೇಷ ನ್ಯಾಯಾಲಯ ಮತ್ತು ವಿಶೇಷ ನ್ಯಾಯಾಧೀಶರನ್ನು ನೇಮಕ ಮಾಡಿ ನಿಗದಿತ ಸಮಯದೊಳಗೆ ಪ್ರಕರಣಗಳನ್ನು ಬಗೆಹರಿಸುವಂತೆ ಮಾಡಬೇಕು. ಸಾಕ್ಷಿ ಕಾನೂನು ಕ್ರಮ ಕೈಗೊಳ್ಳುವ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಬೇಕು. ಮಾನವ ಸಾಗಾಟಕ್ಕೆ ಬಡತನವು ಪ್ರಮುಖ ಕಾರಣವಾಗಿರುವುದರಿಂದ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಅಧಿಕವಾಗಿ ಮಾನವ ಸಾಗಾಟಕ್ಕೆ ಒಳಪಡುವ ಕ್ಷೇತ್ರಗಳ ಅಭಿವೃದ್ಧಿಗೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

೫.೨.೩.೮.೧೫. ತಳಮಟ್ಟ, ಜಿಲ್ಲಾ ಮತ್ತು ಬ್ಲಾಕ್ ಮಟ್ಟದ ಮಹಿಳಾ ಮುಖಂಡರುಗಳಿಗೆ ಕಾನೂನು ಅರಿವು ತರಬೇತಿಯನ್ನು ನೀಡಬೇಕು. ಲೋಕ ಅದಾಲತ್ ಮತ್ತು ಪರ್ಯಾಯ ನ್ಯಾಯಾಂಗ ವ್ಯವಸ್ಥೆಯನ್ನು ಸ್ಥಾಪಿಸಿ ಸ್ಥಳೀಯ ಮಟ್ಟದಲ್ಲಿ ಪ್ರಕರಣಗಳನ್ನು ಇತ್ಯರ್ಥಪಡಿಸಬೇಕು. ಕಾನೂನಿನ ಸುಧಾರಣಾ ಪ್ರಕ್ರಿಯೆಯು ಎಲ್ಲಾ ಹಂತಗಳಲ್ಲೂ ಮಹಿಳಾ ಸಂಘಟನೆಗಳನ್ನು ಸಂಪರ್ಕಿಸಬೇಕು.

೫.೨.೩.೮.೧೬. ನೆರೆ ಮನೆಯಲ್ಲಿರುವ ಮಹಿಳಾ ಖೈದಿಗಳ ಅಗತ್ಯಗಳನ್ನು ಪೂರೈಸಿ ಅವರ ಸಮಸ್ಯೆಗಳನ್ನು ಬಗೆಹರಿಸು ಸುಧಾರಣೆಗಳನ್ನು ತರಬೇಕು. ಮಹಿಳೆಯರ ಮೇಲಿನ ದೌರ್ಜನ್ಯವನ್ನು ಹೋಗಲಾಡಿಸಲು ಸಂಬಂಧಪಟ್ಟ ಕಾಯಿದೆಗಳನ್ನು ಆಗಾಗ್ಗೆ ಸಮೀಕ್ಷೆ ಮತ್ತು ವಿಶ್ಲೇಷಣೆ ಮಾಡಬೇಕು, ಹೊಸ ಕಾಯಿದೆಗಳನ್ನು ಅಳವಡಿಸಿಕೊಂಡು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ವಿವಾಹ ಮತ್ತು ಕುಟುಂಬದೊಳಗೆ ಮಹಿಳೆಯರಿಗೆ ಆಸ್ತಿ ಹಕ್ಕು ದೊರಕುವಂತಾಗಬೇಕು.

೫.೨.೩.೮.೧೭. ಮಹಿಳಾ ವಿರೋಧಿ ತೀರ್ಪುಗಳನ್ನು ನೀಡುವ ಸಮುದಾಯ ಮಟ್ಟದ ನ್ಯಾಯಾಂಗ ವ್ಯವಸ್ಥೆಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಅಂತರ್ಜಾತಿ ಅಥವಾ ಅಂತರ್ ಧರ್ಮೀಯ ವಿವಾಹಗಳನ್ನು ನಿಷೇಧಿಸುವ, ದೇವದಾಸಿ ಪದ್ಧತಿಯನ್ನು ಪ್ರೋತ್ಸಾಹಿಸುವುದು, ಮಾಟಗಾತಿಯರನ್ನು ಹತ್ಯೆ ಮಾಡುವಂತಹ ಹಾನಿಕಾರಕ ಸಾಮಾಜಿಕ ಆಚರಣೆಗಳನ್ನು ತಡೆಗಟ್ಟಬೇಕು.

೫.೨.೩.೮.೧೮. ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಸುರಕ್ಷತಾ ತರಬೇತಿ ನೀಡಬೇಕು. ಮಹಿಳೆಯರ ದೌರ್ಜನ್ಯದ ಪ್ರಕರಣಗಳನ್ನು ತೆಗೆದುಕೊಳ್ಳುವ ಮಹಿಳಾ ಹೋರಾಟಗಾರರನ್ನು ಬೆದರಿಸಲಾಗುತ್ತದೆ ಮತ್ತು ಅವರ ಮೇಲೆ ಆಕ್ರಮಣ ಮಾಡಲಾಗುತ್ತದೆ. ಇಂತಹ ಪ್ರಕರಣಗಳ ವಿರುದ್ಧ ಕಠಿಣ ಕ್ರಮ ಕೈಗೊಂಡು ಮಹಿಳಾ ಹೋರಾಟಗಾರರ ಹಕ್ಕುಗಳನ್ನು ರಕ್ಷಿಸಬೇಕು.

೫.೨.೩.೮.೧೯. ಹಣಕಾಸಿನ ವಂಚನೆ, ಕಿರುಕುಳ, ಬೆನ್ನು ಹತ್ತುವ ಮತ್ತು ಮಾಫಿಯಾ ಸೇರಿದಂತೆ ಸೈಬರ್ ಅಪರಾಧದ ವಿರುದ್ಧ ವಿಶೇಷ ಅರಿವನ್ನು ಮೂಡಿಸಬೇಕು.

### ೫.೨.೩.೯. ದಮನಕಾರಿ ಮತ್ತು ಹಾನಿಕಾರಕ ಪದ್ಧತಿ ಮತ್ತು ಆಚರಣೆಗಳು

ಸಮುದಾಯದೊಳಗೆ ಹಿಂದಿನಿಂದ ನಂಬಿಕೊಂಡು ಅನುಸರಿಸುತ್ತಿರುವ ದಮನಕಾರಿ ಮತ್ತು ನಿರ್ಬಂಧಿತ ಪದ್ಧತಿ, ಆಚರಣೆಗಳ ವಿರುದ್ಧ ಸಾಮಾಜಿಕ ಅರಿವು ಮತ್ತು ಸಾಮೂಹಿಕ ಅಭಿಪ್ರಾಯಗಳನ್ನು ಬೆಳೆಸಬೇಕು. ಮಹಿಳೆಯರನ್ನು ಕೀಳಾಗಿಸುವ ಅಗೌರವಿಸುವ ಇಂತಹ ಪದ್ಧತಿಗಳು ಮಹಿಳೆ ತನ್ನ ಸಾಮರ್ಥ್ಯವನ್ನು ಅರಿತುಕೊಳ್ಳಲು ಮತ್ತು ಗೌರವದಿಂದ ಬಾಳಲು ಬಿಡುವುದಿಲ್ಲ. ಇವುಗಳ ಬಗ್ಗೆ ಸೂಕ್ಷ್ಮತೆಯನ್ನು ಬೆಳೆಸುವುದರ ಜೊತೆಗೆ ದಮನಗಿರಿ ಪದ್ಧತಿಗಳನ್ನು ಹೋಗಲಾಡಿಸುವ ಕಠಿಣ ಕಾಯಿದೆಗಳನ್ನು ಜಾರಿಗೆ ತರಬೇಕು.

## ೫.೩. ಆಡಳಿತ, ನಿರ್ಧಾರ ಕೈಗೊಳ್ಳುವಿಕೆ, ನಾಯಕತ್ವ ಮತ್ತು ರಾಜಕೀಯ ಸಶಕ್ತೀಕರಣ

೫.೩.೧. ಸಶಕ್ತೀಕರಣದ ಗುರಿಗಳನ್ನು ಸಾಧಿಸಬೇಕೆಂದರೆ ಮಹಿಳೆಯರಿಗೆ ಅಧಿಕಾರ ಹಂಚಿಕೆಯಲ್ಲಿ ಸಮಪಾಲು ಕೊಡಬೇಕು, ನಿರ್ಧಾರ ಕೈಗೊಳ್ಳುವುದರಲ್ಲಿ ಭಾಗವಹಿಸಬೇಕು, ರಾಜಕೀಯ ಪ್ರಕ್ರಿಯೆಯ ಎಲ್ಲಾ ಹಂತಗಳಲ್ಲೂ ಸೇರಿಸಿಕೊಳ್ಳಬೇಕು. ನಿರ್ಧಾರ ಕೈಗೊಳ್ಳುವ ಎಲ್ಲಾ ಮಂಡಳಿಗಳ ಪ್ರತಿ ಹಂತದಲ್ಲು ಮಹಿಳೆಯರಿಗೆ ಸಮಾನ ಲಭ್ಯತೆ ಮತ್ತು ಸಂಪೂರ್ಣವಾಗಿ ಭಾಗವಹಿಸುವಂತಾಗಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ಕಾರ್ಪೊರೇಟ್, ಶಾಸನ ಮಂಡಳಿ, ಸಲಹಾ ಆಯೋಗ ಸಮಿತಿ, ಮಂಡಳಿ, ಟ್ರಸ್ಟ್‌ಗಳಲ್ಲಿ ಮಹಿಳೆಯರು ಸೇರುವಂತೆ ಮಾಡಲಾಗುವುದು. ಉನ್ನತ ಶಾಸಕಾಂಗ ಮಂಡಳಿಗಳನ್ನು ಸೇರಿದಂತೆ ವಿವಿಧ ಸಂಘಗಳಲ್ಲಿ ಮೀಸಲಾತಿ/ಕೋಟಾ ಮುಂತಾದ ಸಕರಾತ್ಮಕ ಕ್ರಿಯೆಗಳನ್ನು, ಅವಶ್ಯಕತೆಯುಂಟಾದಾಗ ನಿಗದಿತ ಸಮಯದ ಆಧಾರದ ಮೇಲೆ ಕೈಗೊಳ್ಳಲಾಗುವುದು. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ಭಾವವಹಿಸುವಂತಾಗಲು ಮಹಿಳಾ ಸ್ನೇಹಿ ಕಾರ್ಯನೀತಿಗಳನ್ನು ರಚಿಸಲಾಗುವುದು.

೫.೩.೨. ನಿರ್ಧಾರ ಕೈಗೊಳ್ಳುವ ಪ್ರಮುಖ ಸ್ಥಾನಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿಸುವುದು ರಾಜಕೀಯ ಸಶಕ್ತೀಕರಣದ ಮುಖ್ಯ ಗುರಿ. ಆಡಳಿತದ ಮೂರು ಭಾಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಉದ್ದೇಶವನ್ನು ಇಟ್ಟುಕೊಂಡು ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಬೇಕು.

೫.೩.೩. ಸಂಸತ್ತು, ವಿಧಾನಸಭೆ, ನಗರ, ಸ್ಥಳೀಯ ಮಂಡಳಿ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ಪರ್ಧಿಸುವ ಮಹಿಳಾ ಅಭ್ಯರ್ಥಿಗಳಿಗೆ ಸರ್ಕಾರದ ಅನುದಾನ ದೊರಕುವಂತೆ ಚುನಾವಣಾ ಸುಧಾರಣೆ ತರಬೇಕು. ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಇತರ ಹುದ್ದೆಗಳಲ್ಲಿ ಗೆದ್ದ ಮಹಿಳಾ ಪ್ರತಿನಿಧಿಗಳಿಗೆ ರಾಜಕೀಯ ಕೌಶಲ್ಯ ಬೆಳೆಸುವ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು, ಇದಕ್ಕೆ ಬೇಕಾದ ಸಂಪನ್ಮೂಲಗಳನ್ನು ಹೆಚ್ಚಿಸಬೇಕು.

೫.೩.೪. ಅವಿಶ್ವಾಸ ಮತ ಕೋರುವ ಕಲಂನಲ್ಲಿ ತಿದ್ದುಪಡಿ ತರಬೇಕು. ಮಹಿಳಾ ಸದಸ್ಯರುಗಳನ್ನು ಅಧಿಕಾರದಿಂದ ತೆಗೆದುಹಾಕಲು ಆಗಾಗ್ಗೆ ಈ ಅವಿಶ್ವಾಸ ಮುಂತಾದ ತಂತ್ರವನ್ನು ಬಳಸಲಾಗುತ್ತದೆ. ಇದನ್ನು ತಪ್ಪಿಸಲು ಅಧಿಕಾರವು ಬಂದ ಒಂದೂವರೆ ವರ್ಷದವರೆಗೆ ಅವಿಶ್ವಾಸ ಮತಕೋರಬಾರದೆಂಬ ನಿಯಮ ಮಾಡಬೇಕು. ಒಂದು ವೇಳೆ ಅವಿಶ್ವಾಸ ಮತವನ್ನು ಜಾರಿಗೆ ತಂದರೆ, ಮೊದಲಿನ ಒತ್ತಡದಂತೆ ಅದೇ ಸಾಮಾಜಿಕ ಗುಂಪಿನಿಂದ ಮತ್ತೊಂದು ಒತ್ತಡ ತರಬೇಕು.

೫.೩.೫. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ ಅದರಲ್ಲೂ ಗ್ರಾಮೀಣ ಮಹಿಳೆಯರಿಗೆ ಸಂತಾನೋತ್ಪತ್ತಿ ಆಯ್ಕೆಯಲ್ಲಿ ನಿರ್ಧಾರಗೊಳ್ಳಲು ಸಾಧ್ಯವಿರುವುದಿಲ್ಲ. ಹೀಗಿರುವಾಗ ಎರಡು ಮಕ್ಕಳ ನಿಯಮವನ್ನು ಜಾರಿಗೆ ತಂದರೆ ಎರಡಕ್ಕಿಂತ ಹೆಚ್ಚಾಗಿರುವ ಮಕ್ಕಳಿರುವ ಮಹಿಳೆಯರು ಚುನಾವಣೆಯಿಂದ ಹೊರಗುಳಿಯುತ್ತಾರೆ. ನಿಯಮವನ್ನು ಮಹಿಳೆಯರ ವಿರುದ್ಧ ಬಳಸಿಕೊಳ್ಳಲಾಗುತ್ತದೆ. ಬಡ ಮಹಿಳೆಯರು, ಮುಸ್ಲಿಂ ಮತ್ತು ಬುಡಕಟ್ಟು ಮಹಿಳೆಯರು ಚುನಾವಣೆಗೆ ನಿಲ್ಲುವ ಅವಕಾಶದಿಂದ ವಂಚಿತರಾಗುತ್ತಾರೆ. ಇದಕ್ಕಿಂತ ದುರಂತವೆಂದರೆ ಹೆಣ್ಣು ಭ್ರೂಣ ಹತ್ಯೆ ಹೆಚ್ಚಾಗುವುದಕ್ಕೆ ದಾರಿ ಮಾಡಿಕೊಡುತ್ತಿದೆ.

೫.೩.೬. ಯೋಜನಾ ಪ್ರಕ್ರಿಯೆ, ಯೋಜನಾ ಮಂಡಳಿ ಮತ್ತು ಸಮಿತಿಗಳಲ್ಲಿ ಬಡ ಮತ್ತು ಇತರೆ ಹೊರಗಿಡಲ್ಪಟ್ಟ ಮಹಿಳೆಯರನ್ನು ಸೇರಿಸಿಕೊಳ್ಳುವುದಕ್ಕೆ ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕು.

೫.೩.೭. ಆದಷ್ಟು ಬೇಗ ವಿಧಾನ ಸಭೆಯಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗ ಮೀಸಲಾತಿ ನೀಡುವ ಮಸೂದೆಯು ಜಾರಿಗೊಳ್ಳಬೇಕು. ವಿವಿಧ ಸಾಮಾಜಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಸಂಸ್ಥೆಗಳಲ್ಲಿ ನಿರ್ಧಾರ ಕೈಗೊಳ್ಳುವ ಮಂಡಳಿಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಬೇಕು. ಖಾಸಗಿ ವಲಯದಲ್ಲೂ ಮಂಡಳಿ ಮತ್ತು ನಿರ್ಧಾರ ಕೈಗೊಳ್ಳುವ ಸ್ಥಾನಗಳಲ್ಲಿ ಮಹಿಳೆಯರು ಸೇರಿಕೊಳ್ಳುವಂತಾಗಬೇಕು.

## ೫.೪. ದುರ್ಬಲ ವರ್ಗಗಳಿಗೆ ಸಾಮಾಜಿಕ–ಆರ್ಥಿಕ ಮಧ್ಯ ಪ್ರವೇಶಿಕೆ

೫.೪.೧. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ಅಲ್ಪ ಸಂಖ್ಯಾತ ಸಮುದಾಯದ ಮಹಿಳೆಯರು

೫.೪.೧.೧. ಜಂಡರ್ ಯೋಜನೆಯಲ್ಲಿ ಅಂತರ್ ವರ್ಗೀಯತೆಯನ್ನು ಮಾರ್ಗಸೂಚಿ ತತ್ವವನ್ನಾಗಿ ಇಟ್ಟುಕೊಳ್ಳಬೇಕು. ಎಲ್ಲಾ ಅಂತರ್ ವರ್ಗೀಕರಣದಲ್ಲಿ ಎರಡು, ಮೂರು ಮತ್ತು ಬಹುಮುಖಿಯ ತಾರತಮ್ಯ ಕಂಡುಬರುತ್ತದೆ. ಇದು ಜಾತಿ/ಬುಡಕಟ್ಟು, ಧರ್ಮ, ಆರ್ಥಿಕ ಮತ್ತು ದುಡಿಮೆ ಸ್ಥಾನ, ವಾಸಸ್ಥಳ, ಭೌಗೋಳಿಕ ಸ್ಥಳ, ಆಸ್ತಿ ಒಡೆತನ, ವೈವಾಹಿಕ ಸ್ಥಾನ, ವಯಸ್ಸು, ಆರೋಗ್ಯ ಮಟ್ಟ ಇತ್ಯಾದಿಗಳಲ್ಲಿ ಕಂಡುಬರುತ್ತದೆ. ಈ ಅಂಶವನ್ನು ಜಂಡರ್ ಚೌಕಟ್ಟು ಅಳವಡಿಸಬೇಕು.

೫.೪.೧.೨. ಈ ವಿಷಯ ಕುರಿತ ಸಮಗ್ರ ದತ್ತಾಂಶವನ್ನು ಸಂಗ್ರಹಿಸಿದರೆ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ವಿವಿಧ ಗುಂಪುಗಳಿಗೆ ಸೇರಿದ ಮಹಿಳೆಯರು ಮತ್ತು ಹೆಣ್ಣು ಮಕ್ಕಳು 'ಮಾನವ ಅಭಿವೃದ್ಧಿ ಸೂಚಿ'ಗಳಲ್ಲಿ ಸಾಧಿಸಿರುವ ಪ್ರಗತಿಯ ಹಾದಿಯನ್ನು ಪರಿಶೀಲಿಸಬಹುದು. ಆರೋಗ್ಯ ಮತ್ತು ಶಿಕ್ಷಣದಿಂದ ವಂಚಿತರಾಗುವುದಷ್ಟೆ ಅಲ್ಲ, ಕಾನೂನಿನ ಅಡಚಣೆಗಳಿಂದ ಹಿಡಿದು ಮೂಢನಂಬಿಕೆಗಳಿಗೆ ಬಲಿಯಾಗುವಂತಹ ಹಲವು ಬಗೆಯ ತೊಂದರೆಗಳಿಗೆ ಸಿಲುಕಿಕೊಳ್ಳುತ್ತಾರೆ.

೫.೪.೧.೩. ಎಲ್ಲಾ ಕಾರ್ಯಕ್ರಮಗಳಲ್ಲಿ ಕಂಡು ಬರುವಂತಹ ತಾರತಮ್ಯ, ಕಡಿಮೆ ಭಾಗವಹಿಸುವಿಕೆ ಮತ್ತು ಕಾರ್ಯಸಾಧನೆಯಿರುವುದನ್ನು ಬೆಳಕಿಗೆ ತರುವ ಕೆಲಸವಾಗಬೇಕು. ಮಹಿಳೆಯರಿಗೆ ಶಿಕ್ಷಣ ಮತ್ತು ಪೌಷ್ಟಿಕತೆ ಲಭ್ಯವಾಗಬೇಕು.

## ೫.೪.೨. ದಿವ್ಯಾಂಗ ಚೇತನ ಮಹಿಳೆಯರು

೫.೪.೨.೧. ದಿವ್ಯಾಂಗ ಚೇತನರಿಗೆ ಇರುವ ಕಾನೂನು ಸವಲತ್ತುಗಳು ದಿವ್ಯಾಂಗ ಚೇತನ ಮಹಿಳೆಯರಿಗೆ ವಿಶೇಷ ಸವಲತ್ತುಗಳನ್ನು ಒದಗಿಸುವುದಿಲ್ಲ. ದಿವ್ಯಾಂಗ ವ್ಯಕ್ತಿ ಕಾಯಿದೆಯು ಜಂಡರ್ ನಿರಪೇಕ್ಷವಾಗಿದೆ. ಇದು ಆರೋಗ್ಯ, ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ದಿವ್ಯಾಂಗ ಚೇತನ ಮಹಿಳೆಯರಿಗೆ ನಿರ್ಧಿಷ್ಟ ಕಾಳಜಿಯನ್ನು ತೋರುವುದಿಲ್ಲ. ದಿವ್ಯಾಂಗ ಚೇತನ ಕುರಿತ ಕಾಯಿದೆಯನ್ನು ಜಂಡರ್ ಆಧಾರಿತ ವಿಶ್ಲೇಷಣೆಗೆ ಒಳಪಡಿಸಿದರೆ ದಿವ್ಯಾಂಗ ಚೇತನ ಮಹಿಳೆಯರು ಎದುರಿಸುವ ಸಮಸ್ಯೆಗಳನ್ನು ಗುರುತಿಸಿ ಪರಿಹಾರಗಳನ್ನು ಕಂಡುಕೊಳ್ಳಬಹುದು.

೫.೪.೨.೨. ದಿವ್ಯಾಂಗ ಚೇತನ ಮಹಿಳೆಯರು ಹೆಚ್ಚು ದೌರ್ಜನ್ಯ ಮತ್ತು ದುರುಪಯೋಗಕ್ಕೆ ಒಳಗಾಗುತ್ತಾರೆ. ಅವರಿಗೆ ತಮ್ಮ ದೇಹದ ಮೇಲಾಗುವ ಹಿಂಸೆಯನ್ನು ತಡೆಗಟ್ಟುವ ಮತ್ತು ಸ್ವ–ರಕ್ಷಣೆ ಬಗ್ಗೆ ಖಚಿತ ಜ್ಞಾನವಿಲ್ಲದಿರಬಹುದು. ಬಲವಂತದ ಸಂತಾನಹರಣ, ಗರ್ಭನಿರೋಧಕ ಮತ್ತು ಗರ್ಭಪಾತದಂತಹ ಸಂತಾನೋತ್ಪತ್ತಿ ಹಕ್ಕುಗಳ ಉಲ್ಲಂಘನೆ ನಡೆಯುವುದು ಸಾಮಾನ್ಯ. ಹರೆಯದ ಹೆಣ್ಣು ಮಕ್ಕಳ ವಿಶೇಷ ಶಿಕ್ಷಣ ವ್ಯವಸ್ಥೆಯಲ್ಲಿ ಸ್ವ–ರಕ್ಷಣೆಯು ಮುಖ್ಯ ಭಾಗವಾಗಬೇಕು.

೫.೪.೨.೩. ಜಂಡರ್ ಸಮಾನತೆ ಕಾರ್ಯಕ್ರಮಗಳನ್ನು ದಿವ್ಯಾಂಗ ಚೇತನ ಮಹಿಳೆಯರನ್ನು ಸೇರಿಸದಿರುವುದು ಹೆಚ್ಚಾಗಿ ಕಂಡುಬರುತ್ತದೆ. ದಿವ್ಯಾಂಗ ಚೇತನರಿಗೆ ಹಮ್ಮಿಕೊಂಡ ಯೋಜನೆಗಳಲ್ಲಿ ಮಹಿಳೆಯರನ್ನು ಕೇವಲ ಫಲಾನುಭವಿಗಳನ್ನಾಗಿ ಮಾತ್ರ ಸೇರಿಸಿಕೊಳ್ಳದೆ ಕ್ಷೇತ್ರ ಕಾರ್ಯಕರ್ತರು ಯೋಜನಾ ಸಹಾಯಕರು, ಸಮೀಕ್ಷಾ ವಿನ್ಯಾಸಗಾರರು ಮತ್ತು ಕ್ಷೇತ್ರ ಪರಿಶೋಧಕರಾಗಿಯೂ ಸೇರಿಸಿಕೊಳ್ಳಬೇಕು. ಇದರಿಂದ ಅವರು ಸಕಾರಾತ್ಮಕ ಪಾತ್ರಗಳಲ್ಲಿ ಕಾಣಿಸಿಕೊಳ್ಳುವುದು

ಹೆಚ್ಚಾಗುತ್ತದೆ. ಅನುಕಂಪಕ್ಕೆ ಪಾತ್ರರಾಗುವ ಅಸಹಾಯಕರೆಂದು ಕಾಣುವ ಜನರ ನಕಾರಾತ್ಮಕ ಮನೋಭಾವವನ್ನು ಎದುರಿಸಲು ಸಾಧ್ಯವಾಗುತ್ತಾರೆ.

೫.೨.೨.೪. ತಂತ್ರಜ್ಞಾನವು ಇವತ್ತು ಸಶಕ್ತೀಕರಣದ ಸಾಧನವಾಗಿದೆ. ದಿವ್ಯಾಂಗ ಚೇತನದ ವಲಯದಲ್ಲಿ (ಸರ್ಕಾರಿ ಕಾರ್ಯನೀತಿಗಳು) ನವೀನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡಬೇಕು.

## ೫.೪.೩. ಮಹಿಳಾ ವಲಸೆಗಾರರು ಮತ್ತು ಸ್ಥಳಾಂತರಗೊಂಡ ಮಹಿಳೆಯರು

೫.೪.೩.೧. ಜನರು ದುಡಿಮೆಗಾಗಿ ಆಂತರಿಕ ಅಲ್ಪಾವಧಿಯ ವಲಸೆ ಹೋಗಬಹುದು (ಅದು ಋತುಮಾನಕ್ಕೆ ತಕ್ಕಂತ ವಲಸೆ ಅಥವಾ ಋತುಮಾನವಲ್ಲದ ಅಲ್ಪಾವಧಿಯ ವಲಸೆಯಾಗಿರಬಹುದು) ಅಥವಾ ಅಭಿವೃದ್ಧಿ ಯೋಜನೆಗಳು ಮತ್ತು ನೈಸರ್ಗಿಕ ವಿಕೋಪಗಳ ಕಾರಣದಿಂದ ಸ್ಥಳಾಂತರಗೊಂಡಿರಬಹುದು. ಇವು ಇಂದು ಗ್ರಾಮೀಣ ಕರ್ನಾಟಕದಲ್ಲಿ ಹೆಚ್ಚಾಗುತ್ತಿವೆ. ಇದರಿಂದ ಗ್ರಾಮೀಣ ಜನರು ಜೀವನೋಪಾಯದ ಸಂಕಷ್ಟವನ್ನು ಅನುಭವಿಸುತ್ತಿದ್ದಾರೆ.

೫.೪.೩.೨. ಕೆಲಸವನ್ನು ಹುಡುಕಿಕೊಂಡು ವಲಸೆ ಹೋಗುವ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿದೆ. ಪತಿಯೊಂದಿಗೆ ಅಥವಾ ಕುಟುಂಬದ ಇತರರೊಂದಿಗೆ ಅಥವಾ ತಾವೇ ಒಂಟಿಯಾಗಿ ಗುಂಪಿನೊಂದಿಗೆ ಕೆಲಸ ಹುಡುಕಿಕೊಂಡು ವಲಸೆ ಹೋಗುತ್ತಾರೆ. ವಲಸೆಯ ಪರಿಣಾಮಗಳು ಜಂಡರೀಕರಣಗೊಳ್ಳುವುದರಿಂದ, ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಕಾರ್ಯನೀತಿಗಳಲ್ಲಿ ಮಹಿಳಾ ದುಡಿಮೆಗಾರರನ್ನು ವಿಶೇಷವಾಗಿ ಪರಿಗಣಿಸಬೇಕಾಗುತ್ತದೆ.

೫.೪.೩.೩. ವಲಸೆ ಹೋಗುವ ಮತ್ತು ಸ್ಥಳಾಂತರಗೊಳ್ಳುವ ಮಹಿಳೆಯರಿಗೆ ಆಧಾರ್ ಚೀಟಿಯನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಸಂಪರ್ಕಿಸಬೇಕು. ಮಕ್ಕಳೂ ಮಹಿಳೆಯರೊಂದಿಗೆ ವಲಸೆ ಹೋಗುವುದರಿಂದ ಅವರ ಶಿಕ್ಷಣ ನಿಂತುಹೋಗುತ್ತಿದೆ. ಇದರಿಂದ ಮಕ್ಕಳ ರಕ್ಷಣೆ ಮತ್ತು ಶಿಕ್ಷಣಕ್ಕೆ ಆದ್ಯತೆ ನೀಡಬೇಕು.

೫.೪.೩.೪. ವಲಸೆ ಮತ್ತು ಸ್ಥಳಾಂತರಗೊಂಡ ಮಹಿಳೆಯರು ವೇತನ ತಾರತಮ್ಯಕ್ಕೊಳಗಾಗುತ್ತಾರೆ. ಆರೋಗ್ಯ ಸೇವೆಗಳಿಂದ ವಂಚಿತರಾಗುತ್ತಾರೆ ಮತ್ತು ಆಶ್ರಯ ರಹಿತರಾಗುತ್ತಾರೆ. ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಬೇಕು.

## ೫.೪.೪. ಮಹಿಳೆಯರು ಮತ್ತು ಅಲ್ಪ ಸಂಖ್ಯಾತ ಸಮುದಾಯ

೫.೪.೪.೧. ಅಲ್ಪ ಸಂಖ್ಯಾತ ಮಹಿಳೆಯರು ಅದರಲ್ಲೂ ವಿಶೇಷವಾಗಿ ಮುಸ್ಲಿಂ ಮಹಿಳೆಯರು ಅಭದ್ರತೆ, ಪ್ರತ್ಯೇಕಗೊಳಿಸುವಿಕೆ, ಬಡತನಕ್ಕೆ ಈಡಾಗುತ್ತಿದ್ದು ಅಭಿವೃದ್ಧಿಯ ಲಾಭದಿಂದ ವಂಚಿತರಾಗುತ್ತಿದ್ದಾರೆ.

೫.೪.೪.೨. ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೂ ಅಲ್ಪಸಂಖ್ಯಾತ ಮಹಿಳೆಯರಿಗೆ ವಿದ್ಯಾರ್ಥಿ ವೇತನವನ್ನು ನೀಡಬೇಕು.

೫.೪.೪.೩. ಅವರ ಮೂಲಭೂತ ಅವಶ್ಯಕತೆಗಳ ಪೂರೈಕೆಯಲ್ಲಿ ಕಣ್ಣಿಗೆ ಗೋಚರಿಸುವ ಅಸಮಾನತೆಯಿದೆ ಅದನ್ನು ಹೋಗಲಾಡಿಸಬೇಕು.

೫.೪.೪.೪. ಶಿಕ್ಷಣದ ಜೊತೆಗೆ ಆರೋಗ್ಯ, ಉದ್ಯೋಗ, ಹಣಕಾಸಿನ ನೆರವು, ನಾಗರೀಕ ಮೂಲ ಸೌಕರ್ಯಗಳ ಅಗತ್ಯಗಳನ್ನು ಪೂರೈಸಬೇಕು, ಬಡತನ ನಿರ್ಮೂಲನಾ ಕಾರ್ಯತಂತ್ರಗಳನ್ನು ರೂಪಿಸಬೇಕು.

೫.೪.೪.೫. ಪದ್ಧತಿಗಳು ಮತ್ತು ಕಾನೂನು ವ್ಯವಸ್ಥೆಯನ್ನು ವೈಚಾರಿಕವಾಗಿ ಅರ್ಥಮಾಡಿಕೊಂಡು ಸಮುದಾಯ ಮತ್ತು ಸಮಾಜದೊಳಗೆ ಅವರನ್ನು ಸಶಕ್ತಗೊಳಿಸುವ ಪ್ರಯತ್ನ ಮಾಡಬೇಕು.

## ೬. ಪರಿಸರ ಅಧ್ಯಯನ, ಪರಿಸರ ಮತ್ತು ಹವಾಮಾನ ಬದಲಾವಣೆ

೬.೧. ನೀರು, ಕಾಡು, ಮೇವು ಮುಂತಾದ ಸಾಮಾನ್ಯ ಸಂಪನ್ಮೂಲಗಳ ಲಭ್ಯತೆ ಮತ್ತು ನಿಯಂತ್ರಣ ಜನರಿಗೆ ದೊರಕುವಂತಾಗಬೇಕು. ಇವುಗಳೆ ಗ್ರಾಮೀಣ ಬಡಜನರ ದುಡಿಮೆಯ ಮುಖ್ಯ ಆಧಾರಗಳಾಗಿವೆ.

೬.೨. ಪರಿಸರದ ಸಂರಕ್ಷಣೆಗೆ ಮತ್ತು ನವೀಕರಣಕ್ಕೆ ಸಂಬಂಧಪಟ್ಟ ಕಾರ್ಯನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸುವಾಗ ಮಹಿಳೆಯರನ್ನು ತೊಡಗಿಸಿಕೊಳ್ಳಬೇಕು ಅವರ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಬೇಕು.

೬.೩. ಮಹಿಳೆಯರ ಜೀವನದ ಮೇಲೆ ಪರಿಸರ ಬೀರುವ ಪರಿಣಾಮಗಳನ್ನು ಪರಿಗಣಿಸಿದರೆ, ಅದರ ಸಂರಕ್ಷಣೆ ಮತ್ತು ಪರಿಸರ ನಾಶವನ್ನು ನಿಯಂತ್ರಿಸುವಲ್ಲಿ ಮಹಿಳೆಯರ ಭಾಗವಹಿಸುವಿಕೆಗೆ ಭರವಸೆ ಸಿಕ್ಕಂತಾಗುತ್ತದೆ.

೬.೪. ಹೆಚ್ಚು ಇಂಗಾಲವನ್ನು ಉತ್ಪಾದಿಸುವ ಚಟುವಟಿಕೆಗಳನ್ನು ಪ್ರೋತ್ಸಾಹಿಸಬಾರದು. ಮಹಿಳೆಯರು ಇಂಧನವನ್ನು ಸಮರ್ಥವಾಗಿ ಬಳಸಲು ಸುಸ್ಥಿರ ವಿಧಾನವನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಬೇಕು. ಬೆಳೆಯ ಆಯ್ಕೆ, ರಾಸಾಯನಿಕ ಮತ್ತು ಕೀಟನಾಶಕಗಳ ಬಳಕೆಯು ಅವರ ಆರೋಗ್ಯ ಮತ್ತು ಸುತ್ತಮುತ್ತಲಿನ ವಾತಾವರಣದ ಮೇಲೆ ಹೇಗೆ ಕೆಟ್ಟ ಪರಿಣಾಮ ಬೀರುತ್ತದೆ ಎನ್ನುವುದರ ಬಗ್ಗೆ ಅವರಲ್ಲಿ ಅರಿವು ಮೂಡಿಸಬೇಕು.

೬.೫ ಸಸಿ ನೆಡುವುದು, ಪ್ರಕೃತಿಯನ್ನು ರಕ್ಷಿಸುವುದು ಮತ್ತು ನೀರಿನ ಮೂಲಗಳನ್ನು ನವೀಕರಿಸುವ ಕಾರ್ಯದಲ್ಲಿ ಮಹಿಳೆಯರು ಮುಂದಾಳತ್ವ ವಹಿಸಬೇಕು.

೬.೬. ಬೆಳೆ ಆಯ್ಕೆ, ರಾಸಾಯನಿಕ ಮತ್ತು ಕೀಟನಾಶಕಗಳ ಬಳಕೆ ಮಹಿಳೆಯರ ಆರೋಗ್ಯ ಮತ್ತು ಸುತ್ತಮುತ್ತಲಿನ ವಾತಾವರಣದ ಮೇಲೆ ಬೀರುವ ಕೆಟ್ಟ ಪರಿಣಾಮವನ್ನು ಸಂಪೂರ್ಣವಾಗಿ ಹೋಗಲಾಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

## ೭. ಕಾರ್ಯಗತಗೊಳಿಸುವಿಕೆ

## ೭.೧. ಕ್ರಿಯಾ ಯೋಜನೆ

ಕಾರ್ಯನೀತಿಯನ್ನು ಕಾರ್ಯರೂಪಕ್ಕೆ ತರಲು ಸರ್ಕಾರವು ಕಾಲಮಿತಿಯ ಯೋಜನೆಯನ್ನು ತಯಾರಿಸಬೇಕು. ಇದಕ್ಕಾಗಿ ಕೇಂದ್ರ/ರಾಜ್ಯ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಷ್ಟ್ರ/ರಾಜ್ಯ ಮಹಿಳಾ ಆಯೋಗ, ಸ್ಥಳೀಯ ಮಂಡಳಿಗಳು ಮತ್ತು ಗ್ರಾಮ ಪಂಚಾಯಿತಿಗಳನ್ನು ಸಂಪರ್ಕಿಸಿ ಸಹಭಾಗಿತ್ವದ ಪ್ರಕ್ರಿಯೆಯ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಬೇಕು. ಯೋಜನೆಯು ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕು.

೭.೧.೧. ೨೦೨೦ ರ ಹೊತ್ತಿಗೆ ಸಾಧಿಸಬೇಕಾದ ಗುರಿಗಳು

೭.೧.೨. ಸಂಪನ್ಮೂಲಗಳ ಗುರುತಿಸುವಿಕೆ ಮತ್ತು ಬದ್ಧತೆ.

೭.೧.೩. ಕ್ರಿಯಾಯೋಜನೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿ

೭.೧.೪. ಕ್ರಿಯಾ ಯೋಜನೆಗಳ ಪರಿಣಾಮಕಾರಿ ಮೇಲ್ವಿಚಾರಣೆ, ಮೌಲ್ಯ ಮಾಪನ (ಅಂಗೀಕಾರವಾದ ಮತ್ತು ಪರಿಣಾಮದ ಮೌಲ್ಯಮಾಪನ) ಸಮೀಕ್ಷೆ ಮಾಡುವ ಮತ್ತು ಜಂಡರ್ ಪರಿಣಾಮವನ್ನು ವಿಮರ್ಶೆ ಮಾಡುವ ರಚನಾತ್ಮಕ ತಂತ್ರಗಳನ್ನು ಅಭಿವೃದ್ಧಿಪಡಿಸಬೇಕು.

೭.೧.೫. ಸ್ಥಳೀಯ ಮಂಡಳಿಗಳನ್ನು ಸೇರಿಸಿಕೊಂಡು ಕೆಳಗಿನಿಂದ ಮೇಲ್ಮಟ್ಟಕ್ಕೆ ಹೋಗುವ ಪರಿಕ್ರಮವನ್ನು ಅಳವಡಿಸಿಕೊಳ್ಳುವುದರ ಮೂಲಕ ಯೋಜನಾ ಪ್ರಕ್ರಿಯೆಯಲ್ಲಿ ಜಂಡರ್ ದೃಷ್ಟಿಕೋನವನ್ನು ಸೇರಿಸಬೇಕು.

೭.೧.೬. ಕ್ರಿಯಾ ಯೋಜನೆಗಳನ್ನು ಯೋಜನಾ ಕಾರ್ಯಕ್ರಮಗಳಾಗಿ ಪರಿವರ್ತಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಬೇಕಾದ ಹಣಕಾಸಿನ ಮೂಲಗಳನ್ನು ಒಗ್ಗೂಡಿಸುವುದಕ್ಕೆ ಸರ್ಕಾರ ಮುಂದಾಗಬೇಕು.

೭.೧.೭. ಉತ್ತಮ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಸೂಕ್ತ ಸಂಪನ್ಮೂಲ ಹಂಚಿಕೆಗೆ ಬೆಂಬಲ ನೀಡಲು ಜಂಡರ್ ಅಭಿವೃದ್ಧಿ ಸೂಚಿಗಳು (ಜಿ.ಡಿ.ಪಿ) ಜಂಡರ್ ಅಸಮಾನತೆಯ ಸೂಚ್ಯಂಕಗಳನ್ನು ಅಭಿವೃದ್ಧಿ ಪಡಿಸಬೇಕು. ಇದಕ್ಕೆ ವಿಶೇಷ ಪರಿಣಿತಿ ಪಡೆದ ಸಂಘಗಳೊಂದಿಗೆ ಸಂಪರ್ಕ ಕಲ್ಪಿಸಬೇಕು. ಇದರಿಂದ ಮಹಿಳಾ ಸಶಕ್ತೀಕರಣಕ್ಕೆ ಹಮ್ಮಿಕೊಂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಳವಾಗಿ/ವೈಚಾರಿಕವಾಗಿ ಅಧ್ಯಯನ ಮತ್ತು ವಿಶ್ಲೇಷಣೆ ಮಾಡಬಹುದು. ಜೊತೆಗೆ ಜಂಡರ್ ಪರಿಶೋಧನೆ ಮತ್ತು ಮೌಲ್ಯಮಾಪನ  ಕ್ರಿಯೆಯನ್ನು ಕೈಗೊಳ್ಳಬಹುದು.

## ೭.೨. ಜಂಡರನ್ನು ಮುಖ್ಯವಾಹಿನಿಗೊಳಿಸುವುದು

೭.೨.೧. ಪೋಲೀಸ್, ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಮಿಕ ಸಂಘ ಮುಂತಾದ ಸರ್ಕಾರಿ ಅಂಗಗಳನ್ನು ಜಂಡರ್ ಸೂಕ್ಷ್ಮಗೊಳಿಸಿ, ಅಲ್ಲಿ ಜಂಡರನ್ನು ಮುಖ್ಯವಾಹಿನಿಯಾಗಿಸಬೇಕು.

೭.೨.೨. ವಿಶೇಷವಾಗಿ ರಕ್ಷಣೆ ಮತ್ತು ಹಕ್ಕುಗಳನ್ನು ನೀಡುವಂತಹ ಯೋಜನೆಗಳಲ್ಲಿ ಜಂಡರನ್ನು ಮುಖ್ಯವಾಹಿನಿಯಾಗಿಸಬೇಕು. ಉದಾಹರಣೆಗೆ ಒಂದು ವೇಳೆ ಒಬ್ಬ ಮಹಿಳೆಗೆ ಕಾನೂನಿನ ಪ್ರಕಾರ ಆಸ್ತಿಯಲ್ಲಿ ಪಾಲು ಕೊಡಲಿಲ್ಲ ಅಂದರೆ ಆಕೆ ಯಾವುದೇ ಕಿರುಕುಳವಿಲ್ಲದೆ, ನಿಧಾನವಾಗದಂತೆ ಪಾಲು ಪಡೆಯಲು ಆಕೆಗೆ ಯೋಜನೆಗಳ ಸಹಾಯ ಮತ್ತು ಬೆಂಬಲ ನೀಡಬೇಕು. ಈ ಸಂಸ್ಥೆಗಳಲ್ಲಿ ಜಂಡರ್ ಸೂಕ್ಷ್ಮತೆಯನ್ನು ಸೇರಿಸಿದರೆ ಮಾತ್ರ ಇದು ಸಾಧ್ಯವಾಗುತ್ತದೆ. ಅವುಗಳಿಗೂ ಮಹಿಳಾ ಕಾಯಿದೆ, ಕಾರ್ಯನೀತಿ ಹಾಗೂ ಕಾರ್ಯಕ್ರಮಗಳ ಬಗ್ಗೆ ಅರಿವುಂಟಾಗುತ್ತದೆ.

೭.೨.೩. ಎಲ್ಲಾ ಇಲಾಖೆಗಳಲ್ಲಿ ಜಂಡರನ್ನು ಮುಖ್ಯವಾಹಿನಿಯಾಗಿಸುವುದಕ್ಕೆ ಒತ್ತು ನೀಡಬೇಕು. ಇಲಾಖೆಗಳ ಕಾರ್ಯನೀತಿ ಮತ್ತು ಯೋಜನೆಗಳನ್ನು (ಆಂತರಿಕ ಕೇಂದ್ರ ಬಿಂದು) ಕಡ್ಡಾಯವಾಗಿ ಸಮೀಕ್ಷೆ ಮಾಡಿ ಅದನ್ನು ಆಧರಿಸಿ ಜಂಡರ್ ಮುಖ್ಯವಾಹಿನಿಯಾಗಿಸಬೇಕು. ಇದಕ್ಕಾಗಿ ಪೂರ್ಣಾವಧಿಯಲ್ಲದಿದ್ದರೂ 'ಮಾಹಿತಿ ಅಧಿಕಾರಿ'ಯೆಂಬ ಹುದ್ದೆಗೆ ಒಬ್ಬ ವ್ಯಕ್ತಿಯನ್ನು ನೇಮಿಸಬೇಕು.

೭.೨.೪. ಮಹಿಳೆಯರಿಗೆ ಅತ್ಯಂತ ಶೀಘ್ರವಾಗಿ ನ್ಯಾಯ ದೊರಕುವಂತಾಗಬೇಕು. ಅದಕ್ಕೆ ನ್ಯಾಯ ಕೊಡುವ ಸಂಸ್ಥೆಗಳು ಜಂಡರ್ ಸೂಕ್ಷ್ಮಗೊಂಡಿರಬೇಕು. ವಿಶೇಷವಾಗಿ ಕೌಟುಂಬಿಕ ಹಿಂಸೆ ಮತ್ತು ವೈಯಕ್ತಿಕ ಕಿರುಕುಳದ ಪ್ರಕರಣಗಳಲ್ಲಿ ಅತಿ ವೇಗದಲ್ಲಿ ನ್ಯಾಯ ತೀರ್ಪು ಹೊರಬರುವಂತಾಗಬೇಕು. ಇದರ ಜೊತೆಗೆ ಮಹಿಳಾ ಹಕ್ಕುಗಳನ್ನು/ಆಸಕ್ತಿಗಳನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಕಾರ್ಮಿಕ ಸಂಘಗಳನ್ನು ಜಂಡರ್ ಸೂಕ್ಷ್ಮಗೊಳಿಸುವ ಅವಶ್ಯಕತೆ ತುಂಬಾ ಇದೆ.

೭.೨.೫. ಜಂಡರ್ ಕಾಳಜಿ ಅಳವಡಿಸುವುದನ್ನು ಅತ್ಯಂತ ಪರಿಣಾಮಕಾರಿ ವಿಧಾನವನ್ನಾಗಿಸಿದರೆ ಅದು ವಿವಿಧ ಹಂತಗಳಲ್ಲಿ ಹೆಚ್ಚಿನ ಮಹಿಳೆಯರನ್ನು ತಲುಪಲು ಮುನ್ನುಡಿ ಬರೆದಂತಾಗುತ್ತದೆ. ಇದು ಅಧಿಕಾರ ಹಂಚಿಕೆಯಲ್ಲಿ ಮತ್ತು ನಿರ್ಧಾರ ಕೈಗೊಳ್ಳುವಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ. ಮಹಿಳೆಯರಿಗೆ ತರಬೇತಿ ಸೌಲಭ್ಯ ಮತ್ತು ಬೆಂಬಲ ಸೇವೆಗಳನ್ನು ಒದಗಿಸಲು ಪ್ರಯತ್ನ ಮಾಡಬೇಕು. ಆಗ ಮಹಿಳೆಯರು ಪುರುಷರೊಂದಿಗೆ ಸ್ಪರ್ಧಿಸಿ ವಿವಿಧ ಸಂಸ್ಥೆಗಳಲ್ಲಿ ಪ್ರವೇಶ ಪಡೆದು ಮೇಲ್ಮುಖವಾಗಿ ಚಲಿಸಲು ಸಾಧ್ಯವಾಗುತ್ತದೆ.

೭.೨.೬. ಮಹಿಳಾ ಪೋಲೀಸ್ ಠಾಣೆ, ಎಲ್ಲಾ ಪೋಲೀಸ್ ಠಾಣೆಗಳಲ್ಲಿ ಮಹಿಳಾ ಸಹಾಯ ಕೇಂದ್ರ, ಒಟ್ಟು ಪೋಲೀಸ್ ಸಿಬ್ಬಂದಿಯಲ್ಲಿ ಶೇ.೩೦ ರಷ್ಟು ಮಹಿಳೆಯರನ್ನು ನೇಮಕ ಮಾಡುವುದು, ಮೇಲ್ಮಟ್ಟ ಮತ್ತು ಕೆಳಹಂತದ ನ್ಯಾಯಾಲಯಗಳಲ್ಲಿ

ಮಹಿಳಾ ನ್ಯಾಯಾಧೀಶರ ನೇಮಕ, ಸಾರ್ವಜನಿಕ ಸಾರಿಗೆಯಲ್ಲಿ ಮಹಿಳಾ ಚಾಲಕರನ್ನು ನೇಮಕ ಮಾಡುವುದು ಮುಂತಾದ ಮಹಿಳಾಪರ ಕಾರ್ಯಗಳ ಮೂಲಕ ಇಡೀ ಸಾರ್ವಜನಿಕ ವಲಯವನ್ನು ಜಂಡರೀಕರಿಸುವ ಅವಶ್ಯಕವಿದೆ.

## ೭.೩. ಶಾಸನ ಮತ್ತು ಅನುಷ್ಠಾನ

೭.೩.೧. ಜಂಡರ್ ಸಮಾನತೆಯನ್ನು ಸಾಕಾರಗೊಳಿಸಲು ಎಲ್ಲಾ ರಾಜ್ಯ ಶಾಸನಗಳನ್ನು ಸಮೀಕ್ಷೆ ಮಾಡಬೇಕು. ಅವಶ್ಯಕತೆಯುಂಟಾದಾಗಲೆಲ್ಲ ಈ ಶಾಸನಗಳನ್ನು ಸಮೀಕ್ಷಿಸಿ, ತಿದ್ದುಪಡಿ ಮಾಡಿ ಸುಧಾರಿಸಬೇಕು. ಈ ಎಲ್ಲಾ ಕಾರ್ಯಗಳನ್ನು ನಾಗರಿಕ ಸಮಾಜ, ರಾಜ್ಯ ಮಹಿಳಾ ಆಯೋಗ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಸಂಬಂಧಪಟ್ಟ ಸ್ಟೇಕ್‌ಹೋಲ್ಡರ್ಸ್ ಗಳೊಂದಿಗೆ ಕೈಗೊಳ್ಳಬೇಕು.

೭.೩.೨. ವಕೀಲರು, ಪಬ್ಲಿಕ್ ಪ್ರಾಸಿಕ್ಯೂಟರ್, ಪೋಲೀಸ್ ಮತ್ತು ನ್ಯಾಯಾಂಗ ವ್ಯವಸ್ಥೆಯನ್ನು ನಿರಂತರವಾಗಿ ಹಾಗೂ ಪರಿಣಾಮಕರಿಯಾಗಿ ತರಬೇತುಗೊಳಿಸುವುದರ ಮೂಲಕ ಕೇಂದ್ರ ಮತ್ತು ರಾಜ್ಯ ಶಾಸನಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಅಗತ್ಯ ಉಂಟಾದರೆ ಶಾಸನಗಳಿಗೆ ಸೂಕ್ತ ತಿದ್ದುಪಡಿ ತರಬೇಕು.

೭.೩.೩. ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ಕೊಡುವವರಿಗೆ, ಶಿಕ್ಷೆಯಾಗುವಂತೆ, ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿ ದುಡಿಯುವ ಮಹಿಳೆಯರಿಗೆ ರಕ್ಷಣೆ, ಸಮಾನ ವೇತನ ಕಾಯಿದೆ ಹಾಗೂ ಕನಿಷ್ಠ ವೇತನ ಕಾಯಿದೆಗಳು ಕಟ್ಟುನಿಟ್ಟಾಗಿ ಜಾರಿಗೊಳ್ಳುವಂತೆ ಕ್ರಮ ಕೈಗೊಳ್ಳಬೇಕು. ವಿಸ್ತಾರವಾದ ಪರಿಕ್ರಮವನ್ನು ಬಳಸಿಕೊಂಡು ಕರ್ನಾಟಕದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ನ್ಯಾಯಮೂರ್ತಿ ವರ್ಮ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕು.

೭.೩.೪. ಪೋಲೀಸ್ ಠಾಣೆಗಳಲ್ಲಿ ಮಹಿಳಾ ಘಟಕ, ಮಹಿಳಾ ಪೋಲೀಸ್ ಠಾಣೆ, ಕೌಟುಂಬಿಕ ನ್ಯಾಯಾಲಯ, ಮಹಿಳಾ ನ್ಯಾಯಾಲಯ, ಆಪ್ತ ಸಮಾಲೋಚನಾ ಕೇಂದ್ರ, ಉಚಿತ ಕಾನೂನು ಸಲಹಾ ಕೇಂದ್ರ ಮತ್ತು ನ್ಯಾಯ ಪಂಚಾಯಿತಿಗಳನ್ನು ಬಲಗೊಳಿಸಿ ಮಹಿಳೆಯರ ಮೇಲೆ ನಡೆಯುವ ಹಿಂಸೆಗಳನ್ನು ತಡೆಗಟ್ಟಬಹುದು.

೭.೩.೬. ಲೈಂಗಿಕ ಆಕ್ರಮಣ (ಅತ್ಯಾಚಾರ)ಕ್ಕೆ ಸಂಬಂಧಪಟ್ಟಂತೆ ಅಪರಾಧಿಗಳಿಗೆ ಶಿಕ್ಷೆಯಾಗುವ ಪ್ರಮಾಣವನ್ನು ಹೆಚ್ಚಿಸಲು ಪ್ರಮಾಣೀಕೃತ ತನಿಖಾ ಕಾರ್ಯವಿಧಾನವನ್ನು ಅನುಸರಿಸುವ ಅವಶ್ಯಕತೆಯಿದೆ.

೭.೩.೭. ವಿಶೇಷವಾಗಿ ರೂಪಿಸಿದ ಕಾನೂನು ಸಾಕ್ಷರತಾ ಕಾರ್ಯಕ್ರಮ ಮತ್ತು ಹಕ್ಕುಗಳ ಮಾಹಿತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಕಾನೂನು ಹಕ್ಕುಗಳು, ಮಾನವ ಹಕ್ಕುಗಳು ಮತ್ತು ಮಹಿಳೆಯರ ಇತ'ರ ಹಕ್ಕುಗಳ ಕುರಿತ ಮಾಹಿತಿಯನ್ನು ವ್ಯಾಪಕವಾಗಿ ಪ್ರಚಾರ ಮಾಡಬೇಕು.

೭.೩.೮. ಕಾಯಿದೆಗಳನ್ನು ಜಾರಿಗೊಳಿಸುವ ವ್ಯವಸ್ಥೆಯ ದಕ್ಷತೆ, ಗುಣಮಟ್ಟ ಹಾಗೂ ಬದಲಾವಣೆ ತರಲು ಅವಕಾಶವಿದೆಯೇ ಎನ್ನುವುದನ್ನು ಲೆಕ್ಕಪರಿಶೋಧನೆಯ ಆಧಾರದ ಮೇಲೆ ಸಾಮಾಜಿಕ ಪರಿಶೋಧನೆಗೆ ಒಳಪಡಿಸುವ ಅವಶ್ಯಕತೆಯಿದೆ.

೭.೩.೯. ವಿಶೇಷವಾಗಿ ರಾಜ್ಯ ನಿರ್ದಿಷ್ಟವಾದ ಶಾಸನಗಳನ್ನು ನಿಯಮಿತವಾಗಿ ಸಮೀಕ್ಷೆ ಮಾಡುತ್ತಿರಬೇಕು, ತುಂಬಾ ಅಗತ್ಯ ಉಂಟಾದರೆ ತಿದ್ದುಪಡಿ ಮಾಡಬೇಕು. ಕಾಯಿದೆಯು ಪರಿಣಾಮಕಾರಿಗಿಲ್ಲ ಅದು ಕೇಂದ್ರ ಸರ್ಕಾರದ ಪರಿಧಿಯೊಳಗೆ ಬರುವುದಿದ್ದರೆ ಅದರಲ್ಲಿ ಬದಲಾವಣೆ ತರಲು ಶಾಸನಗಳ ಕಾನೂನು ಸಮಿತಿಗೆ ಸಲಹೆಗಳನ್ನು ನೀಡಬಹುದು.

## ೭.೪. ಜಂಡರ್ ವಿಂಗಡಣಾ ದತ್ತಾಂಶವನ್ನು ಸೃಷ್ಟಿಸುವುದು.

೭.೪.೧. ಪ್ರಾಥಮಿಕ ದತ್ತಾಂಶಗಳನ್ನು ಸಂಗ್ರಹಿಸುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಸ್ಥೆಗಳು, ಸಂಶೋಧನಾ ಮತ್ತು ಶೈಕ್ಷಣಿಕ ಸಂಘಗಳು ಜಂಡರ್ ವಿಂಗಡಣಾ ದತ್ತಾಂಶವನ್ನು ಸಂಗ್ರಹಿಸುವ ನಿರ್ವಹಿಸುವ ಮತ್ತು ವಿಶ್ಲೇಷಣೆ ಮಾಡಬೇಕು.ಎಲ್ಲಾ ವಲಯಗಳು ಜಂಡರ್ ವಿಂಗಡಣಾ ದತ್ತಾಂಶಗಳ ಸಂಗ್ರಹ ಮಾಡಿ ಮತ್ತು ಹರಡುವುದನ್ನು ಕಡ್ಡಾಯಗೊಳಿಸಬೇಕು.

೭.೪.೨. ಸರ್ಕಾರದ ಪ್ರತಿ ಸಚಿವಾಲಯ, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು ಜಂಡರ್ ವಿಂಗಡಣಾ ದತ್ತಾಂಶವನ್ನು ಹೊಂದಿರಬೇಕು.

೭.೩.೪. ಮಹಿಳೆಯರ ಸ್ಥಾನವನ್ನು ಬಿಂಬಿಸುವ ಪ್ರಮುಖ ಕ್ಷೇತ್ರಗಳಲ್ಲಿ ದತ್ತಾಂಶ ಮತ್ತು ಮಾಹಿತಿಯ ಕೊರತೆಯಿದ್ದರೆ ಅದನ್ನು ತುಂಬಿಸುವ ಪ್ರಯತ್ನವನ್ನು ಈ ಸಂಸ್ಥೆಗಳು ಅತಿ ಶೀಘ್ರದಲ್ಲಿ ಮಾಡಬೇಕು. ಎಲ್ಲಾ ಇಲಾಖೆ/ಕಾರ್ಪೊರೇಷನ್/ಬ್ಯಾಂಕ್ ಮತ್ತು ಹಣಕಾಸಿನ ಸಂಸ್ಥೆ ಇತ್ಯಾದಿಗಳು ತಮ್ಮ ಕಾರ್ಯಕ್ರಮ ಮತ್ತು ಅವುಗಳ ಉಪಯೋಗದ ಬಗ್ಗೆ ಜಂಡರ್ ವಿಂಗಡಣೆಯನ್ನು ಆಧರಿಸಿ ದತ್ತಾಂಶವನ್ನು ಸಂಗ್ರಹಿಸಿಡಬೇಕು, ನಿರ್ವಹಿಸಬೇಕು/ಪ್ರಕಟಿಸಬೇಕು ಮತ್ತು ವಿಶ್ಲೇಷಿಸಬೇಕು. ಇದರಿಂದ ಅರ್ಥಪೂರ್ಣ ಯೋಜನೆ ತಯಾರಿಸಲು ಹಾಗೂ ಕಾರ್ಯನೀತಿಗಳ ಮೌಲ್ಯಮಾಪನದ ಸಹಾಯವಾಗುತ್ತದೆ.

## ೭.೫. ಜಂಡರ್ ಆಯವ್ಯಯ ಪತ್ರ

ಜಂಡರ್ ಆಯವ್ಯಯ ಪತ್ರವು ಜಂಡರ್‌ನ್ನು ಮುಖ್ಯವಾಹಿನಿಯನ್ನಾಗಿಸುವ ಗುರಿಯನ್ನಿಟ್ಟುಕೊಂಡು ಪ್ರತಿ ಹಂತದಲ್ಲೂ ಮಹಿಳೆಯರನ್ನು ನಿಜವಾಗಿಯೂ ಸಶಕ್ತಗೊಳಿಸಲು ಪ್ರಯತ್ನಿಸುತ್ತದೆ. ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ನಾಗರೀಕ ವಲಯಗಳಲ್ಲೂ ಅವರು ತಮ್ಮ ಶಕ್ತಿ ಸಾಮರ್ಥ್ಯವನ್ನು ಸಿದ್ಧಿಸಿಕೊಳ್ಳಲು ಶಕ್ತರನ್ನಾಗಿಸುತ್ತದೆ. ಸರ್ಕಾರದ ಎಲ್ಲಾ ಕ್ಷೇತ್ರಗಳಲ್ಲೂ ಜಂಡರ್ ಕಾಳಜಿಯನ್ನು ಮುಖ್ಯವಾಹಿನಿಯಾಗಿಸಲು ಕೇಂದ್ರ ಮತ್ತು ರಾಜ್ಯಗಳ ಸಚಿವಾಲಯ ಮತ್ತು ಇಲಾಖೆಗಳಲ್ಲಿ ಕಾರ್ಯಕಾರಿ ಜಂಡರ್ ಆಯವ್ಯಯ ಕೋಶಗಳನ್ನು ಸ್ಥಾಪಿಸಬೇಕು. ಇದನ್ನು ಅತಿ ಮಹತ್ವದ್ದು ಮತ್ತು ಅವಶ್ಯಕವಾದುದು ಎಂದು ಪರಿಗಣಿಸಿ ಆದ್ಯತೆ ಮೇರೆಗೆ ಕೈಗೆತ್ತಿಕೊಳ್ಳಬೇಕು.

೭.೫.೨. ಪ್ರಮುಖ ದೊಡ್ಡ ಆರ್ಥಿಕ ನೀತಿಗಳನ್ನು ಕೂಡ ಜಂಡರೀಕರಿಸಬೇಕಿದೆ. (ಆರ್ಥಿಕ ಮತ್ತು ಹಣಕಾಸು ಕಾರ್ಯನೀತಿ, ಕೃಷಿ ಕಾರ್ಯನೀತಿ, ಬಡತನ ನಿರ್ಮೂಲನ ಯೋಜನೆಗಳು, ವಲಸೆ ಕಾರ್ಯನೀತಿ, ಸಾರ್ವಜನಿಕ ವಿತರಣೆ, ಮಾಧ್ಯಮ, ವಿಪತ್ತು ನಿರ್ವಹಣೆ, ಸಂಶೋಧನೆ ಮತ್ತು ಅಭಿವೃದ್ಧಿ).

೭.೫.೩. ಕೇವಲ ಖರ್ಚುವೆಚ್ಚವನ್ನು ಮಾತ್ರ ಪರಿಗಣಿಸುವ ಆಯವ್ಯಯವು ಅತ್ಯಂತ ವಿಸ್ತಾರವಾದ ಮತ್ತು ಎಲ್ಲಾ ವಿಷಯಗಳನ್ನು ಒಳಗೊಳ್ಳುವಂತಹ ಪತ್ರವಾಗಬೇಕು. ಜಂಡರ್ ಆಯವ್ಯಯವೆಂದರೆ ಕೇವಲ ಮಹಿಳಾ ಸಂಬಂಧಿ ಉದ್ದೇಶಗಳಿಗಾಗಿ ಖರ್ಚು ಮಾಡುವ ನಿರ್ದಿಷ್ಟ ಗುರಿಯನ್ನು ಇಟ್ಟುಕೊಳ್ಳುವ ಪತ್ರವನ್ನಾಗಿ ನೋಡಬಾರದು.

೭.೫.೪. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಆಯವ್ಯಯದಲ್ಲಿ ಅಸಮಪ್ರಮಾಣ ಹಂಚಿಕೆಯಿರುವುದರಿಂದ ಎರಡು ಪ್ರತ್ಯೇಕ, ಮಹಿಳೆಯರಿಗಾಗಿ ಒಂದು ಮತ್ತು ಮಕ್ಕಳಿಗಾಗಿ ಇನ್ನೊಂದು, ಭಿನ್ನ ಆಯವ್ಯಯ ಪತ್ರವನ್ನು ಹೊಂದಿರುವ, ಉತ್ತಮ ಸಹಯೋಗದ ಸಚಿವಾಲಯಗಳನ್ನು ಸ್ಥಾಪಿಸಬೇಕು.

೭.೫.೫. ತಳಮಟ್ಟದಿಂದಲೇ ವಿವಿಧ ಯಂತ್ರರಚನೆಗಳ ಮೂಲಕ ಜಂಡರ್ ವಿಂಗಡಣೆಗೊಂಡ ದತ್ತಾಂಶವನ್ನು ಸುಸ್ಥಿರವಾಗಿ ವೃದ್ಧಿಸಬೇಕು, ಸಂಗ್ರಹಿಸಬೇಕು ಮತ್ತು ಒಗ್ಗೂಡಿಸಬೇಕು. ಇದು ಎಲ್ಲಾ ಕಾರ್ಯಕ್ರಮ ಮತ್ತು ಯೋಜನೆಗಳ ಅವಿಭಾಜ್ಯ ಅಂಗವಾಗಬೇಕು. ಮುಂದೆ ಇದು ದತ್ತಾಂಶಗಳ ಅಂತರವನ್ನು ಗುರುತಿಸಲು ಮತ್ತು ಜಂಡರ್ ವಿಂಗಡಣೆಗೊಂಡ ದತ್ತಾಂಶವನ್ನು ಕಟ್ಟಲು ಬೇಕಾದ ಕ್ರಮಗಳನ್ನು ವಿನ್ಯಾಸಗೊಳಿಸಲು ಸಹಾಯ ಮಾಡುತ್ತದೆ. ಅಂಕಿ ಅಂಶಗಳಲ್ಲಿ ಮತ್ತು

ಸೂಚಿಗಳಲ್ಲಿ ಮಹಿಳೆಯರು ಕಾಣಿಸಿಕೊಳ್ಳುವಂತೆ ಮಾಡಲು ಸರ್ಕಾರದ ಎಲ್ಲಾ ಇಲಾಖೆಗಳನ್ನು ಸೂಕ್ಷ್ಮಗೊಳಿಸಬೇಕು. ಅದಕ್ಕಾಗಿ ಪರಿಕಲ್ಪನಾತ್ಮಕ ಮತ್ತು ತಾಂತ್ರಿಕ ತರಬೇತಿ ಕಾರ್ಯಗಾರಗಳನ್ನು ಏರ್ಪಡಿಸಬೇಕು.

೭.೫.೬. ಕಾರ್ಯನೀತಿ/ಮಧ್ಯ ಪ್ರವೇಶಿಕೆಯ ಜಂಡರ್ ಪರಿಣಾಮಗಳನ್ನು ಜಂಡರ್ ತಟಸ್ಥವೆಂದು ಗುರುತಿಸಲಾಗುತ್ತದೆ. ಜಂಡರ್ ಅಸಮತೋಲನವನ್ನು ಸರಿಪಡಿಸಲು ಮಹಿಳಾ ಪರವಾದ ಕಾರ್ಯಗಳನ್ನು ಕೈಗೊಳ್ಳಬೇಕಾಗುತ್ತದೆ. ಅದರ ಅವಶ್ಯಕತೆಯನ್ನು ಗುರುತಿಸಲು ಸೂಕ್ಷ್ಮ ಮಟ್ಟದಲ್ಲಿ ಅಧ್ಯಯನಗಳನ್ನು ಕೈಗೊಳ್ಳಬೇಕು.

೭.೫.೭. ಜಂಡರ್ ಅಂತರದ ಪ್ರಾದೇಶಿಕ ನಕ್ಷೆ, ಸಂಪನ್ಮೂಲ ಅಂತರ, ಸಾರ್ವಜನಿಕ ವೆಚ್ಚದ, ಕಾರ್ಯಕ್ರಮ ಹಾಗೂ ಕಾರ್ಯನೀತಿಗಳ ಜಂಡರ್ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಬೇಕು.

೭.೫.೮. ವಲಯ ಹಾಗೂ ಸಂಘಟನೆಗಳ ವಿವಿಧ ಹಂತಗಳ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಗಳಲ್ಲಿ ಮಹಿಳೆಯರು ಎಷ್ಟರ ಮಟ್ಟಿಗೆ ತೊಡಗಿದ್ದಾರೆ ಎಂಬುದನ್ನು ಬೆಳಕಿಗೆ ತರಬೇಕು. ಅಲ್ಲಿರುವ ಜಂಡರ್ ಪಕ್ಷಪಾತ ಮತ್ತು ಅಸಮತೋಲನವನ್ನು ಸರಿಪಡಿಸ ಪ್ರಯತ್ನಿಸಬೇಕು.

೭.೫.೯. ಒಂದು ಗುಣಮಟ್ಟದ ಆಯವ್ಯಯ ಪ್ರಕ್ರಿಯೆಯಲ್ಲಿ ಜಂಡರ್ ಆಯವ್ಯಯವನ್ನು ಅಳವಡಿಸಿಕೊಳ್ಳಬೇಕು ಮತ್ತು ಅದನ್ನು ಸಾಂಸ್ಥೀಕರಣಗೊಳಿಸಬೇಕು. ಆದರೆ ಗುಣಮಟ್ಟದ ಆಯವ್ಯಯ ಪ್ರಕ್ರಿಯೆಗೆ ಜಂಡರ್ ಆಯವ್ಯಯವನ್ನು ಕೇವಲ ಹೆಚ್ಚುವರಿಯಾಗಿ ಸೇರಿಸುವ ಅಂಶವನ್ನಾಗಿ ನೋಡಬಾರದು. ಕಚ್ಚಾ ಸಲಕರಣೆ ಮತ್ತು ದತ್ತಾಂಶವಾದರೂ ಸರಿಯೇ ಸ್ಪಷ್ಟವಾದ ಲಾಭವಿರುವ, ಮಾಪನ ಮಾಡುವಂತಹ ನಿರ್ದಿಷ್ಟ ಮತ್ತು ಗುರುತಿಸಲಾಗುವಂತಹ ಗುರಿಗಳನ್ನು ಇಟ್ಟುಕೊಳ್ಳಬೇಕು (ಉದಾಹರಣೆಗೆ, ಶಿಕ್ಷಣದ ಸಾಧನೆಯಲ್ಲಿರುವ ಅಸಮಾನತೆಯನ್ನು ಕಡಿಮೆ ಮಾಡುವ)

೭.೫.೧೦. ಖಾಸಗಿ ವಲಯದಲ್ಲೂ ಜಂಡರ್ ಆಯವ್ಯಯ ತತ್ವವನ್ನು ಅಳವಡಿಸಿಕೊಳ್ಳಬೇಕಾದ ಕಾಲ ಬಂದಿದೆ. ಕಾರ್ಪೊರೇಟ್ ವಲಯದಲ್ಲಿ ಮೂರು ಪ್ರಕಾರದ ಜವಾಬ್ದಾರಿಗಳಿವೆ. ಒಂದು, ಮಹಿಳೆಯರಿಗೆ ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳನ್ನು ಬೆಳೆಸುವುದು, ಎಲ್ಲಾ ಹಂತಗಳಲ್ಲೂ ಕಾರ್ಯನಿರ್ವಹಿಸುವಂತೆ ಮಾಡಬೇಕು, ಸಮಾನ ವೇತನ ಮತ್ತು ಬಡ್ತಿ ಅವಕಾಶಗಳನ್ನು ನೀಡಬೇಕು. ಎರಡು, ಕೌಶಲ್ಯ ಬೆಳೆಸಿಕೊಳ್ಳಲು ತರಬೇತಿ, ವೃತ್ತಿಪರ ಪದವಿ ಇತ್ಯಾದಿಗಳನ್ನು ಪಡೆಯಲು ಬೆಂಬಲ ನೀಡಬೇಕು .ಮೂರು, ಹೆರಿಗೆ ಭತ್ಯೆ, ವೃತ್ತಿಕಂಟಕ ಮತ್ತು ಲೈಂಗಿಕ ಕಿರುಕುಳದಿಂದ ರಕ್ಷಣೆ, ಶಿಶುಪಾಲನ ಕೇಂದ್ರ, ಶೌಚಾಲಯ, ಆರೋಗ್ಯ ಮತ್ತು ಶುಚಿತ್ವದ ಸೌಕರ್ಯಗಳನ್ನು ಒದಗಿಸುವುದು. ಮಹಿಳೆಯರು ಸಂಘಟನೆಗಳನ್ನು ಕಟ್ಟಿಕೊಳ್ಳಲು ಮತ್ತು ಕಾನೂನು ರಕ್ಷಣೆ ಪಡೆಯಲು ಅವಕಾಶ ಮಾಡಿಕೊಡುವುದು. ಕಾರ್ಪೊರೇಟ್‌ಗಳು ಸಾಮಾಜಿಕ ಜವಾಬ್ದಾರಿಯನ್ನು ಪೂರೈಸುವುದು.

## ೭.೬. ಸಾಂಸ್ಥಿಕ ಯಂತ್ರರಚನೆ:-

ರಾಜ್ಯದಲ್ಲಿ ಮಹಿಳಾ ಸಶಕ್ತೀಕರಣವನ್ನು ಪ್ರೋತ್ಸಾಹಿಸಲು ರಚಿಸಿಕೊಡಿರುವ ಸಾಂಸ್ಥಿಕ ಯಂತ್ರರಚನೆಯನ್ನು ಬಲಪಡಿಸಬೇಕಿದೆ. ಸೂಕ್ತ ಹಾಗು ಸಂಬಂಧಪಟ್ಟಲೆಲ್ಲ ಮಧ್ಯ ಪ್ರವೇಶ ಮಾಡಿ ಸಾಕಷ್ಟು ಸಂಪನ್ಮೂಲ, ತರಬೇತಿ ಮತ್ತು ವಕೀಲಿ ಕೌಶಲ್ಯಗಳನ್ನು ಒದಗಿಸಬೇಕು. ಇದು ದೊಡ್ಡ ಕಾರ್ಯನೀತಿ, ಶಾಸನ ಹಾಗು ಕಾರ್ಯಕ್ರಮಗಳ ಮೇಲೆ ಪ್ರಭಾವ ಬೀರಿ ಪ್ರತೀ ಕ್ಷೇತ್ರದಲ್ಲೂ ಮಹಿಳೆಯರನ್ನು ಸಶಕ್ತಗೊಳಿಸಲು ಸಹಾಯಮಾಡುತ್ತದೆ. ಮಹಿಳಾ ಸಂಬಂಧಿ ಕಾರ್ಯಕ್ರಮಗಳು ಮತ್ತು ಇತರ ಎಲ್ಲಾ ಕಾರ್ಯಕ್ರಮಗಳ ಜಂಡರ್ ಪರಿಣಾಮಗಳನ್ನು ನಿಯಮಿತವಾಗಿ, ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಲು ಮತ್ತು ಮೌಲ್ಯಮಾಪನ ಮಾಡಲು ಖಚಿತ ಮಾಹಿತಿ ವ್ಯವಸ್ಥೆಯನ್ನು ಸ್ಥಾಪಿಸಲಗುವುದು.

೭.೬.೨ 'ರಾಜ್ಯ ಜಂಡರ್ ಪರಿಷತ್'ಅನ್ನು ರಚಿಸಿ ಕಾರ್ಯನೀತಿಗಳ ಕಾರ್ಯಾಚರಣೆಯನ್ನು ಕ್ರಮಬದ್ದವಾಗಿ ಪರಿಶೀಲನೆ ಮಾಡಲಾಗುವುದು. ಈ ರಾಜ್ಯ ಜಂಡರ್ ಪರಿಷತ್‌ಗೆ ಮಾನ್ಯ ಮುಖ್ಯ ಮಂತ್ರಿಗಳು ಅಧ್ಯಕ್ಷರಾಗಿದ್ದು ಸಂಬಂದಪಟ್ಟ ಇಲಾಖೆಗಳ ಅಧಿಕಾರಿಗಳು, ರಾಜ್ಯ ಮಹಿಳಾ ಆಯೋಗ, ಸಮಾಜ ಕಲ್ಯಾಣ ಮಂಡಳಿ, ಸರ್ಕಾರೇತರ ಸಂಸ್ಥೆಗಳ

ಪ್ರತಿನಿಧಿಗಳು, ಮಹಿಳಾ ಸಂಘಟನೆಗಳು, ಕಾರ್ಪೊರೇಟ್ ವಲಯ, ಹಣಕಾಸಿನ ಸಂಸ್ಥೆ, ಶೈಕ್ಷಣೀಕ ತಜ್ಞರು, ಪರಿಣಿತರು ಮತ್ತು ಸಾಮಾಜಿಕ ಕಾರ್ಯಕರ್ತರನ್ನು ಸದಸ್ಯರನ್ನಾಗಿ ನೇಮಿಸಿಕೊಳ್ಳಬೇಕು. ಈ ಪರಿಷತ್ ವರ್ಷಕ್ಕೆ ಎರಡು ಸಲ ಕಾರ್ಯನೀತಿಗಳ ಅನುಷ್ಠಾನ ಪ್ರಗತಿಯನ್ನು ಸಮೀಕ್ಷೆ ಮಾಡುತ್ತದೆ. ರಾಜ್ಯ ಜಂಡರ್ ಪರಿಷತ್ ಅಗ್ರ ಸಂಸ್ಥೆಯಾಗಿ ಕೆಲಸ ಮಾಡುತ್ತದೆ. ಪೂರ್ವ ನಿಯಾಮಕ ಕಾರ್ಯನೀತಿಯನ್ನು ಹಮ್ಮಿಕೊಳ್ಳಲು ಸಲಹೆ ನೀಡುತ್ತದೆ, ತಿದ್ದುಪಡಿ ಕ್ರಮಗಳನ್ನು ಕೈಗೊಳ್ಳುತ್ತದೆ. ಅಲ್ಲದೆ ಯೋಜನೆಗಳ ಜಂಡರ್ ಘಟಕಕ್ಕೆ ಸಂಬಂಧಪಟ್ಟಂತೆ ಮೇಲ್ವಿಚಾರಣೆ ಮಾಡುತ್ತದೆ.

೭.೬.೩ ರಾಜ್ಯ ಮಹಿಳಾ ಆಯೋಗವನ್ನು ಬಲಪಡಿಸಿ ಅದರ ಪಾತ್ರವನ್ನು ಹೆಚ್ಚಿಸಬೇಕಾಗಿದೆ. ಮಾಹಿತಿ ಸಂಗ್ರಹಿಸಲು, ಹರಡಲು, ಸಂಶೋಧನಾ ಕಾರ್ಯವನ್ನು ಕೈಗೊಳ್ಳಲು, ಸಮೀಕ್ಷೆ ನಡೆಸಲು, ತರಬೇತಿ ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೋಳ್ಳಲು ಈಗಾಗಲೆ 'ಮಹಿಳಾ ರಾಜ್ಯ ಸಂಪನ್ಮೂಲ ಕೇಂದ್ರ'ಗಳನ್ನು ಸ್ಥಾಪಿಸಲಾಗಿದೆ. ಇವುಗಳನ್ನು ಮತ್ತಷ್ಟು ಬಲಪಡಿಸಬೇಕಿದೆ. ಈ ಕೇಂದ್ರಗಳನ್ನು ಮಹಿಳಾ ಅಧ್ಯಯನ ಕೇಂದ್ರ ಮತ್ತು ಇತರ ಸಂಶೋಧನಾ, ಶೈಕ್ಷಣಿಕ ಸಂಸ್ಥೆಗಳೊಂದಿಗೆ ಸಂಪರ್ಕಿಸಿ ಮಹಿತಿ ಸಂಪರ್ಕಜಾಲವನ್ನು ಕಟ್ಟಬೇಕು. ಮಹಿಳೆಯರ ಮೇಲೆ ಪ್ರಭಾವ ಬೀರುವ ಅಭಿವೃದ್ಧಿ ಕಾರ್ಯಕ್ರಮಗಳ ಮೌಲ್ಯಮಾಪನವನ್ನು ಸಂಶೋಧನಾ ಸಂಸ್ಥೆ/ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಕೈಗೊಳ್ಳಬೇಕು.

೭.೬.೪. ಜಿಲ್ಲಾ ಮಟ್ಟದಲ್ಲಿ ಸಂಸ್ಥೆಗಳನ್ನು ಬಲಪಡಿಸುವ ಜೊತೆಗೆ ತಳ ಮಟ್ಟದಲ್ಲಿ ಅಂದರೆ ಹಾಡಿ/ಅಂಗನವಾಡಿ/ಗ್ರಾಮ/ಪಟ್ಟಣಗಳಲ್ಲಿ ಮಹಿಳೆಯರನ್ನು ಸ್ವ ಸಹಾಯ ಗುಂಪಿನಡಿ ಸಂಘಸುವುದಕ್ಕೆ ಸಕಾರ ಸಹಾಯ ಮಾಡಬೇಕು. ಈ ಮಹಿಳಾ ಗುಂಪುಗಳು ಸೊಸೈಟಿ ಕಾಯಿದೆಯಡಿಯಲ್ಲಿ ನೊಂದಾಯಿಸಿಕೊಳ್ಳಬೇಕು. ನಂತರ ಪಂಚಾಯಿತಿ/ನಗರಸಭೆ ಮಟ್ಟಕ್ಕೆ ಏರುವಂತಾಗಬೇಕು. ಸೊಸೈಟಿಗಳು ಸರ್ಕಾರದ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೊಳಿಸುದರಲ್ಲಿ ತೊಡಗಬೇಕು. ಅದಕ್ಕೆ ಬ್ಯಾಂಕ್ ಮತ್ತು ಹಣಕಾಸಿನ ಸಂಸ್ಥೆಗಳು ಸೇರಿದಂತೆ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಕೊಡುವ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕು. ಪಂಚಾಯತ್/ನಗರಸಭೆಗಳೊಂದಿಗೆ ಹತ್ತಿರದ ಸಂಪರ್ಕವನ್ನು ಸ್ಥಾಪಿಸಿಕೊಂಡು ಕೆಲಸಮಾಡಬೆಕು.

೭.೬.೫. ವಿವಿಧ ವಯೋ ಗುಂಪಿನ ಮಹಿಳೆಯರಿಗೆ ಸಾಂಸ್ಥಿಕ ಸೇವೆಗಳ ಲಭ್ಯತೆಯನ್ನು ವಿಸ್ತರಿಸಬೇಕು. ಸಕಾರ ಎಲ್ಲಾ ಜಿಲ್ಲೆಗಳಲ್ಲಿ ಈ ರೀತಿಯ ಸೇವೆಗಳನ್ನು ಒದಗಿಸಿಕೊಡಬೇಕು. ಈ ಸೌಲಭ್ಯಗಳಿಲ್ಲದ ಜಿಲ್ಲೆಗಳಲ್ಲಿ ಬೇಡಿಕೆ ಬಂದರೆ ಹೊಸ ಆಶ್ರಯ ತಾಣಗಳನ್ನು ತೆರೆಯಬೇಕು. ಹೆಣ್ಣುಮಕ್ಕಳನ್ನು ದತ್ತು ತೆಗೆದುಕೊಳ್ಳಲು ಬೆಂಬಲ ಕ್ರಮಗಳನ್ನು ಕೈಗೊಳ್ಳಬೇಕು. ಅದಕ್ಕೆ ಬೇಕಾದ ಸೂಕ್ತ ಮಾರ್ಗಸೂಚಿಯನ್ನು ರೂಪಿಸಬೇಕು. ಕಾನೂನು ಬಾಹಿರ ದತ್ತು ಸ್ವೀಕಾರವನ್ನು ನಿಲ್ಲಿಸಲು ಕ್ರಮ ಕೈಗೊಳ್ಳಬೇಕು.

೭.೬.೬ ಪ್ರಸ್ತುತ ವಿವಿಧ ಇಲಾಖೆಗಳಲ್ಲಿ ಮಹಿಳೆಯರ ಕಲ್ಯಾಣಕ್ಕಾಗಿ ಹಲವಾರು ಬಗೆಯ ಕಾರ್ಯಕ್ರಮಗಳು ಜಾರಿಯಲ್ಲಿವೆ. ಅವುಗಳಿಂದ ಮಹಿಳೆಯರು ನೇರ ಅನುಕೂಲ ಪಡೆಯುತ್ತಿದ್ದಾರೆ. ಆದರೆ ಅಂಚಿಗೆ ತಳ್ಳಲ್ಪಟ್ಟ ಗುಂಪಿನ ಮಹಿಳೆಯರು ತಮ್ಮ ಅಗತ್ಯಕ್ಕೆ ತಕ್ಕಂತೆ ಎಲ್ಲಾ ಇಲಾಖೆಗಳ ಯೋಜನೆಗಳ ಲಾಭವನ್ನು ಪಡೆಯಲಾಗುತ್ತಿಲ್ಲ. ಇದರಿಂದ ಅನೇಕ ಮಹಿಳೆಯರು ಯೋಜನೆಗಳ ಪ್ರಯೋಜನದಿಂದ ವಂಚಿತರಾಗುತಿದ್ದಾರೆ. ಏಕಾಗ್ರಮುಖತೆ ಮತ್ತು ಸೌಕರ್ಯ ಕೇಂದ್ರ/ ಸಹಾಯವಾನಿ/ಸೇವಾ ಕೇಂದ್ರ/ಮಾಹಿತಿ ಕೇಂದ್ರಗಳನ್ನು ಗ್ರಾಮ ಮಟ್ಟದಲ್ಲಿ ಸ್ಥಾಪಿಸಿ ಮಹಿಳೆಯರಲ್ಲಿ ಕಂಡುಬರುವ ಮಾಹಿತಿ ಕೊರತೆಯನ್ನು ನೀಗಿಸಬೇಕು. ಇದಕ್ಕಾಗಿ ಸರ್ಕಾರ ಗ್ರಾಮ ಮಟ್ಟದಲ್ಲಿ ವಿವಿಧ ಇಲಾಖೆಗಳ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕು.

೭.೬.೭. ಅಂಚಿಗೆ ತಳ್ಳಲ್ಪಟ್ಟ ಗುಂಪಿನ ಮಹಿಳೆಯರ ಲಭ್ಯತೆಯನ್ನು ಹೆಚ್ಚಿಸಲು ಸರ್ಕಾರ ಮಹಿಳಾ ಅಭಿವೃದ್ಧಿ ವಿಷಯಗಳಲ್ಲಿ ಕೆಲಸ ಮಾಡುತ್ತಿರುವ ಇಲಾಖೆಗಳ ಮೂಲಕ ಮಹಿಳೆಯರು, ಮಕ್ಕಳು ಮತ್ತು ಜಂಡರ್ ವಿಷಯಗಳ ಕುರಿತು

ವಕೀಲಿ/ಕಾರ್ಯಗಾರ/ವಿಚಾರ ಸಂಕಿರಣ/ಅರಿವು ಮೂಡಿಸುವ ಆಂದೋಲನಗಳನ್ನು ಹಮ್ಮಿಕೊಳ್ಳಬೇಕು. ಇಂತಹ ಕಾರ್ಯಕ್ರಮಗಳನ್ನು ಎಲ್ಲಾ ಹಂತಗಳ ಆಡಳಿತಗಾರರು, ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮ, ಸರ್ಕಾರೇತರ ಸಂಸ್ಥೆ/ಸಮುದಾಯ ಆಧಾರಿತ ಸಂಘಟನೆ ಮತ್ತು ಸಮುದಾಯಗಳನ್ನು ಸೇರಿಸಿಕೊಂಡು ಇಡೀ ರಾಜ್ಯದಲ್ಲಿ ಹಮ್ಮಿಕೊಳ್ಳಬೇಕು.

೭.೬.೮. ಮಹಿಳೆಯರಿಗೆ ಭೂಮಿ ಮತ್ತು ಇತರ ಆಸ್ತಿಗಳ ಮೇಲೆ ಹಕ್ಕಿರಬೇಕು. ಆದರೆ ಭೂಮಿಯ ಜಂಟಿ ಒಡೆತನವು ಏಕೆ ಜಾರಿಗೊಂಡಿಲ್ಲ ಅನ್ನುವುದನ್ನು ಪರೀಕ್ಷಿಸಬೇಕು

೭.೬.೮. ಎಲ್ಲಾ ಇಲಾಖೆಗಳು, ಮಹಿಳೆಯರಿಗೆ ಸಂಬಂಧಿಸಿದ ಯಾವುದೇ ಕಾರ್ಯನೀತಿ/ಯೋಜನೆಗಳನ್ನು ರಚಿಸುವ ಮೊದಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನು ಸಂಪರ್ಕಿಸಬೇಕು. ಮಹಿಳೆಯರಿಗಾಗಿ ಯೋಜನೆಗಳನ್ನು ಜಾರಿಗೊಳಿಸುವ ಸರ್ಕಾರಿ ಇಲಾಖೆಗಳು ಮಹಿಳಾ ಯೋಜನೆಗಳನ್ನು ಕಛೇರಿ ಆವರಣದಲ್ಲಿ ಪ್ರದರ್ಶಿಸಬೇಕು. ಇದರಿಂದ ಮಹಿಳೆಯರಿಗೆ ಯೋಜನೆಗಳ ಬಗ್ಗೆ ಮಾಹಿತಿ ದೊರಕುತ್ತದೆ. ಸಂಬಂಧಪಟ್ಟ ಪ್ರತೀ ಇಲಾಖೆಯು ಪಟ್ಟಿಯನ್ನು ತಯಾರಿಸಿ ಪ್ರತಿ ವರ್ಷ ಅಗತ್ಯ ತಿದ್ದುಪಡಿ ಮಾಡಬೆಕು. ಎಲ್ಲಾ ಇಲಾಖೆಗಳು ಕಡ್ಡಾಯವಾಗಿ ಪ್ರತಿ ವರ್ಷ ಏಪ್ರಿಲ್ ೩೦ ರವೊಳಗೆ ಈ ಯೋಜನಾ ಪಟ್ಟಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಲ್ಲಿಸಬೇಕು. ಇಲಾಖೆಗಳಿಂದ ಯೋಜನಾ ಪಟ್ಟಿಯನ್ನು ಸ್ವೀಕರಿಸಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಅದನ್ನು ಪ್ರಕಟಿಸಬೆಕು. ಜೊತೆಗೆ ತನ್ನ ಅಂತರ್ಜಾಲಕ್ಕು ಅದನ್ನು ಸೇರಿಸಿ ಪ್ರದರ್ಶಿಸಬೇಕು.

## ೮. ಸಂಪನ್ಮೂಲ ನಿರ್ವಹಣೆ ಮತ್ತು ಅನುಷ್ಠಾನ

೮.೧. ಕಾರ್ಯನೀತಿಯನ್ನು ಅನುಷ್ಠಾನಗೊಳಿಸಲು ಸಾಕಷ್ಟು ಹಣಕಾಸು, ಮಾನವ ಮತ್ತು ಸಂಪನ್ಮೂಲಗಳ ಲಭ್ಯತೆಯಿರಬೇಕು. ಇವುಗಳನ್ನು ಸಂಬಂಧಪಟ್ಟ ಇಲಾಖೆ, ಹಣಕಾಸು ಸಂಸ್ಥೆ ಮತ್ತು ಬ್ಯಾಂಕು, ಖಾಸಗಿ ವಲಯ, ನಾಗರಿಕ ಸಮಾಜ ಮತ್ತು ಇತರ ಸಂಬಂಧಪಟ್ಟ ಸಂಸ್ಥೆಗಳು ನಿರ್ವಹಣೆ ಮಾಡಬೇಕು.

೮.೨. ಜಂಡರ್ ಆಯವ್ಯ ಪ್ರತದ ಮೂಲಕ ಮಹಿಳೆಯರಿಗೆ ದೊರಕುವ ಅನುಕೂಲ ಮತ್ತು ಅವರಿಗಾಗಿ ಜಾರಿಗೆ ತಂದಿರುವ ಕಾರ್ಯಕ್ರಮಗಳಿಗೆ ಹಂಚಿರುವ ಸಂಪನ್ಮೂಲಗಳನ್ನು ಮಾಪನ ಮಾಡಬೇಕು. ಯೋಜನೆಗಳಿಂದ ಮಹಿಳೆಯರು ಗರಿಷ್ಟ ಲಾಭ ಪಡೆಯುವಂತಾಗಲು ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳಬೇಕು. ಮಹಿಳೆಯರಿಗೆ ಹೆಚ್ಚಿನ ಹಣ ಹಂಚಿಕೆಯಾಗಿಸುವ ಮೂಲಕ ಅಧಿಕ ಪ್ರಮಾಣದ ಸಂಪನ್ಮೂಲ ದೊರಕುವಂತೆ ಕ್ರಮಕೈಗೊಳ್ಳುವುದಷ್ಟೇ ಅಲ್ಲ ಯೋಜನೆಯ ವಿನ್ಯಾಸದಲ್ಲೂ ಸಮರ್ಪಕವಾದ ಬದಲವಣೆ ತರಬೇಕು. ಹೆಚ್ಚಿನ ಹಣ ಹರಿದು ಬರಲು ದಕ್ಷ ವ್ಯವಸ್ಥೆಯನ್ನು ರೂಪಿಸಬೇಕು.

೮.೩. ಸಂಬಂಧಪಟ್ಟ ಇಲಾಖೆಗಳು ಈಗಾಗಲೆ ತಯಾರಿಸಿರುವ ಕಾರ್ಯನೀತಿಯನ್ನು ಅಭಿವೃದ್ಧಿಪಡಿಸಬೆಕು ಮತ್ತು ಅದನ್ನು ಪ್ರೋತ್ಸಾಹಿಸಲು ಸಾಕಷ್ಟು ಸಂಪನ್ಮೂಲಗಳು ಹಂಚಿಕೆಯಾಗಬೇಕು.

೮.೪. ಕಾರ್ಯಕ್ಷೇತ್ರದ ಹಂತದಲ್ಲಿ ಆರೋಗ್ಯ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಸಿಂಬ್ಬಂದಿ ಹಾಗು ಗ್ರಾಮ ಮಟ್ಟದ ಕಾರ್ಯಕರ್ತರು ಒಗ್ಗೂಡಿ ಕೆಲಸ ಮಾಡುವಂತಾಗಬೇಕು.

೮.೫. ಸೂಕ್ತ ಆರ್ಥಿಕ ನೀತಿಯ ಮೂಲಕ ಬ್ಯಾಂಕ್ ಮತ್ತು ಹಣಕಾಸಿನ ಸಂಸ್ಥೆಗಳ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸಬೇಕು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಹೊಸ ಸಂಸ್ಥೆಗಳನ್ನು ಹುಟ್ಟುಹಾಕಬೇಕು.

೮.೬. ೧೧ನೇ ಪಂಚವಾರ್ಷಿಕ ಯೋಜನೆಯಲ್ಲಿ 'ಮಹಿಳಾ ಘಟಕ ಯೋಜನೆ'ಯ ಕಾರ್ಯ ತಂತ್ರವನ್ನು ಅಳವಡಿಸಿಕೊಳ್ಳಲಾಗಿತ್ತು. ಅದರಲ್ಲಿ ಎಲ್ಲಾ ಇಲಾಖೆಗಳ ಯೋಜನೆಗಳ ಲಾಭ/ಹಣ ಶೇ.೩೦ ಕ್ಕಿಂತ ಕಡಿಮೆಯಿಲ್ಲದಂತೆ

ಮಹಿಳೆಯರಿಗೆ ಹೋಗುವಂತೆ ನಿಯಮ ಮಾಡಲಾಗಿದೆ. ಈ ಯೋಜನೆಯು ಪರಿಣಾಮಕಾರಿಯಾಗಿ ಜಾರಿಗೊಂಡರೆ ಎಲ್ಲಾ ಸಂಬಂಧಪಟ್ಟ ವಲಯಗಳಲ್ಲಿ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಅಗತ್ಯ ಹಾಗು ಆಸಕ್ತಿಗಳನ್ನು ಪೂರೈಸಲು ಸಾಧ್ಯವಾಗುತ್ತದೆ. ಉನ್ನತ ಸಂಸ್ಥೆಯಾದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ರಾಜ್ಯ ಯೋಜನಾ ಮಂಡಳಿಯ ಸಹಯೋಗದೊಂದಿಗೆ ಎಲ್ಲಾ ಇಲಾಖೆಗಳ ಘಟಕ ಯೋಜನೆಯ ಮೇಲ್ವಿಚಾರಣೆ ಮಾಡುತ್ತಾ ನಿರಂತರವಾಗಿ ಅವುಗಳ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಪ್ರಗತಿಯನ್ನು ಸಮೀಕ್ಷೆ ಮಾಡಬೇಕು.

೮.೭. ಮಹಿಳಾ ಅಭಿವೃದ್ಧಿ ಕಾರ್ಯಕ್ರಮ ಮತ್ತು ಯೋಜನೆಗಳನ್ನು ಬೆಂಬಲಿಸಲು ಖಾಸಗಿ ವಲಯದ ಬಂಡವಾಳ ಹರಿದು ಬರುವಂತೆ ಪ್ರಯತ್ನ ಮಾಡಲಾಗುವುದು. ಕರ್ನಾಟಕದಲ್ಲಿ ವಿವಿಧ ಕಂಪನಿಗಳ ಕಾರ್ಪೊರೇಟಿನ ಸಾಮಾಜಿಕ ಜವಬ್ದಾರಿ ನಿಧಿಯಲ್ಲಿ ಶೇ.೫೦ರಷ್ಟು ಹಣವು ಮಹಿಳೆಯರಿಗೆ ತಲುಪುವಂತೆ ಮಾಡಲಾಗುವುದು.

೮.೮. ಖಾಸಗಿ ವಲಯದ ಕಂಪನಿಗಳು ತಮ್ಮ ವಾರ್ಷಿಕ ವರದಿಯಲ್ಲಿ ಮಹಿಳೆಯರಿಗೋಸ್ಕರ ಎಷ್ಟು ಹಣ ಖರ್ಚು ಮಾಡಿವೆ ಮತ್ತು ಯಾವ ರೀತಿ ಮಹಿಳಾ ಪರ ಕಾರ್ಯಗಳನ್ನು ಕೈಗೊಂಡಿವೆ ಅನ್ನುವುದನ್ನು ವಿವರವಾಗಿ ತಿಳಿಸಬೇಕೆಂದು ಸರ್ಕಾರವು ಅವುಗಳ ಮೇಲೆ ಒತ್ತಡ ತರಬೇಕು.

**ಹೇಮಲತಾ ಎಚ್.ಎಮ್.**
**ಮಹಿಳಾ ಅಧ್ಯಯನ ವಿಭಾಗ**
**ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ**
**ಸ್ನಾತಕೋತ್ತರ ಮತ್ತು ಸಂಶೋಧನಾ ವಿಸ್ತರಣಾ ಕೇಂದ್ರ**
**ಬಿ.ಹೊಸೂರು ಕಾಲೋನಿ**
**ಮಂಡ್ಯ.**